ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 3 ಬುಧವಾರ 2022

ಸಂಪುಟ: 43 | ಸಂಚಿಕೆ: 109 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ
Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

43

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ವರುಣಾರ್ಭಟಕ್ಕೆ ನಲುಗಿದ ಮಂಡ್ಯ

- ರಾತ್ರಿಯಿಡೀ ಸುರಿದ ಧಾರಾಕಾರ ಮಳೆಗೆ ತತ್ತರಿಸಿದ ಮಂಡ್ಯ ಜನತೆ
- ಮನೆಗಳಿಗೆ ನುಗ್ಗಿದ ನೀರು; ಸಾಕಷ್ಟು ಅವಾಂತರ ಸೃಷ್ಟಿ
- ನದಿಯಂತಾದ ರಸ್ತೆಗಳು, ಕೆಲವೆಡೆ ವಾಹನಗಳು ಮುಳುಗಡೆ



ಮಂಡ್ಯ, ಆ.2– ಸೋಮವಾರ ರಾತ್ರಿ ಸುರಿದ ಕುಂಭದ್ರೋಣ ಮಳೆಗೆ ಸಕ್ಕರೆ ನಾಡು ಮಂಡ್ಯ ಅಕ್ಷರಶಃ ನಲುಗಿ ಹೋಗಿದ್ದು, ನಗರದಲ್ಲಿ ಜನಜೀವನ ಅಸ್ತವ್ಯಸ್ತಗೊಂಡಿತ್ತು. ಜಿಲ್ಲೆಯ ವಿವಿಧೆಡೆ ಮನೆಗಳಿಗೆ ನೀರು ನುಗ್ಗಿದ್ದು, ಜನರು ತತ್ತರಿಸಿದ್ದಾರೆ. ಮಂಡ್ಯದಲ್ಲಿ ಒಂದೇ ದಿನ ದಾಖಲೆಯ ಮಳೆಯಾಗಿದೆ. ನಿನ್ನೆ (ಸೋಮವಾರ) ರಾತ್ರಿ ಮಂಡ್ಯ ಜಿಲ್ಲೆಯಾದ್ಯಂತ 61.0 ಮಿಮೀ ಮಳೆಯಾಗಿದೆ. ನಗರದ ಹಲವೆಡೆ ಮನೆಗಳಿಗೆ ನೀರು ನುಗ್ಗಿ ದವಸ ಧಾನ್ಯ, ಬಟ್ಟೆಗಳು, ಪಾತ್ರೆ ಪಗಡೆಗಳು, ಎಲೆಕ್ಟ್ರಾನಿಕ್ಸ್ ವಸ್ತುಗಳು ಸಂಪೂರ್ಣ ಹಾಳಾಗಿವೆ. ಅಲ್ಲದೆ, ಕುಟುಂಬಸ್ಥರು ಮಳೆಯ ನೀರನ್ನು ಮನೆಯಿಂದ ಹೊರ ಹಾಕುವುದರಲ್ಲೇ ಇಡೀ ರಾತ್ರಿ ▶ 8ನೇ ಪುಟಕ್ಕೆ



ಒಡೆದ ಬೂದನೂರು ಕೆರೆ ಏರಿ; ಮೈಸೂರು–ಬೆಂಗಳೂರು ರಸ್ತೆ ಬಂದ್!



ಮಂಡ್ಯ: ಜಿಲ್ಲೆಯಲ್ಲಿ ಸೋಮವಾರ ರಾತ್ರಿ ಸುರಿದ ಭಾರಿ ಮಳೆಯಿಂದಾಗಿ ತಾಲೂಕಿನ ಬೂದನೂರು ಕೆರೆ ತುಂಬಿ ಹರಿದ ಪರಿಣಾಮ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ಸಂಪೂರ್ಣ ಜಲಾವೃತಗೊಂಡು ವಾಹನ ಸಂಚಾರ ಸ್ಥಗಿತಗೊಂಡಿತ್ತು. ರಸ್ತೆಯಲ್ಲಿ ಹಲವು ಅಡಿ ನೀರು ನಿಂತಿದ್ದರಿಂದ ವಾಹನಗಳ ಸಂಚಾರಕ್ಕೆ ▶ 8ನೇ ಪುಟಕ್ಕೆ

ಕೊಡಗಲ್ಲಿ ಬೊಬ್ಬಿರಿಯುತ್ತಿರುವ ಮಳೆ

ತತ್ತರಿಸಿದ ಸಂಪಾಜೆ, ಕೊಯನಾಡು, ಚೆಂಬು, ದಬ್ಬಡ್ಕ ಗ್ರಾಮಸ್ಥರು

- ಸೇತುವೆಗೆ ಹಾನಿ
- ಭೂ ಕುಸಿತ
- ಹೆದ್ದಾರಿ ಬಿರುಕು
- ನದಿಗಳಲ್ಲಿ ಪ್ರವಾಹ, ತೇಲಿ ಹೋದ ಕಾರು, ಕೊಚ್ಚಿಹೋದ ಕೋಳಿಗಳು
- ಮುಳುಗಿದ ಹತ್ತಾರು ಮನೆಗಳು

ಮಡಿಕೇರಿ, ಆ.2– ಕಳೆದ ಕೆಲ ದಿನಗಳಿಂದ ಸ್ವಲ್ಪ ಬಿಡುವು ನೀಡಿದ್ದ ವರುಣ ಮತ್ತೆ ಆಗಸ್ಟ್ 1ರ ರಾತ್ರಿಯಿಂದ ಬೊಬ್ಬಿರಿಯಲು ಪ್ರಾರಂಭಿಸಿದ್ದು, ಜಿಲ್ಲೆಯ ಪಶ್ಚಿಮ ಘಟ್ಟ ಸಾಲಿನಲ್ಲಿ ತನ್ನ ಆರ್ಭಟ ತೋರಿದೆ. ಜುಲೈ ತಿಂಗಳಲ್ಲಿ ಸರಣಿ ಲಘು ಭೂ ಕಂಪನಗಳಿಗೆ ಸಾಕ್ಷಿಯಾಗಿದ್ದ ಸಂಪಾಜೆ, ಕೊಯನಾಡು, ಚೆಂಬು, ದಬ್ಬಡ್ಕ ಗ್ರಾಮದಲ್ಲಿ ಭಾರೀ ಮಳೆ ಸುರಿದ ಪರಿಣಾಮ ಅಲ್ಲಿನ ಜನರು ತತ್ತರಿಸಿದ್ದಾರೆ.

ಭಾರೀ ಮಳೆಯಿಂದಾಗಿ ದಬ್ಬಡ್ಕ ಗ್ರಾಮದಲ್ಲಿ ಸಂಪರ್ಕ ಸೇತುವೆಗೆ ಹಾನಿ ಸಂಭವಿಸಿದೆ. ದಬ್ಬಡ್ಕ ಗ್ರಾಮವನ್ನು ಸಂಪಾಜೆಯೊಂದಿಗೆ ಬೆಸೆಯುವ ಸೇತುವೆಯ ತಡೆಗೋಡೆ ಪಕ್ಕದಲ್ಲಿದ್ದ ಮಣ್ಣು ನದಿ ಪ್ರವಾಹ ನೀರಿನಿಂದ ಕೊಚ್ಚಿ ಹೋಗಿದ್ದು, ಗ್ರಾಮ ಜಲ ದಿಗ್ಬಂಧನಕ್ಕೆ ಒಳಗಾಗಿದೆ. ದಬ್ಬಡ್ಕ ಗ್ರಾಮದಿಂದ ಸಂಪಾಜೆಗೆ ಸಂಪರ್ಕ ಕಡಿತವಾಗಿದ್ದು, ಈ ಸೇತುವೆಯ ಮೇಲೆ 2 ಅಡಿ ನದಿ ನೀರು ಹರಿಯುತ್ತಿದೆ. ಸಂಪಾಜೆ ಸಮೀಪದ ಕಳ್ಳಾಲ ಎಂಬ ಪ್ರದೇಶದಲ್ಲಿ ಅಲ್ಪ ಪ್ರಮಾಣದ ಭೂ ಕುಸಿತವಾಗಿದ್ದು, ಗ್ರಾಮದ ರಸ್ತೆ ಸಂಪರ್ಕ ▶ 8ನೇ ಪುಟಕ್ಕೆ




ಸಂಪಾಜೆ ಗ್ರಾಮದ ದಬ್ಬಡ್ಕ ಸೇತುವೆ ನದಿ ಪ್ರವಾಹದಲ್ಲಿ ಮುಳುಗಿರುವುದು.



ಭಟ್ಕಳದಲ್ಲಿ ಮನೆ ಮೇಲೆ ಗುಡ್ಡ ಕುಸಿತ: ನಾಲ್ವರು ಜೀವಂತ ಸಮಾಧಿ

ಭಟ್ಕಳ: ಉತ್ತರ ಕನ್ನಡದಲ್ಲಿ ಎಡೆಬಿಡದೆ ಸುರಿದ ಮಳೆಯಿಂದಾಗಿ ಮುಟ್ಟಳ್ಳಿಯ ಮನೆಯೊಂದರ ಮೇಲೆ ಗುಡ್ಡ ಕುಸಿದಿದ್ದು ಅವಶೇಷಗಳಡಿಯಲ್ಲಿ ಸಿಲುಕಿದ್ದ ನಾಲ್ವರ ಮೃತದೇಹಗಳನ್ನು ಎನ್‌ಡಿಆರ್‌ಎಫ್ ಸಿಬ್ಬಂದಿ ಹೊರ ತೆಗೆದಿದ್ದಾರೆ. ಅವಶೇಷಗಳ ಅಡಿ ಸಿಲುಕಿ ಮೃತಪಟ್ಟವರನ್ನು ಲಕ್ಷ್ಮೀನಾರಾಯಣ ನಾಯ್ಕ್, ಅನಂತ ನಾಯ್ಕ್, ▶ 5ನೇ ಪುಟಕ್ಕೆ

ಮಳೆ ಹಾನಿಗೆ ತಕ್ಷಣ ಪರಿಹಾರ ನೀಡಿ



ಬೆಂಗಳೂರು, ಆ.2–ರಾಜ್ಯದಲ್ಲಿ ಸುರಿಯುತ್ತಿರುವ ಭಾರೀ ಮಳೆಯಿಂದಾಗಿ ಹಾನಿಗೊಳಗಾದ ಮನೆಗಳಿಗೆ ತಕ್ಷಣವೇ ಪರಿಹಾರ ಒದಗಿಸಿ ಹಾಗೂ ಕೆರೆ ಕಟ್ಟೆಗಳು ಒಡೆಯದಂತೆ ನಿಗಾ ವಹಿಸುವಂತೆ ಜಿಲ್ಲಾಧಿಕಾರಿಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದರು.

ಮಂಗಳವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಭಾರೀ ಮಳೆಯಿಂದ ಹಾನಿಗೊಳಗಾದ 11 ಜಿಲ್ಲೆಗಳ ಜಿಲ್ಲಾಧಿಕಾರಿಗಳೊಂದಿಗೆ ವೀಡಿಯೋ ಸಂವಾದ ನಡೆಸಿದರು. ಈ ವೇಳೆ ಕಳೆದ ಎರಡು ತಿಂಗಳಲ್ಲಿ ಮಳೆಯಿಂದ ಉಂಟಾದ ಹಾನಿ ಕುರಿತು ಜಿಲ್ಲಾಧಿಕಾರಿಗಳಿಗೆ ಬೊಮ್ಮಾಯಿ ಮಾಹಿತಿ ಪಡೆದರು. ನಂತರ ಮಳೆ ಹಾನಿಗೆ ತುತ್ತಾದ ಜನರ ನೆರವಿಗೆ ಧಾವಿಸಿ ಎಂದು ಅಧಿಕಾರಿಗಳಿಂದ ಸೂಚಿಸಿದರು.

ಮಳೆಯಿಂದ ಉಂಟಾದ ಹಾನಿ ಎಷ್ಟು: ರಾಜ್ಯದಲ್ಲಿ ಈವರೆಗೆ ಸುರಿದ ಹಾಗೂ ಸದ್ಯ ಸುರಿಯುತ್ತಿರುವ ಮಳೆಯಿಂದಾಗಿ ಒಟ್ಟು 3,499 ಹೆಕ್ಟೇರ್ ಬೆಳೆ ನಾಶವಾಗಿದೆ. 2,057 ಹೆಕ್ಟೇರ್ ತೋಟಗಾರಿಕಾ ಬೆಳೆ ಹಾಳಾಗಿದ್ದು ರೈತರು ಕಂಗಾಲಾಗಿದ್ದಾರೆ. ಸುಮಾರು 2,430 ಮನೆಗಳು ಸಂಪೂರ್ಣ ಹಾನಿಗೊಂಡಿದ್ದರೆ, 4,378 ಮನೆಗಳು ಭಾಗಶಃ ಹಾನಿಗೆ ತುತ್ತಾಗಿವೆ. ಭಾರಿ ಮಳೆಗೆ ಕರಾವಳಿ, ಮಲೆನಾಡು, ಉತ್ತರ ಒಳನಾಡು ಸೇರಿದಂತೆ ರಾಜ್ಯದಲ್ಲಿ ಒಟ್ಟು 629 ಸೇತುವೆಗಳಿಗೆ ಹಾನಿಯಾಗಿದ್ದು, 3,264 ಶಾಲಾ ಕಟ್ಟಡಗಳು ಕುಸಿದು ಬಿದ್ದಿವೆ. 29 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡಗಳಿಗೂ ಮಳೆಯಿಂದ ಧಕ್ಕೆ ಉಂಟಾಗಿದೆ. 11,796 ವಿದ್ಯುತ್ ಕಂಬಗಳು ನೆಲಕ್ಕುರುಳಿದರೆ 759 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು ನಿರುಪಯುಕ್ತವಾಗಿವೆ ಎಂದು ಜಿಲ್ಲಾಧಿಕಾರಿಗಳು ಮುಖ್ಯಮಂತ್ರಿಗಳ ಗಮನಕ್ಕೆ ತಂದರು.

ಮಳೆಗೆ 39 ಮಂದಿ ಸಾವು: ಈವರೆಗೆ ಮಳೆ ಹಾಗೂ ನೆರೆ ಪ್ರವಾಹದಿಂದ 39 ಮಂದಿ ಸಾವನ್ನಪ್ಪಿದ್ದು, 99 ಪ್ರಾಣಿಗಳು ಜೀವ ಬಿಡುವ ಮೂಲಕ ಅಪಾರ ಸಾವು ನೋವು ಉಂಟಾಗಿದೆ. ಜೋರು ಮಳೆ ನೀರು ಹರಿದು, ರಸ್ತೆಗಳಲ್ಲೇ ನಿಂತ ಪರಿಣಾಮ ರಾಜ್ಯದಲ್ಲಿ 1,730 ಕಿ.ಮೀ ರಸ್ತೆ ಹಾನಿಗೀಡಾಗಿದೆ. ▶ 5ನೇ ಪುಟಕ್ಕೆ

ಕೆರೆ ಕಟ್ಟೆ ಬಗ್ಗೆ ಎಚ್ಚರ

ವರುಣನ ಆರ್ಭಟದಿಂದ ತತ್ತರಿಸಿರುವ ಜಿಲ್ಲೆಗಳ ಡಿಸಿಗಳಿಗೆ ಸಿಎಂ ಬೊಮ್ಮಾಯಿ ಸೂಚನೆ

ಅಲ್‌ಕೈದಾ ಉಗ್ರ ಸಂಘಟನೆ ಮುಖ್ಯಸ್ಥ ಆಯ್ಮಾನ್ ಅಲ್ ಜವಾಹಿರಿ ಹತ್ಯೆ

9/11 ದಾಳಿಯ ಮಾಸ್ಟರ್ ಮೈಂಡ್ 21 ವರ್ಷದ ನಂತರ ಬಲಿ



ಕಾಬುಲ್:ವಿಶ್ವದ ಮೋಸ್ಟ್ ವಾಂಟೆಡ್ ಭಯೋತ್ಪಾದಕರಲ್ಲಿ ಒಬ್ಬನಾಗಿದ್ದ, ಸೆ.11, 2001ರ ಅಮೆರಿಕಾ ವಿಶ್ವವಾಣಿಜ್ಯ ಸಂಸ್ಥೆ ಮೇಲಿನ ದಾಳಿಯ ಮಾಸ್ಟರ್‌ಮೈಂಡ್ ಅಲ್–ಕೈದಾ ಮುಖ್ಯಸ್ಥ ಆಯ್ಮಾನ್ ಅಲ್–ಜವಾಹಿರಿಯನ್ನು ಅಮೆರಿಕ ಹತ್ಯೆ ಮಾಡಿದೆ.

9/11 ದಾಳಿ ನಡೆದ ಬರೋಬ್ಬರಿ 21 ವರ್ಷಗಳ ಬಳಿಕ ಅಫ್ಘಾನಿಸ್ತಾನದ ರಾಜಧಾನಿ ಕಾಬೂಲ್‌ನಲ್ಲಿ ನಡೆಸಿದ ಡ್ರೋನ್ ದಾಳಿಯಲ್ಲಿ ಜವಾಹಿರಿಯನ್ನು ಕೊಲ್ಲುವಲ್ಲಿ ಅಮೆರಿಕ ಯಶಸ್ವಿಯಾಗಿದೆ ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಘೋಷಿಸಿದ್ದಾರೆ. ಸುದ್ದಿ ವಾಹಿನಿಯಲ್ಲಿ ಮಾತನಾಡಿದ ಬೈಡನ್, ಶನಿವಾರ ಕಾಬೂಲ್‌ನಲ್ಲಿ ನಡೆಸಲಾದ ದಾಳಿಯಲ್ಲಿ ಜವಾಹಿರಿ ಹತನಾಗಿದ್ದಾನೆ ಎಂದು ಹೇಳಿದ್ದಾರೆ. ಆತನ ವಿರುದ್ಧದ ಕಾರ್ಯಾಚರಣೆಗೆ ಅಂತಿಮ ಅನುಮೋದನೆ ನೀಡಿದ್ದೆ. ದಾಳಿಯಲ್ಲಿ ನಾಗರಿಕರ ಹತ್ಯೆಯಾಗಿಲ್ಲ. ಇದೀಗ ನ್ಯಾಯ ಒದಗಿಸಲಾಗಿದೆ. ಉಗ್ರ ಸಂಘಟನೆ ನಾಯಕ ಇನ್ನಿಲ್ಲ ಎಂದು ಬೈಡನ್ ಹೇಳಿದ್ದಾರೆ. ▶ 8ನೇ ಪುಟಕ್ಕೆ

ಬೇಟೆಗಾರರ ಬೇಟೆಗಾರ ಪ್ರಖ್ಯಾತಿಯ ಬಂಡೀಪುರ 'ರಾಣಾ' ಇನ್ನಿಲ್ಲ

ಕರ್ನಾಟಕ ಅರಣ್ಯ ಇಲಾಖೆಯ ಶ್ವಾನದಳದ ಮೊದಲ ಶ್ವಾನವೆಂಬ ಹೆಗ್ಗಳಿಕೆಗೆ ಪಾತ್ರನಾಗಿದ್ದ



ಸೋಮಶೇಖರ್

ಗುಂಡ್ಲುಪೇಟೆ, ಆ.2–ತಾಲೂಕಿನ ಬಂಡೀಪುರ ರಾಷ್ಟ್ರೀಯ ಉದ್ಯಾನವನದ ಬೇಟೆಗಾರರ ಬೇಟೆಗಾರ ಎಂದೇ ಪ್ರಖ್ಯಾತಿ ಪಡೆದಿದ್ದ ಸಾಹಸಿ ಶ್ವಾನ ರಾಣಾ(9) ವಯೋಸಹಜ ಅನಾರೋಗ್ಯದಿಂದ ಮಂಗಳವಾರ ಬೆಳಗ್ಗೆ ಮೃತಪಟ್ಟಿದೆ.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯಲ್ಲಿ ಕಳ್ಳ ಬೇಟೆಯೂ ಸೇರಿದಂತೆ




ಅಕ್ರಮ ಚಟುವಟಿಕೆಗಳನ್ನು ತಡೆಗಟ್ಟಲು, ವನ್ಯಜೀವಿ ಬೇಟೆಗಾರರನ್ನು ನಿಗ್ರಹಿಸಲು ಹಾಗೂ ನಾನಾ ಅರಣ್ಯ ಅಪರಾಧಗಳನ್ನು ಭೇದಿಸುವುದಕ್ಕಾಗಿ ಸದಾ ಸಜ್ಜಾಗಿರುತ್ತಿದ್ದ ಶ್ವಾನ ದಳದ ಜರ್ಮನ್ ಶಫರ್ಡ್ ತಳಿಯ ರಾಣಾ 2013ರ ಡಿ.28ರಂದು ಜನಿಸಿತ್ತು. ರಾಣಾನಿಗೆ ಭೂಪಾಲ್‌ನ ವಿಶೇಷ ಸಶಸ್ತ್ರ ಪಡೆಯಲ್ಲಿ ತರಬೇತಿ ನೀಡಿ, 2015ರ ಜೂನ್‌ನಲ್ಲಿ ಅರಣ್ಯ ಇಲಾಖೆಗೆ ನಿಯೋಜಿಸಿಕೊಳ್ಳಲಾಗಿತ್ತು. ಕರ್ನಾಟಕ ಅರಣ್ಯ ಇಲಾಖೆಯ ಶ್ವಾನದಳದ ಮೊದಲ ಶ್ವಾನವೆಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದ ▶ 8ನೇ ಪುಟಕ್ಕೆ

ಕಾಡುಗಳ್ಳರಿಗೆ ಸಿಂಹಸ್ವಪ್ನವಾಗಿದ್ದ 'ರಾಣಾ'ನ ಯಶೋಗಾಥೆ – ಪುಟ 7

ದಾವಣಗೆರೆಯಲ್ಲಿ ಇಂದು ಸಿದ್ದರಾಮಯ್ಯ ಅಮೃತ ಮಹೋತ್ಸವ

- ಸಜ್ಜಾಗಿದೆ 12 ಅಡಿ ಎತ್ತರದ ಬೃಹತ್ ವೇದಿಕೆ
- ಸಿದ್ದರಾಮಯ್ಯ, ರಾಹುಲ್ ಗಾಂಧಿ ಬೃಹತ್ ಕಟೌಟ್
- ಎಂಟತ್ತು ಲಕ್ಷ ಜನರು ಸೇರುವ ನಿರೀಕ್ಷೆ; 6 ಲಕ್ಷ ಆಸನ ವ್ಯವಸ್ಥೆ
- 7000 ಬಸ್ ಜೊತೆಗೆ ಇನ್ನಿತರೆ ವಾಹನಗಳ ಅನುಕೂಲ
- ಎಲ್ಲರಿಗೂ ಭೂರಿ ಭೋಜನ ವ್ಯವಸ್ಥೆ; ಲಕ್ಷಾಂತರ ಮೈಸೂರ್‌ಪಾಕ್ ರೆಡಿ



ದಾವಣಗೆರೆ, ಆ.2– ವಿರೋಧ ಪಕ್ಷದ ನಾಯಕ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 75ನೇ ಜನ್ಮದಿನದ ಅಮೃತ ಮಹೋತ್ಸವ ಆಚರಣೆಗೆ ದಾವಣಗೆರೆ ಸಜ್ಜಾಗಿದ್ದು, ಬೃಹತ್ ವೇದಿಕೆ ಸಿದ್ಧಗೊಂಡಿದೆ. ಎಲ್ಲೆಡೆ ಸಿದ್ದರಾಮಯ್ಯ, ರಾಹುಲ್‌ಗಾಂಧಿ ಹಾಗೂ ವಿವಿಧ ಕಾಂಗ್ರೆಸ್ ನಾಯಕರ ಕಟೌಟ್‌ಗಳು ನಗರಾದ್ಯಂತ ರಾರಾಜಿಸುತ್ತಿವೆ. ಇಡೀ ನಗರದಲ್ಲಿ ಹಬ್ಬದ ವಾತಾವರಣ ನೆಲೆಗೊಂಡಿದೆ. ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿ ನೀಡಿದ ನಾನಾ ಜನಪರ ಯೋಜನೆಗಳ ಬೃಹತ್ ಫ್ಲೆಕ್ಸ್‌ಗಳು ಎಲ್ಲೆಡೆ ಹಾಕಲಾಗಿದೆ.

ದಾವಣಗೆರೆಯ ಶಾಮನೂರು ಪ್ಯಾಲೇಸ್ ಮೈದಾನದಲ್ಲಿ ಬೃಹತ್ ವೇದಿಕೆ ನಿರ್ಮಿಸಲಾಗಿದ್ದು, ಎಂಟತ್ತು ಲಕ್ಷ ಜನ ಸೇರುವ ನಿರೀಕ್ಷೆ ಇದೆ. ಮಾಜಿ ಸಚಿವ ಶಾಮನೂರು ಶಿವಶಂಕರಪ್ಪ ಅವರ ಪುತ್ರ, ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ನೇತೃತ್ವ ಹಾಗೂ ಚಿಂತನೆಯಂತೆ ಜರ್ಮನ್ ಮಾದರಿ ವೇದಿಕೆಯನ್ನು ಸಿದ್ಧಪಡಿಸಿದ್ದು, ಒಂದು ನಿಮಿಷದಲ್ಲಿ 700ಕ್ಕೂ ಹೆಚ್ಚು ಮಂದಿಗೆ ಊಟ ಬಡಿಸುವ ವ್ಯವಸ್ಥೆಯನ್ನೂ ಮಾಡಲಾಗಿದೆ. ನೆಲದಿಂದ 12 ಅಡಿ ಎತ್ತರದ ಮುಖ್ಯ ವೇದಿಕೆ, ಇನ್ನೊಂದು ಮನರಂಜನಾ ವೇದಿಕೆ, ಮತ್ತೊಂದು ವಿಐಪಿಗಳಿಗಾಗಿ ನಿರ್ಮಿಸಲಾಗಿದೆ. ಅಮೃತ ಮಹೋತ್ಸವ ಸಮಿತಿಯ ಮುಖಂಡರಾದ ಬಸವರಾಜ ರಾಯರೆಡ್ಡಿ, ಅಶೋಕ್ ಪಟ್ಟಣ, ಪ್ರಕಾಶ್ ರಾಥೋಡ್ ಇನ್ನಿತರರು ವೇದಿಕೆಯ ಅಂತಿಮ ಹಂತದ ಸಿದ್ಧತೆಗಳನ್ನು ಪರಿಶೀಲನೆ ನಡೆಸಿದರು. ಬೃಹತ್ ವೇದಿಕೆ ಮುಂಭಾಗ ಸಿದ್ದರಾಮಯ್ಯ, ▶ 5ನೇ ಪುಟಕ್ಕೆ



ಮಂಗಳವಾರ ಸರಿರಾತ್ರಿ ದಾವಣಗೆರೆಯಲ್ಲಿ ಕೇಕ್ ಕತ್ತರಿಸಿ, ಸಿದ್ದರಾಮಯ್ಯ ಹುಟ್ಟುಹಬ್ಬ ಆಚರಿಸಲಾಯಿತು.

ಮೈಸೂರಿಂದ 25 ಸಾವಿರಕ್ಕೂ ಅಧಿಕ ಮಂದಿ

ಮೈಸೂರು, ಆ.2(ಎಸ್‌ಬಿಡಿ)– ಬೆಣ್ಣೆ ನಗರಿ ದಾವಣಗೆರೆಯಲ್ಲಿ ಬುಧವಾರ ಏರ್ಪಡಿಸಿರುವ ಮೈಸೂರು ಸುಪುತ್ರ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಜನ್ಮದಿನ ಅಮೃತಮಹೋತ್ಸವಕ್ಕೆ ತವರು ಜಿಲ್ಲೆಯಿಂದ ಸಹಸ್ರಾರು ಮಂದಿ ಪ್ರಯಾಣ ಬೆಳೆಸಿದರು. ಜಿಲ್ಲೆಯ 11 ವಿಧಾನಸಭಾ ಕ್ಷೇತ್ರದಿಂದಲೂ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು, ಸಿದ್ದರಾಮಯ್ಯನವರ ಅಭಿಮಾನಿಗಳು, ಹಿತೈಷಿಗಳು, ಬೆಂಬಲಿಗರು ಮಂಗಳವಾರವೇ ದಾವಣಗೆರೆಯತ್ತ ತೆರಳಿದರು. ಮೈಸೂರು ಭಾಗದ ಕಾಂಗ್ರೆಸ್ ಶಾಸಕರು, ವಿಧಾನಪರಿಷತ್ ಸದಸ್ಯರು ಸೇರಿದಂತೆ ಪಕ್ಷದ ಪದಾಧಿಕಾರಿಗಳು ಇಂದು ಮಧ್ಯಾಹ್ನವೇ ತಮ್ಮ ಕಾರುಗಳ ಮೂಲಕ ಪ್ರಯಾಣ ಬೆಳೆಸಿದರೆ, ರಾತ್ರಿ ವೇಳೆಗೆ ನೂರಾರು ಬಸ್ಸು ಇನ್ನಿತರೆ ▶ 5ನೇ ಪುಟಕ್ಕೆ

ಬಾಗಲಕೋಟೆ ಬಳಿ ಅಪಘಾತ; ಓರ್ವ ಸಾವು

ಸಿದ್ದರಾಮಯ್ಯ ಸಂತಾಪ

ಬಾಗಲಕೋಟೆ: ಸಿದ್ದರಾಮಯ್ಯನವರ ಜನ್ಮದಿನ ಅಮೃತಮಹೋತ್ಸವಕ್ಕೆ ತೆರಳುತ್ತಿದ್ದಾಗ ಅಪಘಾತ ಸಂಭವಿಸಿ, ಓರ್ವ ಮೃತಪಟ್ಟಿರುವ ಘಟನೆ ಜಿಲ್ಲೆಯ ಹೂಲಗೇರಿ ಕ್ರಾಸ್ ಬಳಿ ನಡೆದಿದೆ. ಮುಧೋಳ ತಾಲೂಕಿನ ಹಿರೇ ಆಲಗುಂಡಿ ಹಾಗೂ ಚಿಕ್ಕ ಆಲಗುಂಡಿ ಗ್ರಾಮದವರು ಕ್ರೂಷರ್ ವಾಹನದಲ್ಲಿ ಮಂಗಳವಾರ ಸಂಜೆ ದಾವಣಗೆರೆಯತ್ತ ಹೊರಟಿದ್ದರು. ಈ ವಾಹನ ಹೂಲಗೇರಿ ಕ್ರಾಸ್ ಬಳಿ ಹಾಲಿನ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ಚಿಕ್ಕ ಆಲಗುಂಡಿಯ ಪ್ರಕಾಶ್ ಬಡಿಗೇರ ಮೃತಪಟ್ಟಿದ್ದು, ಐದಾರು ಮಂದಿ ಗಾಯಗೊಂಡಿದ್ದಾರೆ. ಈ ಘಟನೆ ಬಗ್ಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಟ್ವೀಟ್ ಮೂಲಕ ಸಂತಾಪ ಸೂಚಿಸಿದ್ದಾರೆ.


ಮೃತ ಪ್ರಕಾಶ್ ಅವರ ಕುಟುಂಬದ ಶೋಕದಲ್ಲಿ ನಾನೂ ಭಾಗಿಯಾಗಿದ್ದೇನೆ. ಗಾಯಾಳುಗಳು ಶೀಘ್ರ ಗುಣಮುಖರಾಗಲಿ' ಎಂದು ಪ್ರಾರ್ಥಿಸಿದ್ದಾರೆ.

ಸೋಮವಾರ ಮೈಸೂರು ಜಿಲ್ಲೆಯಲ್ಲಿ 25.9 ಮಿ.ಮೀ. ಮಳೆ

ಧರೆಗುರುಳಿದ ಮರಗಳು, ಮನೆಗೆ ನುಗ್ಗಿದ ನೀರು ಪಂಪ್ ಬಳಸಿ ತೆರವು







ಮೈಸೂರು, ಆ.2– ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ನಿಗಾ ಕೇಂದ್ರ (ಕೆಎಸ್‌ಎನ್‌ಡಿಎಂಸಿ)ದ ಪ್ರಕಾರ ಮೈಸೂರು ಜಿಲ್ಲೆಯಲ್ಲಿ ಸೋಮವಾರ ಸಂಜೆಯಿಂದ ತಡರಾತ್ರಿವರೆಗೆ 25.9 ಮಿ.ಮೀ. ಮಳೆಯಾಗಿದೆ.

ಮೈಸೂರು ಜಿಲ್ಲೆಯಲ್ಲಿ ತಾಲೂಕುವಾರು ಬಿದ್ದ ಮಳೆಯ ಪ್ರಮಾಣ ಇಂತಿದೆ: ಹೆಚ್.ಡಿ.ಕೋಟೆ ತಾಲೂಕಿನಲ್ಲಿ 11.3 ಮಿ.ಮೀ., ಹುಣಸೂರು ತಾಲೂಕಿನಲ್ಲಿ 23.5 ಮಿ.ಮೀ., ಕೆ.ಆರ್.ನಗರ ತಾಲೂಕಿನಲ್ಲಿ 34.6 ಮಿ.ಮೀ., ಮೈಸೂರು ತಾಲೂಕಿನಲ್ಲಿ 36.0 ಮಿ.ಮೀ., ನಂಜನಗೂಡು ತಾಲೂಕಿನಲ್ಲಿ 31.0 ಮಿ.ಮೀ., ಪಿರಿಯಾಪಟ್ಟಣ ತಾಲೂಕಿನಲ್ಲಿ 24.0 ಮಿ.ಮೀ., ತಿ.ನರಸೀಪುರ ತಾಲೂಕಿನಲ್ಲಿ 39.8 ಮಿ.ಮೀ. ಹಾಗೂ ಸರಗೂರು ತಾಲೂಕಿನಲ್ಲಿ 12.7 ಮಿ.ಮೀ. ಮಳೆಯಾಗಿರುವುದಾಗಿ ಮದಿಯಾಗಿದೆ ಈ ಮಧ್ಯೆ ನಾಗನಹಳ್ಳಿ ಸಾವಯವ ಕೃಷಿ ಸಂಶೋಧನಾ ಕೇಂದ್ರದಲ್ಲಿ ಸ್ಥಾಪಿಸಲಾದ ಮಳೆ ಮಾಪಕದಲ್ಲಿ 110.2 ಮಿ.ಮೀ. ಮಳೆ ದಾಖಲಾಗಿದೆ.

ಧರೆಗುರುಳಿದ ಮರಗಳ ತೆರವು: ಸೋಮವಾರ ಸಂಜೆಯಿಂದ ತಡರಾತ್ರಿವರೆಗೆ ಸುರಿದ ಭಾರೀ ಮಳೆಯಿಂದಾಗಿ ಮೈಸೂರಿನ ಹಲವೆಡೆ ಮರಗಳು ಧರೆಗುರುಳಿದವು. ಕಾಳಿದಾಸ ರಸ್ತೆ, ವಿಜಯನಗರ 1ನೇ ಹಂತ, ಬೃಂದಾವನ ಬಡಾವಣೆ, ಮೇಟಗಳ್ಳಿ, ಜೆ.ಸಿ. ಲೇಔಟ್ ಸೇರಿದಂತೆ ಇನ್ನಿತರೆ ಕಡೆಗಳಲ್ಲಿ ಮರಗಳು ಉರುಳಿ ಬಿದ್ದವು. ಮಳೆ ನೀರು ನುಗ್ಗಿ ಹಲವು ಮ್ಯಾನ್‌ಹೋಲ್‌ಗಳು ತೆರೆದುಕೊಂಡು, ಮಳೆ ನೀರಿನೊಂದಿಗೆ ಕೊಳಚೆ ನೀರು ಮನೆಗಳಿಗೆ ನುಗ್ಗಿತ್ತು. ಬನ್ನಿಮಂಟಪ ಸಿ ಲೇಔಟ್‌ನ ಕೆಲ ಮನೆಗಳಿಗೆ ನೀರು ನುಗ್ಗಿತ್ತು. ಅಭಯ 2ರ ತಂಡದ ಶಿವ ನೇತೃತ್ವದ ಸಿಬ್ಬಂದಿ ಹಾಗೂ ಅಭಯ 3ರ ಇರ್ಷಾದ್ ನೇತೃತ್ವದ ಸಿಬ್ಬಂದಿ ಇಡೀ ರಾತ್ರಿ ಕಾರ್ಯಾಚರಣೆ ನಡೆಸಿ ಮರಗಳ ತೆರವು ಕಾರ್ಯ ನಡೆಸಿದರು. ಮನೆಗಳಿಗೆ ನುಗ್ಗಿದ್ದ ನೀರನ್ನು ಪಂಪ್ ಮೂಲಕ ಹೊರ ಹಾಕುವ ಕಾರ್ಯ ಇಂದು ಇಡೀ ದಿನ ನಡೆಯಿತು.

ಇನ್ನೂ ಐದು ದಿನ ಭಾರೀ ಮಳೆ ಮುನ್ಸೂಚನೆ

ಮೈಸೂರು: ಹವಾಮಾನ ಮುನ್ಸೂಚನೆ ಪ್ರಕಾರ ಆ.3ರಿಂದ 7ರವರೆಗೆ ಮೈಸೂರು, ಕೊಡಗು, ಮಂಡ್ಯ, ಚಾಮರಾಜನಗರ ಜಿಲ್ಲೆಗಳಲ್ಲಿ ಮುಂದಿನ ಐದು ದಿನ ಭಾರೀ ಮಳೆಯಾಗಲಿದೆ.

ಕೊಡಗು ಜಿಲ್ಲೆಯಲ್ಲಿ ಆ.3ರಂದು 46 ಎಂಎಂ., 4ರಂದು 151 ಎಂಎಂ., 5ರಂದು 106 ಎಂಎಂ., 6ರಂದು 22 ಎಂಎಂ., 6ರಂದು 21 ಎಂಎಂ ಮಳೆ ಯಾಗಲಿದೆ. ಈ ಐದು ದಿನಗಳ ಅವಧಿಯಲ್ಲಿ ಉಷ್ಣಾಂಶದಲ್ಲಿ ಏರುಪೇರಾಗಲಿದ್ದು, ಗರಿಷ್ಠ 21ರಿಂದ 25 ಡಿಗ್ರಿ ಸೆಲ್ಸಿಯಸ್, ಕನಿಷ್ಠ 18 ಡಿಗ್ರಿ ಸೆಲ್ಸಿಯಸ್ ಇರಲಿದೆ. ಈ ಅವಧಿಯಲ್ಲಿ ಮೈಸೂರು ಜಿಲ್ಲೆಯಲ್ಲಿ ಕ್ರಮವಾಗಿ 24 ಮಿ.ಮೀ., 26 ಮಿ.ಮೀ., 80 ಮಿ.ಮೀ., 48 ಮಿ.ಮೀ. 13 ಮಿ.ಮೀ. ಮಳೆಯಾಗಲಿದೆ. ಮಂಡ್ಯ ಜಿಲ್ಲೆಯಲ್ಲಿ ಕ್ರಮವಾಗಿ 16, 22, 67, 46, 7 ಮಿ.ಮೀ., ಚಾಮರಾಜನಗರ ಜಿಲ್ಲೆಯಲ್ಲಿ 25, 19, 68, 8 ಮತ್ತು 4 ಮಿ.ಮೀ. ಮಳೆ ಬೀಳಲಿದೆ ಎಂದು ನಾಗನಹಳ್ಳಿ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ. ಹವಾಮಾನ ಮುನ್ಸೂಚನೆ ಪ್ರಕಾರ ಆ.5ರಿಂದ 10ರವರೆಗೆ ಸರಾಸರಿಗಿಂತ ಹೆಚ್ಚು ಮಳೆಯಾಗುವ ಸಂಭವವಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.


ಅಬಲೆಯರ ಜೀವನೋಪಾಯಕ್ಕೆ ಫುಡ್ ಕಾರ್ಟ್ ಕೊಡುಗೆ



ಮೈಸೂರು, ಆ.2–ರೌಂಡ್ ಟೇಬಲ್ ಇಂಡಿಯಾ (ಆರ್‌ಟಿಐ) ಮತ್ತು ಲೇಡೀಸ್ ಸರ್ಕಲ್ ಇಂಡಿಯಾ(ಎಲ್‌ಸಿಐ)–ಏರಿಯಾ–13 (ಮೈಸೂರು, ಮಂಗಳೂರು, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಸಕಲೇಶಪುರ ಒಳಗೊಂಡ) ವತಿಯಿಂದ ಇತ್ತೀಚೆಗೆ ವೇದಾವತಿ ಮತ್ತು ಅವರ ನಾದಿನಿ (ಇಬ್ಬರು ವಿಧವೆಯರು) ಅವರ ಜೀವನೋಪಾಯಕ್ಕಾಗಿ ಸಲಕರಣೆಗಳೊಂದಿಗೆ ಫುಡ್ ಕಾರ್ಟ್ ಅನ್ನು ಕೊಡುಗೆಯಾಗಿ ನೀಡಲಾಯಿತು. ಈ ಫುಡ್ ಕಾರ್ಟ್ ಅನ್ನು ಮೈಸೂರಿನ ನಜರ್‌ಬಾದ್‌ನಲ್ಲಿರುವ ವಾಣಿಜ್ಯ ಪ್ರದೇಶದಲ್ಲಿ ಹಾಕಿಕೊಡಲಾಗಿದೆ. ಈ ಒಂದು ಯೋಜನೆಗೆ 5 ವೃತ್ತಗಳು ಮತ್ತು 13 ವಲಯದ 10 ರೌಂಡ್ ಟೇಬಲ್ ಇಂಡಿಯಾದ ಪದಾಧಿಕಾರಿಗಳು ಸಮನಾಗಿ (ಈ ಯೋಜನೆ ವೆಚ್ಚ ರೂ. 45,000) ಕೊಡುಗೆ ನೀಡಿದ್ದಾರೆ. ವಲಯ 13, ಮೈಸೂರು ಆರ್‌ಟಿ–21 ಮತ್ತು ಎಲ್‌ಸಿ–9, ಮೈಸೂರು ಹೆರಿಟೇಜ್ ಆರ್‌ಟಿ–109 ಮತ್ತು ಎಲ್‌ಸಿ–109, ಮಂಗಳೂರು ಆರ್‌ಟಿ–115 ಮತ್ತು ಎಲ್‌ಸಿ 82, ಮೈಸೂರು ಅಮಿಟಿ ಆರ್‌ಟಿ–156 ಮತ್ತು ಎಲ್‌ಸಿ 108, ಚಿಕ್ಕಮಗಳೂರು ಆರ್‌ಟಿ–164, ಶಿವಮೊಗ್ಗ ಆರ್‌ಟಿ–166, ಮಂಗಳೂರು ಕೋಸ್ಟಲ್ ಆರ್‌ಟಿ–190, ಮೈಸೂರು ಎಲೈಟ್ ಆರ್‌ಟಿ–256 ಮತ್ತು ಎಲ್‌ಸಿ–141, ಶಿವಮೊಗ್ಗ ಮಲ್ನಾಡ್ ಆರ್‌ಟಿ–266 ಮತ್ತು ಸಕಲೇಶಪುರ ಆರ್‌ಟಿ–276 ಅನ್ನು ಒಳಗೊಂಡಿದೆ.

ಮುನಿಸಿಕೊಂಡಿರುವ ಯುವ ಪಡೆಯ ಕೋಪ ಶಮನಗೊಳಿಸಲು ಇಂದು ರಾಜ್ಯಕ್ಕೆ ಅಮಿತ್ ಷಾ

● ಕಾರ್ಯಕ್ರಮವೊಂದರ ನೆಪದಲ್ಲಿ ಪರಿಸ್ಥಿತಿ ಸುಧಾರಣೆಗೆ ಆಗಮನ ● ಪ್ರವೀಣ್ ನಿವಾಸಕ್ಕೆ ಭೇಟಿ ನೀಡುವ ಸಾಧ್ಯತೆ ● ಪಂಚತಾರಾ ಹೋಟೆಲ್‌ನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿ ಇತರೆ ನಾಯಕರೊಂದಿಗೆ ಮಾತುಕತೆ



ಬೆಂಗಳೂರು, ಆ.2(ಕೆಎಂಶಿ)–ಹಿಂದು ಯುವಕರ ಸರಣಿ ಹತ್ಯೆ ಹಿನ್ನೆಲೆಯಲ್ಲಿ ಸರ್ಕಾರದ ವಿರುದ್ಧ ಸಿಡಿದೆದ್ದಿರುವ ಬಿಜೆಪಿ ಯುವ ಕಾರ್ಯಕರ್ತರು ಮತ್ತು ಆರ್‌ಎಸ್‌ಎಸ್ ಪರಿವಾರದ ಕೋಪ ಶಮನ ಮಾಡಲು ಕೇಂದ್ರ ಗೃಹ ಸಚಿವ ಅಮಿತ್ ಷಾ ಮಧ್ಯೆ ಪ್ರವೇಶ ಮಾಡುತ್ತಿದ್ದಾರೆ. ಹಿಂದು ಕಾರ್ಯಕರ್ತ ಪ್ರವೀಣ್ ನೆಟ್ಟಾರ್ ಹತ್ಯೆಯ ನಂತರ ರಾಜ್ಯ ಬಿಜೆಪಿ ಸರ್ಕಾರದ ವಿರುದ್ಧ ಪಕ್ಷದ ಸಂಘಟನೆಗಳೇ ತಿರುಗಿ ಬಿದ್ದು, ನಮ್ಮದೇ ಸರ್ಕಾರವಿದ್ದರೂ ನಮಗೆ ರಕ್ಷಣೆ ಇಲ್ಲದಂತಾಗಿದೆ ಎಂದು ಆಕ್ರೋಶ ಹೊರ ಹಾಕಿದ್ದಾರೆ.

ಸಾಲದೆಂಬಂತೆ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಸೇರಿದಂತೆ ಹಿಂದುತ್ವದ ಕಟ್ಟಾಳುಗಳು ಅದರಲ್ಲೂ ಸಂಘ ಪರಿವಾರದವರು ಸರ್ಕಾರದ ವಿರುದ್ಧ ಅಪಸ್ವರ ಎತ್ತಿರುವುದು ಬಿಜೆಪಿ ವರಿಷ್ಠರನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ರಾಜ್ಯ ಬಿಜೆಪಿ ಯುವ ಮೋರ್ಚಾದಲ್ಲಿ ಉಂಟಾಗಿರುವ ಆಕ್ರೋಶವನ್ನು ತಣಿಸಿ ಪರಿಹಾರ ಕಂಡು ಹಿಡಿಯಲು ನಾಳೆ ತಡರಾತ್ರಿ ನಗರಕ್ಕೆ ಆಗಮಿಸುವ ಅಮಿತ್ ಷಾ ಒಂದು ದಿನ ಮೊಕ್ಕಾಂ ಹೂಡಲಿದ್ದಾರೆ. ಕಾರ್ಯಕ್ರಮವೊಂದರಲ್ಲಿ ಭಾಗವಹಿಸುವ ನೆಪದಲ್ಲಿ ಬರುತ್ತಿರುವ ಅಮಿತ್ ಷಾ, ಇದೇ ಸಂದರ್ಭದಲ್ಲಿ ಸರ್ಕಾರದ ವಿರುದ್ಧ ಪಕ್ಷದಲ್ಲಿ ಎದ್ದಿರುವ ಅಸಮಾಧಾನವನ್ನು ಸರಿಪಡಿಸುವ ಪ್ರಯತ್ನ ಮಾಡಲಿದ್ದಾರೆ.

ಯುವ ಮೋರ್ಚಾದಲ್ಲಿ ಎದ್ದಿರುವ ಆಕ್ರೋಶವನ್ನು ಶಮನ ಮಾಡಲು ಷಾ, ಪ್ರವೀಣ್ ನೆಟ್ಟಾರ್ ಅವರ ನಿವಾಸಕ್ಕೆ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ನೆಟ್ಟಾರ್ ಮನೆಗೆ ಹೋಗುವ ಬಗ್ಗೆ ಕೇಂದ್ರ ಗೃಹ ಇಲಾಖೆಯಿಂದ ಅಧಿಕೃತ ಮಾಹಿತಿ ಬಂದಿಲ್ಲ. ಆದರೆ, ಪಕ್ಷದ ಉನ್ನತ ಮೂಲಗಳ ಪ್ರಕಾರ ಬೆಂಗಳೂರಿನ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಇದೇ ಮೂಲಗಳು ತಿಳಿಸಿವೆ. ಮಂಗಳೂರಿಗೆ ತೆರಳುವ ಮುನ್ನ ತಾವು ಉಳಿಯುವ ತಾರಾ ಹೋಟೆಲ್‌ನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ ಕೆಲವು ಮುಖಂಡರು ಹಾಗೂ ಸಂಘ ಪರಿವಾರದ ಕೆಲವು ಮುಖಂಡರೊಂದಿಗೆ ಸಮಾಲೋಚನೆ ನಡೆಸಲಿದ್ದಾರೆ.



ಮೃಗಾಲಯದ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್ ಅವರನ್ನು ಮೈಸೂರು ಅಶೋಕ ರಸ್ತೆಯ ಶ್ರೀ ಚಾಮುಂಡೇಶ್ವರಿ ಭಕ್ತ ಮಂಡಳಿ ವತಿಯಿಂದ ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ವೇಳೆ ಮಂಡಳಿಯ ಪದಾಧಿಕಾರಿಗಳಾದ ಎಂ.ಎಸ್. ಮಹಾದೇವಸ್ವಾಮಿ, ಭರತ್, ಆನಂದ್, ವೆಂಕಟರಾವ್, ಚಂದನ್, ಸುನೀಲ್ ಲಾಲ್, ದಿನೇಶ್ ಇನ್ನಿತರರು ಉಪಸ್ಥಿತರಿದ್ದರು.

ಮಕ್ಕಳಿಗೆ ಹಾಲು ವಿತರಿಸಿ ನಾಗರಪಂಚಮಿ ಆಚರಣೆ



ಮೈಸೂರು, ಆ.2–ಮೈಸೂರಿನ ಗಾಂಧಿನಗರದ ಉರಿಲಿಂಗ ಪೆದ್ದಿ ಮಠದ ಆವರಣದಲ್ಲಿ ಮಕ್ಕಳಿಗೆ ಹಾಲು ವಿತರಿಸುವ ಮೂಲಕ ನಾಗರ ಪಂಚಮಿ ಹಬ್ಬ ಆಚರಿಸಲಾಯಿತು.

ಈ ವೇಳೆ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿಯವರು ಮಾತನಾಡಿ, ಅಜ್ಞಾನ ಮತ್ತು ಅಂಧಕಾರವನ್ನು ನಿವಾರಿಸುವ ಶಕ್ತಿ ಜ್ಞಾನಕ್ಕೆ ಇದೆ. ನುಡಿಗಳಲ್ಲಿ ಜ್ಞಾನಪ್ರಕಾಶವಿದ್ದರೆ ಅಜ್ಞಾನ ಅಂಧಕಾರಗಳು ಪಲಾಯನ ಮಾಡುತ್ತವೆ. ಕಲ್ಲು ನಾಗರಗಳಿಗೆ ಹಾಲು ನೀಡುವ ಬದಲು ಮಕ್ಕಳಿಗೆ ನೀಡಿದರೆ ದೇಹ ವೃದ್ಧಿ ಹಾಗೂ ಪೌಷ್ಟಿಕತೆ ಹೆಚ್ಚುತ್ತದೆ ಎಂದು ಹೇಳಿದರು. ಕಾಂತರಾಜು ಸೇವಾ ಬಳಗ ಅಧ್ಯಕ್ಷರಾದ ಚೇತನ್ ಕಾಂತರಾಜು ಮಾತನಾಡಿ, ನಾಗರಪಂಚಮಿ ಹಬ್ಬದ ನಿಮಿತ್ತ ಅನೇಕರು ಕಲ್ಲುನಾಗರಗಳಿಗೆ ಇಲ್ಲವೇ ಹುತ್ತದಲ್ಲಿ ಹಾಲು ಸುರಿಯುವುದು ವಾಡಿಕೆ. ಇದು ಅವರವರ ಧಾರ್ಮಿಕ ನಂಬಿಕೆ ಎನ್ನುವುದು ನಿಜ. ಆದರೆ, ವೈಜ್ಞಾನಿಕವಾಗಿ ನೋಡಿದರೆ ಹಾವುಗಳು ಹಾಲನ್ನಾಗಲೀ, ಹಾಲಿನ ಉತ್ಪನ್ನಗಳನ್ನಾಗಲೀ ಸೇವಿಸುವುದಿಲ್ಲ. ಹಾಗಾಗಿ, ಪಂಚಮಿಯಂದು ಪೌಷ್ಟಿಕಾಂಶಗಳ ಆಗರವಾಗಿರುವ ಹಾಲನ್ನು ಹುತ್ತದಲ್ಲಿ ಸುರಿಯುವ ಬದಲು ಹಸಿದವರಿಗೆ ನೀಡುವುದು ಉತ್ತಮ ಎಂದರು. ಶ್ರೀ ಜಗದ್ಗುರು ಮರುಳ ಶಂಕರ ದೇವರ ಗುರುಪೀಠದ ಶ್ರೀ ಸಿದ್ದಬಸವ ಕಬೀರ ಮಹಾಸ್ವಾಮಿಗಳು, ಸವಿತಾ ಬಸವಪ್ರಿಯ ಸ್ವಾಮೀಜಿ, ಅಂಗನವಾಡಿ ಶಿಕ್ಷಕಿ ಜಯಲಕ್ಷ್ಮಿ, ಗ್ರಾಮ ಪಂಚಾಯಿತಿ ಸದಸ್ಯ ಮಹಾಂತಪ್ಪ, ಪರಶುರಾಮ್ ಮರಿದೇವರು, ಲಕ್ಷ್ಮಣ್ ಮತ್ತಿತರರು ಭಾಗವಹಿಸಿದ್ದರು.

ವರದರಾಜು ನಿಧನ



ಚಾಮರಾಜನಗರ, ಆ.2–ಹಿರಿಯ ರಸಗೊಬ್ಬರ ಮಾರಾಟಗಾರರಾದ ನಗರದ ಕಣ್ಣನ್ ಏಜೆನ್ಸಿ ಮಾಲೀಕ ವರದರಾಜು(85) ಮಂಗಳವಾರ ಸಂಜೆ ನಿಧನರಾದರು. ಮೃತರು ಪತ್ನಿ, ಪುತ್ರರಾದ ವೇಣುಗೋಪಾಲ್, ರಘುಪತಿ, ಇಬ್ಬರು ಪುತ್ರಿಯರು ಹಾಗೂ ಸಹೋದರ ಚಾ–ನಗರ ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ವಿ.ಪ್ರಭಾಕರ್ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ ಮರಿಯಾಲಹುಂಡಿ ಗೇಟ್ ಬಳಿ ಇರುವ ಮೃತರ ತೋಟದಲ್ಲಿ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ. ನಗರದ ಎಲ್ಲಾ ರಸಗೊಬ್ಬರ ಅಂಗಡಿಗಳನ್ನು ಮುಚ್ಚಿ ಮೃತರಿಗೆ ಶ್ರದ್ಧಾಂಜಲಿ ಸಲ್ಲಿಸಿದರು.

ಕೇಡನ್ನು ಬಯಸದೆ ಉತ್ತಮ ವ್ಯಕ್ತಿಯಾಗಿ

ವಂಗೀಪುರ ಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ ಅಭಿಮತ



ಮೈಸೂರು, ಆ.2–ಸೋಸಲೆ ಕರ್ನಾಟಕ ಬ್ರಾಹ್ಮಣ ಸಂಘದ ವತಿಯಿಂದ ಕೆಂಪನಂಜಮ್ಮ ಅಗ್ರಹಾರದಲ್ಲಿರುವ ಸರಸ್ವತಿ ನಿಲಯದಲ್ಲಿ ಋಗ್ವೇದ ಉಪಾಕರ್ಮವನ್ನು ಬ್ರಾಹ್ಮಣರು ಯಜ್ಞೋಪವೀತಂ ಜನಿವಾರ ಬದಲಾಯಿಸಿಕೊಂಡು ಸಂಧ್ಯಾವಂದನೆ, ಗಾಯತ್ರಿ ಜಪ, ವೇದಘೋಷ ನಂತರ ಹೋಮ ನೆರವೇರಿಸಿ ಆಚರಿಸಿದರು.

ಉಪಾಕರ್ಮದ ಅಂಗವಾಗಿ ಜನಿವಾರ ಧಾರಣೆ ಮಾಡಿದ ಸಮಾಜದ ಬ್ರಾಹ್ಮಣರಿಗೆ ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ವತಿಯಿಂದ ನಿತ್ಯ ಸಂಧ್ಯಾವಂದನೆ ಪುಸ್ತಕ ಹಾಗೂ ಗಾಯತ್ರಿ ಮಂತ್ರ ಪುಸ್ತಕ ನೀಡಿ ಋಗ್ವೇದ ಉಪಾಕರ್ಮದ ಶುಭಾಶಯ ಕೋರಲಾಯಿತು. ಮಾನವ ಜನ್ಮ ದೊಡ್ಡದು, ಅದು ಹಾನಿ ಮಾಡಬೇಡಿ ಹುಚ್ಚಪ್ಪಗಳಿರಾ' ಎಂಬ ದಾಸರ ವಾಣಿಯಂತೆ ಜೀವನ ಅಂತ್ಯದವರೆಗೂ ನಾವೆಲ್ಲ ಸತ್ಕರ್ಮಗಳಲ್ಲಿ ತೊಡಗಿಸಿಕೊಳ್ಳಬೇಕು. ಮತ್ತೊಬ್ಬರಿಗೆ ಕೇಡನ್ನು ಬಯಸದೆ ಉತ್ತಮ ವ್ಯಕ್ತಿಯಾಗಬೇಕು ಎಂದು ವಂಗೀಪುರ ಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ ಹೇಳಿದರು. 'ಉಪ ಎಂದರೆ ಸಮೀಪ. ದೇವರ ಸಾಮಿಪ್ಯ ಹೊಂದಲು (ಮೋಕ್ಷ ಪ್ರಾಪ್ತಿ) ಪ್ರತಿಯೊಬ್ಬರು ದೇವರ ಮೇಲೆ ಶ್ರದ್ಧೆ ಇಟ್ಟು, ಉಪಾಸನೆ ಮಾಡಿ ಮೋಕ್ಷ ಪಡೆಯಲು ಪ್ರಯತ್ನಿಸಬೇಕು. ಸದಾಚಾರ, ಒಳ್ಳೆಯ ಚಾರಿತ್ರ್ಯ, ಸನ್ಮಾರ್ಗಗಳನ್ನು ಅಳವಡಿಸಿಕೊಂಡು ದೇವರನ್ನು ಪೂಜಿಸಿದರೆ ನಮ್ಮ ಜನ್ಮ ಸಫಲವಾಗುತ್ತದೆ' ಎಂದರು.

ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್ ಮಾತನಾಡಿ, ಮೈಸೂರು ನಗರದಲ್ಲಿ ವಿವಿಧ ಸಂಘ ಸಂಸ್ಥೆಗಳು ಕೃಷ್ಣಮೂರ್ತಿಪುರಂ ರಾಮಮಂದಿರ, ಜಯನಗರ ರಾಮಮಂದಿರ ಸೇರಿದಂತೆ ಇದೇ ತಿಂಗಳು 11ನೇ ತಾರೀಕು ಯಜುರ್ವೇದ ಸಾಮೂಹಿಕ ಯಜ್ಞೋಪವೀತಂ ಜನಿವಾರ ಬದಲಾಯಿಸಿಕೊಳ್ಳುವ ಕಾರ್ಯಕ್ರಮ ಹಮ್ಮಿಕೊಂಡಿದ್ದು ಅಂದು ಸಹ ಪ್ರತಿಯೊಬ್ಬರಿಗೂ ಗಾಯತ್ರಿ ಮಾತೆಯ ಪುಸ್ತಕಗಳನ್ನು ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ವತಿಯಿಂದ ನೀಡಲಾಗುವುದು ಎಂದು ತಿಳಿಸಿದರು

ಸಂಘಟನಾ ಕಾರ್ಯದರ್ಶಿ ಅಜಯ್ ಶಾಸ್ತ್ರಿ, ಶ್ರೀಕಾಂತ್ ಕಶ್ಯಪ್, ಸುಚೇಂದ್ರ, ಸೋಸಲೆ ಕರ್ನಾಟಕ ಬ್ರಾಹ್ಮಣ ಸಂಘ ಅಧ್ಯಕ್ಷ ಬಿಆರ್ ಸೀತಾರಾಮಯ್ಯ, ಉಪಾಧ್ಯಕ್ಷರು ನಂಜುಂಡಸ್ವಾಮಿ, ಕಾರ್ಯದರ್ಶಿ ಮಹೇಶ್‌ಕುಮಾರ್, ಖಜಾಂಚಿ ಎಸ್.ಎಲ್. ನಾಗರಾಜ್, ಸಹ ಕಾರ್ಯದರ್ಶಿ ಬಾಲಾಜಿ ಹಾಗೂ ಇನ್ನಿತರರು ಹಾಜರಿದ್ದರು.

ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ನಾಗರ ಮೂರ್ತಿಗಳಿಗೆ ವಿಶೇಷ ಪೂಜೆ



ಮೈಸೂರು, ಆ. 2– ಸನಾತನ ಹಿಂದೂ ಧರ್ಮದಲ್ಲಿ ಪ್ರತಿಯೊಂದು ಹಬ್ಬಗಳ ಆಚರಣೆಗೆ ವಿಶೇಷವಾದ ಹಿನ್ನೆಲೆ ಇದೆ. ಹಬ್ಬಗಳ ಆಚರಣೆ ಪ್ರಶ್ನೆ ಮಾಡುವುದು ಸರಿಯಲ್ಲ ಎಂದು ಅರ್ಚಕರ ಸಂಘದ ಅಧ್ಯಕ್ಷರು ಹಾಗೂ ಪಂಚಮುಖಿ ದೇವಸ್ಥಾನದ ಪ್ರಧಾನ ಅರ್ಚಕ ವಿದ್ವಾನ್ ಕೃಷ್ಣಮೂರ್ತಿ ತಿಳಿಸಿದರು.

ನಾಗ ಪಂಚಮಿ ಅಂಗವಾಗಿ ಇರ್ವಿನ್ ರಸ್ತೆಯಲ್ಲಿರುವ ಪಂಚಮುಖಿ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ನಾಗರ ಮೂರ್ತಿಗಳಿಗೆ ವಿಶೇಷ ಪೂಜೆ ಸಲ್ಲಿಸಿ ಹಾಲೆರೆದು ಪೂಜಿಸಿದ ನಂತರ ಮಾತನಾಡಿದ ಅವರು, ಶ್ರಾವಣ ಮಾಸದ ಮೊದಲ ವಾರದಲ್ಲಿ ಆಚರಿಸುವ ನಾಗರ ಪಂಚಮಿ ಹಬ್ಬವು ಅಣ್ಣ ತಂಗಿಯರ ಬಾಂಧವ್ಯವನ್ನು ಬೆಸೆಯುವ ಹಬ್ಬವೆಂದು ಕರೆಯಲಾಗುತ್ತದೆ. ಬೆಳಗ್ಗೆಯಿಂದ ಸಂಜೆಯವರೆಗೂ ಮಹಿಳೆಯರು ಮಕ್ಕಳು ನಾಗರ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಿದರು. ನಮ್ಮ ಪೂರ್ವಜರು, ಗುರುಗಳು ಹಾಕಿಕೊಟ್ಟ ಪರಂಪರೆಯನ್ನು ಪಾಲಿಸುವುದು, ಮುಂದುವರಿಸುವುದು ನಮ್ಮ ಜವಾಬ್ದಾರಿ ಎಂದರು. ನಾಗದೇವರಿಗೆ ಹಾಲೆರೆಯು ವುದನ್ನು ನಮ್ಮ ಪರಂಪರೆ. ಹಿಂದೂ ಧರ್ಮೀಯರಿಗೆ ಪೂಜೆ ಮಾಡುವುದು ಗೊತ್ತು. ಅದರಂತೆ ಅಸಹಾಯಕರಿಗೆ, ನಿರ್ಗತಿಕರಿಗೆ ಸಹಾಯ ಮಾಡುವುದು ಗೊತ್ತು. ಕೆಲವರು ಹಬ್ಬಗಳ ಆಚರಣೆಯ ಪ್ರಶ್ನೆ ಮಾಡುವುದು ಸರಿಯಲ್ಲ ಎಂದು ಅವರು ಹೇಳಿದರು. ಇದೇ ಸಂದರ್ಭದಲ್ಲಿ ಉದ್ಯಮಿ ನಾಗಭೂಷಣ್ ದಂಪತಿ ಸಹ ಹಾಜರಿದ್ದರು

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

03.08.2022 ಬುಧವಾರ, ಮಳೆ ನಕ್ಷತ್ರ : ಆಶ್ಲೇಷ, 03.08.2022 ರಿಂದ 16.08.2022
ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ಶುಭಕೃತು ಋತು, ಶ್ರಾವಣ ಮಾಸ, ಶುಕ್ಲ ಪಕ್ಷ
ತಿಥಿ: ಷಷ್ಠೀ, ನಕ್ಷತ್ರ : ಹಸ್ತ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿಯವರ 19ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ, ಶ್ರಾವಣಶುದ್ಧ ಷಷ್ಠಿ ಪ್ರಯುಕ್ತ ವೇದವಟು ಭೋಜನ, 108 ಅನಾಥ ಮಕ್ಕಳಿಗೆ ವಸ್ತ್ರ ವಿತರಣೆ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ನಂಜನಗೂಡು ರಸ್ತೆ, ದತ್ತನಗರ.

■ **ಸಾರ್ವಜನಿಕ ಶಿಕ್ಷಣ ಇಲಾಖೆ:** ಹಿರಿಯ ಪ್ರಾಥಮಿಕ ಶಾಲೆ ಮೇಲಾಟಗಳ ಕ್ರೀಡಾಕೂಟ, ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತಕುಮಾರ್, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರರಾಜೇ ಅರಸು, ಮುಖ್ಯ ಅತಿಥಿಗಳು: ಮೈಸೂರು ವಿವಿ ಕುಲಸಚಿವ ಪ್ರೊ. ಆರ್. ಶಿವಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ರಾಮಾರಾಧ್ಯ, ಮೈಸೂರು ವಿವಿ ಪಿಎಂಇ ಬೋರ್ಡ್ ನಿರ್ದೇಶಕ ಪ್ರೊ. ಎನ್.ಕೆ. ಲೋಕನಾಥ್, ಸ್ಥಳ: ಓವಲ್ ಮೈದಾನ, ಮೈಸೂರು ವಿವಿ, ಬೆಳಗ್ಗೆ 8.30ಕ್ಕೆ.

■ **ಶಾರದಾ ವಿಲಾಸ ಕಾಲೇಜು :** ಫೈಟೋಥೆರಪಿಯಲ್ಲಿ ಮೂಲ ಪ್ರಯೋಗಗಳು ಕುರಿತು ಕಾರ್ಯಾಗಾರ, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಸಚಿವ ಪ್ರೊ. ಎ.ಪಿ. ಜ್ಞಾನಪ್ರಕಾಶ್, ಸಂಪನ್ಮೂಲ ವ್ಯಕ್ತಿಗಳು : ಡಾ. ಗಿರೀಶ್ ಚಂದ್ರನ್, ಡಾ. ಬಿ.ಎಂ. ಸುಬ್ರಾಯ, ಎನ್. ಚಂದ್ರಶೇಖರ್, ಎಸ್.ಎಲ್. ರಾಮಚಂದ್ರ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ದೇವಿಕಾ, ಸ್ಥಳ: ವೆಂಕಟಕೃಷ್ಣಯ್ಯ ಸಭಾಂಗಣ, ಬೆಳಗ್ಗೆ 9ಕ್ಕೆ.

■ **ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ :** 1565ನೇ ಮದ್ಯವರ್ಜನ ಶಿಬಿರ, ಉದ್ಘಾಟನೆ : ಉದ್ಯಮಿ ಗೌತಮ್ ಚೌವತ್, ಅಧ್ಯಕ್ಷತೆ : ಪಾಲಿಕೆ ಸದಸ್ಯೆ ರೂಪ ಯೋಗೀಶ್, ಮುಖ್ಯ ಅತಿಥಿಗಳು : ಆರಕ್ಷಕ ಠಾಣೆ ಅಧಿಕಾರಿ ಜೀವನ್, ವೈದ್ಯಾಧಿಕಾರಿ ಡಾ. ನವೀನ್‌ಕುಮಾರ್, ಎಂ. ಲಕ್ಷ್ಮಣ್, ಮೇಯರ್ ಸುನಂದ ಪಾಲನೇತ್ರ, ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಹಂದನಹಳ್ಳಿ ಸೋಮಶೇಖರ್, ಸ್ಥಳ: ಸಿಐಟಿಬಿ ಚೌಲ್ಟ್ರಿ, ಕುರುಬಾರಹಳ್ಳಿ, 10.30ಕ್ಕೆ.

■ **ಯುವ ಭಾರತ್ ಸಂಘಟನೆ:** ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಹರ್ ಘರ್ ತಿರಂಗಾ ಅಭಿಯಾನ, ಮುಖ್ಯ ಅತಿಥಿಗಳು: ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಜೂನಿಯರ್ ಕಮೀಷನರ್ ರಘುಕುಮಾರ್, ಎಂ.ಪಿ. ಪ್ರಕಾಶ್, ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಬಿಜೆಪಿ ಹಿಂದುಳಿದ ವರ್ಗದ ಮೋರ್ಚಾ ಅಧ್ಯಕ್ಷ ಜೋಗಿ ಮಂಜು, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಸುಗುಣವತಿ, ಸ್ಥಳ:ಅಕ್ಕನ ಬಳಗ ಶಾಲೆ ಆವರಣ, ತ್ಯಾಗರಾಜ ರಸ್ತೆ, ಬೆಳಗ್ಗೆ 11ಕ್ಕೆ.

■ **ಮೈಸೂರು ನಗರ (ಜಿಲ್ಲಾ) ಕಾಂಗ್ರೆಸ್ ಸಮಿತಿ:** ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 75ನೇ ಹುಟ್ಟುಹಬ್ಬ ಪ್ರಯುಕ್ತ ನಗರದ ದೇವಾಲಯಗಳಲ್ಲಿ ವಿಶೇಷ ಪೂಜೆ, ಕಿವುಡ ಮತ್ತು ಮೂಕರ ಪಾಠಶಾಲೆಯ ಮಕ್ಕಳಿಗೆ ಭೋಜನ ಕಾರ್ಯಕ್ರಮ, ಮಧ್ಯಾಹ್ನ 1ಕ್ಕೆ.

■ **ಜೈ ಭುವನೇಶ್ವರಿ ಕನ್ನಡ ಸಂಘ ಕುವೆಂಪು ವೃತ್ತ :** ಶ್ರೀ ಬಲಮುರಿ ಗಣಪತಿ ಮತ್ತು ಶ್ರೀ ಮಲೈ ಮಹದೇಶ್ವರಸ್ವಾಮಿ ದೇವಸ್ಥಾನದಲ್ಲಿ ಸಂಜೆ 4 ರಿಂದ ಪ್ರವೇಶಬಲಿ ದೀಪಾರಾಧನೆ, ಮಹಾಗಣಪತಿ ಪೂಜೆ, ಶೈವಪುಣ್ಯಾಹ, ವಾಚನ ಪಂಚಗವ್ಯ, ರಕ್ಷಾಬಂಧನ, ರಾಕ್ಷೋಘ್ನ ಹೋಮ, ವಾಸ್ತು ಹೋಮ, ಅಷ್ಟಬಂಧನ, ಪ್ರಸಾದ ವಿನಿಯೋಗ, ಸ್ಥಳ: ರಾಜೀವ್‌ನಗರ 1ನೇ ಹಂತ.

■ **ರಾಗ ಮ್ಯೂಸಿಕ್ ಅಕಾಡೆಮಿ:** ಶ್ರೀಮದ್ ಭಾಗವತ ಸಪ್ತಾಹ, ವಿದ್ವಾನ್ ಬೆಳ್ಳಾರಿ ರಾಘವೇಂದ್ರ ಅವರಿಂದ ಹಾಡುಗಾರಿಕೆ, ವಿದ್ವಾನ್ ಎಂ.ಕೇಶವ್–ವಯೋಲಿನ್, ವಿದ್ವಾನ್ ಹೆಚ್.ಎಲ್.ಶಿವಶಂಕರಸ್ವಾಮಿ–ಮೃದಂಗ, ಸ್ಥಳ: ಮೈಸೂರು ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6ರಿಂದ.

■ **ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ವಿಶ್ರಾಂತ ಪ್ರಾಧ್ಯಾಪಕ ಡಾ.ಕೆ ಅನಂತರಾಮು ಅವರಿಂದ ಭಾರತೀಯ ಸಂಸ್ಕೃತಿ ಕುರಿತು ಪ್ರವಚನ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30 ರಿಂದ.

■ **ರಾಘವೇಂದ್ರಸ್ವಾಮಿ ಮಠ:** ಪಂಡಿತ್ ಕೃಷ್ಣಾಚಾರ್ಯ ನಾಗಸಂಪಿಗೆ ಅವರಿಂದ ರಾಮಾಚಾರಿತ್ರ್ಯ ಮಂಜರಿಯ ಪ್ರವಚನ, ಸ್ಥಳ: ಮಠದ ಆವರಣ, ಜಯಲಕ್ಷ್ಮಿಪುರಂ, ಸಂಜೆ 6.30 ರಿಂದ.

ಸುತ್ತೂರಿನಲ್ಲಿಂದು

■ **ಶ್ರೀ ವೀರ ಸಿಂಹಾಸನ ಮಹಾ ಸಂಸ್ಥಾನ ಮಠ :** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರೊ. ಹೆಚ್.ಬಿ. ದೇವಣ್ಣ ಅವರಿಂದ ಸುರಂಗ ಕವಿಕೃತ ತ್ರಿಷಷ್ಠಿ ಪುರಾತನ ಚಾರಿತ್ರಂ ಕುರಿತು ಪ್ರವಚನ, ಡಿ.ಎಂ. ಸಿದ್ದಲಿಂಗಸ್ವಾಮಿ ಅವರಿಂದ ವಾಚನ, ಸ್ಥಳ: ಸುತ್ತೂರು ಮಠ, ಬೆಳಗ್ಗೆ 6.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ನಖಶಿಖಾಂತ, ಆರೋಗ್ಯ ಸೌಂದರ್ಯಗಳ ವೈಜ್ಞಾನಿಕ ಮಾಹಿತಿ–ಡಾ. ಕೇಶವ ಕೊರಸೆ, 6.40 ಭಾವಗೀತೆ, 6.45 ರೈತರಿಗೆ ಸಲಹೆ, 6.50 ವನ ಮಹೋತ್ಸವ–ಅರಣ್ಯ ಇಲಾಖೆ ಪ್ರಾಯೋಜಿತ ಕಾರ್ಯಕ್ರಮ, 9.00 ಮನೋನಂದನ–ಪ್ರೇರಣಾ ಆಸ್ಪತ್ರೆ ಪ್ರಾಯೋಜಿತ ಕಾರ್ಯಕ್ರಮ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳುವಳಿಯ ಪಯಣ–ಬಾನುಲಿ ಸರಣಿ, 10.00 ಹಿಂದೂಸ್ಥಾನಿ ಸಂಗೀತ–ಉಸ್ತಾದ್ ಸಬ್ರಿ ಖಾನ್ – ಗಾಯನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ–ಗಿರಿಜಾ ರಾಜ್‌ಕುಮಾರ್, 12.45 ಲಾಕ್‌ಡೌನ್ ಕಥಾ ನಾಟಕ–ಲಾಕ್‌ಡೌನ್ ಕಥೆಗಳನ್ನಾಧರಿಸಿದ ಸರಣಿ, "ಮೂಷಿಕ ಸಂಹಾರ", ಮೂಲಕಥೆ– ಬೇಂದ್ರೆ ಎನ್ ಮಂಜುನಾಥ್, ನಾಟಕರೂಪ– ವಸುಮತಿ ಉಡುಪ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್, 1.20 ಭಾವಗೀತೆ, 3.00 ಲಯ ಸಂಭ್ರಮ–ತಾಳ, ಲಯ ರಸಾಸ್ವಾದ. ಪರಿಕಲ್ಪನೆ ಮತ್ತು ಪ್ರಸ್ತುತಿ–ಎಚ್.ಎಲ್. ಶಿವಶಂಕರಸ್ವಾಮಿ, ನಿರ್ಮಾಣ– ಎಸ್.ಸುಬ್ರಹ್ಮಣ್ಯ, 4.00 ಮಹಿಳಾರಂಗ–ಸ್ತ್ರೀ ಚೇತನ–ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಭಾಗವಹಿಸುವವರು ಡಾ. ಮಾಲಾ ಮಳವಳ್ಳಿ, 4.30 ಚಟ್‌ಪಟ್ ಚುರುಮುರಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ.ಮೀನಾ, 4.45ಹಿಂದಿ ಪಾಠ–ಸ್ಮಿತಾ ಚಿಪ್ಲೂಣ್ ಕರ್, 6.50 ಕೃಷಿರಂಗ– ಕಿಸಾನ್‌ವಾಣಿ, ಕೃಷಿ ಬದುಕಿನಲ್ಲಿ ಆರ್ಥಿಕ ಸ್ವಾವಲಂಬನೆ ವಿಚಾರವಾಗಿ ಅಚ್ಚುಗೇಗೌಡ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎಸ್.ಸಿ.ಹೇಮಕುಮಾರ್, 9.05 ಕ್ಷಿತಿಜ -Literacy ಗುರು–ಸಾಹಿತ್ಯ ದಿಗ್ಗಜರೊಂದಿಗೆ ಸಂವಾದ, 10.00ಹಳ್ಳಿ ಹಾಡು, ಪ್ರಸ್ತುತಿ– ಅಬ್ದುಲ್ ರಶೀದ್, 10.30 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿ ಮುದ್ರಣ

ಕಬ್ಬು ದರ ನಿಗದಿ ವಿಳಂಬ ಖಂಡಿಸಿ ತಾಲೂಕು ಕಚೇರಿ ಮುಂದೆ ರೈತರ ಪ್ರತಿಭಟನೆ

● ನ್ಯಾಯ ಕೊಡಿಸಲು ಅಧಿಕಾರಿಗಳು ವಿಫಲ ● ವಾರದಲ್ಲಿ ಸಮಸ್ಯೆ ಬಗೆಹರಿಸದೇ ಇದ್ದರೆ ತಾಲೂಕಿನಾದ್ಯಂತ ರಸ್ತೆ ತಡೆ ಎಚ್ಚರಿಕೆ

ಮೈಸೂರು, ಆ.2(ಆರ್‌ಕೆಬಿ)– ಕಬ್ಬು ದರ ನಿಗದಿ ವಿಳಂಬ, ಕಬ್ಬು ಕಟಾವು ಕೂಲಿ ಸಾಗಾಣಿಕೆ ವೆಚ್ಚ, ರೈತರ ಶೋಷಣೆ ಇನ್ನಿತರ ಸಮಸ್ಯೆಗಳ ನಿವಾರಣೆಗೆ ಆಗ್ರಹಿಸಿ, ಕಬ್ಬು ಬೆಳೆಗಾರರು ಮಂಗಳವಾರ ಮೈಸೂರು ತಾಲೂಕು ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ರಾಜ್ಯ ಕಬ್ಬು ಬೆಳೆಗಾರರ ಸಂಘದ ಆಶ್ರಯದಲ್ಲಿ ನಡೆದ ಪ್ರತಿಭಟನೆಯಲ್ಲಿ ರೈತರು, ಜಿಲ್ಲಾ ಮತ್ತು ತಾಲೂಕು ಆಡಳಿತದ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿದರು. ರೈತರಿಗೆ ನ್ಯಾಯ ನೀಡುವಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಕಬ್ಬು ಬೆಳೆಗಾರರ ಸಂಘದ ತಾಲೂಕು ಪ್ರಧಾನ ಕಾರ್ಯದರ್ಶಿ ಬರಡನಪುರ ನಾಗರಾಜ್ ಮಾತನಾಡಿ, ಕಬ್ಬಿನ ದರ ನಿಗದಿ ಮಾಡದೆ ವಿಳಂಬ ಮಾಡಲಾಗುತ್ತಿದೆ. ಕಳೆದ ವರ್ಷದ ದರಕ್ಕಿಂತ ಪ್ರತಿ ಟನ್‌ಗೆ 350 ರೂ. ಕಡಿಮೆ ನೀಡಲಾಗುತ್ತಿದೆ. ರೈತರ ಶೋಷಣೆ ಮಾಡಲಾಗುತ್ತಿದೆ. ನಾನಾ ನೆಪ ಹೇಳುತ್ತಾ ಕಳೆದ ವರ್ಷಕ್ಕಿಂತ ಕಬ್ಬು ಕಟಾವು ಕೂಲಿ, ಸಾಗಾಣಿಕೆ ವೆಚ್ಚವೆಂದು ರೈತರಿಂದ ಹೆಚ್ಚುವರಿ ಹಣ ಕಡಿತ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಮೊದಲೇ ತೊಂದರೆಯಲ್ಲಿರುವ ರೈತರಿಗೆ ಸಾಲ ಕಟ್ಟುವಂತೆ ನೋಟಿಸ್ ನೀಡಿ, ಕಿರುಕುಳ ನೀಡಲಾಗುತ್ತಿದೆ. ಕೆಲವು ಬ್ಯಾಂಕ್‌ಗಳು ನ್ಯಾಯಾಲಯದಲ್ಲಿ ದಾವೆ ಹೂಡಿವೆ ಎಂದು ದೂರಿದರು. ಜಿಲ್ಲೆಯಲ್ಲಿ ರಸಗೊಬ್ಬರ ಸಮಸ್ಯೆ ಸೃಷ್ಟಿಯಾಗಿದೆ. ಡಿಎಪಿ, ಯೂರಿಯಾ ಸಿಗುತ್ತಿಲ್ಲ. ಭತ್ತದ ನಾಟಿಗೆ ಬೇಕಾದ ಗೊಬ್ಬರ ದಾಸ್ತಾನು ಇಲ್ಲ ಎಂದು ಮಾರಾಟಗಾರರು ಸಬೂಬು ಹೇಳುತ್ತಿದ್ದಾರೆ. ಒಂದು ಜಿಲ್ಲೆ ಒಂದು ಬೆಳೆ ನೀತಿ ಜಾರಿ ನಂತರ ರೈತರಿಗೆ ಬೆಳೆ ವಿಮಾ ಪರಿಹಾರ ಸಿಗದೇ ಪರದಾಡುವಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರ ಕೂಡಲೇ ರೈತರ ಜಮೀನಿನ ಆಯಾ ವರ್ಷದ ಎಲ್ಲಾ ಬೆಳೆಯ ಮೇಲೆ ಫಸಲ್ ಭೀಮಾ ಯೋಜನೆ ಜಾರಿಗೊಳಿಸಬೇಕು. ರೈತರು ಬಳಸುವ ಮೊಸರು, ಮಜ್ಜಿಗೆ, ಹಪ್ಪಳ, ರಸಗೊಬ್ಬರ, ಕೀಟನಾಶಕ, ನೀರಾವರಿ ಯಂತ್ರೋಪಕರಣಗಳ ಮೇಲಿನ ಜಿಎಸ್‌ಟಿ ರದ್ದುಪಡಿಸಬೇಕು. ಎಲ್ಲಾ ಕೃಷಿ ಉತ್ಪನ್ನಗಳಿಗೆ ಕೇಂದ್ರ ಸರ್ಕಾರ ಖಾತರಿ ಕನಿಷ್ಠ ಬೆಂಬಲ ಬೆಲೆ ಶಾಸನ ಜಾರಿಗೊಳಿಸಬೇಕು. ಹಾಲಿ ಇರುವ ಎಂಎಸ್‌ಪಿ ಜಾರಿ ಸಮಿತಿಯನ್ನು ರದ್ದುಗೊಳಿಸಬೇಕು ಎಂದು ಆಗ್ರಹಿಸಿದರು. ರೈತ ಬೇಡಿಕೆಗಳ ಬಗ್ಗೆ ಗಮನ ನೀಡದೆ ನಿರ್ಲಕ್ಷ್ಯ ಮಾಡಿದರೆ ವಾರದೊಳಗೆ ತಾಲೂಕಿನಾದ್ಯಂತ ರಸ್ತೆ ತಡೆ ಚಳುವಳಿ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಮೈಸೂರು ತಾಲೂಕು ಅಧ್ಯಕ್ಷ ಲಕ್ಷ್ಮೀಪುರ ವೆಂಕಟೇಶ್, ರೈತ ಸಂಘಟನೆಗಳ ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜ್, ಮುಖಂಡರಾದ ಲಕ್ಷ್ಮೀಪುರ ಶ್ರೀರಾಮ್, ಕಾಟೂರು ಮಹದೇವಸ್ವಾಮಿ, ಪಿ.ರಾಜು, ಸಾತಗಳ್ಳಿ ಕಾಟೂರು ಮಹದೇವಸ್ವಾಮಿ, ಪಿ.ರಾಜು, ಸಾತಗಳ್ಳಿ ಬಸವರಾಜ್, ವರಕೋಡು ನಾಗೇಶ್, ವಾಜಮಂಗಲ ಮಾದೇವು, ವಾಜಮಂಗಲ ಮಾದೇವ, ಮಾಲಿಂಗನಾಯಕ್, ಆರ್.ಎಸ್.ರಾಮೇಗೌಡ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರು ತಾಲೂಕು ಕಚೇರಿ ಮುಂದೆ ಕಬ್ಬು ಬೆಳೆಗಾರರು ತಮ್ಮ ಸಮಸ್ಯೆಗಳ ನಿವಾರಣೆಗೆ ಆಗ್ರಹಿಸಿ, ಪ್ರತಿಭಟನೆ ನಡೆಸಿದರು.

ವಾರಂಟ್ ಜಾರಿಗೆ ಲಂಚ: ಮದ್ದೂರು ಠಾಣೆ ಹೆಡ್ ಕಾನ್‌ಸ್ಟೇಬಲ್ ಎಸಿಬಿ ಬಲೆಗೆ

ಮೈಸೂರು, ಆ. 2(ಆರ್‌ಕೆ)– ಚೆಕ್ ಬೌನ್ಸ್ ಪ್ರಕರಣವೊಂದರಲ್ಲಿ ಆರೋಪಿಗೆ ವಾರಂಟ್ ಜಾರಿ ಮಾಡಲು ದೂರುದಾರನಿಂದ 1,500 ರೂ. ಲಂಚ ಪಡೆಯುತ್ತಿದ್ದ ಮದ್ದೂರು ಟೌನ್ ಪೊಲೀಸ್ ಠಾಣೆ ಹೆಡ್ ಕಾನ್‌ಸ್ಟೇಬಲ್ ಇಂದು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ)ದ ಬಲೆಗೆ ಬಿದ್ದಿದ್ದಾರೆ.



ಶ್ರೀಕಾಂತ್

ಶ್ರೀಕಾಂತ್ (ಹೆಚ್‌ಸಿ–49), ಲಂಚದ ಹಣದ ಸಮೇತ ಸಿಕ್ಕಿಬಿದ್ದವರು. ಮಂಡ್ಯ ಜಿಲ್ಲೆ ಮದ್ದೂರು ಟೌನ್ ಸ್ವಾಮಿ ವಿವೇಕಾನಂದನಗರ ನಿವಾಸಿ ಆನಂದ್ ಎಂಬುವರು ಬೋರೇಗೌಡ ಎಂಬುವರ ವಿರುದ್ಧ ಮದ್ದೂರು ಟೌನ್ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಚೆಕ್ ಬೌನ್ಸ್ ಪ್ರಕರಣ ದಾಖಲಿಸಿದ್ದರು.

ಆ ಸಂಬಂಧ ನ್ಯಾಯಾಲಯವು ಮೇ 2ರಂದು ಬೋರೇಗೌಡರನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸುವಂತೆ ವಾರಂಟ್ ಹೊರಡಿಸಿತ್ತು. ಈ ಸಂಬಂಧ ವಾರಂಟ್ ಜಾರಿಗೆ ಮದ್ದೂರು ಟೌನ್ ಪೊಲೀಸ್ ಠಾಣೆ ಹೆಡ್ ಕಾನ್‌ಸ್ಟೇಬಲ್ ಶ್ರೀಕಾಂತ್ 2000 ರೂ. ಹಣಕ್ಕೆ ಜುಲೈ 30ರಂದು ಪಿರ್ಯಾದಿ ಆನಂದ್‌ಗೆ ಬೇಡಿಕೆ ಇಟ್ಟಿದ್ದರು. ಕಡೆಗೆ 1500 ರೂ.ಗಳನ್ನು ನೀಡಲೇಬೇಕೆಂದು ಒತ್ತಾಯ ಮಾಡಿದ್ದರಿಂದ ಆನಂದ್, ನಿನ್ನೆ (ಸೋಮವಾರ) ಮಂಡ್ಯದ ಎಸಿಬಿ ಕಚೇರಿಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ಎಸಿಬಿ ಎಸ್ಪಿ ವಿ.ಜೆ. ಸಜೀತ್ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ನಡೆಸಿ ಮದ್ದೂರು ಟೌನ್ ನ್ಯಾಯಾಲಯದ ಹೊರ ಆವರಣದಲ್ಲಿ 1500 ರೂ. ಲಂಚ ಪಡೆಯುತ್ತಿದ್ದಾಗ ಮಂಗಳವಾರ ಬೆಳಗ್ಗೆ ಶ್ರೀಕಾಂತ್‌ನನ್ನು ಹಣದ ಸಮೇತ ಬಂಧಿಸಿದರು. ಮಂಡ್ಯ ಎಸಿಬಿ ಘಟಕಕ್ಕೆ ಕರೆತಂದು ತೀವ್ರ ವಿಚಾರಣೆಗೊಳಪಡಿಸಿದ ನಂತರ, ಆರೋಪಿಯನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿ ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು. ಡಿವೈಎಸ್ಪಿ ಮಾಥ್ಯೂ ಥಾಮಸ್, ಇನ್‌ಸ್ಪೆಕ್ಟರ್‌ಗಳಾದ ವಿನೋದ್‌ರಾಜ್, ಪುರುಷೋತ್ತಮ್ ಹಾಗೂ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಸುರತ್ಕಲ್ ಫಾಜಿಲ್ ಹತ್ಯೆ: 6 ಮಂದಿ ಆರೋಪಿಗಳ ಬಂಧನ

ಮೈಸೂರು,ಆ.2(ಆರ್‌ಕೆ)–ಇತ್ತೀಚೆಗೆ ಸುರತ್ಕಲ್‌ನಲ್ಲಿ ಮೊಹಮದ್ ಫಾಜಿಲ್ ಹತ್ಯೆಗೈದಿದ್ದ 6 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ. ಸುರತ್ಕಲ್‌ನ ದೀಕ್ಷಿತ್, ಶ್ರೀನಿವಾಸ, ಅಭಿಷೇಕ್, ಮಂಗಳೂರಿನ ಸುಹಾಸ್ ಶೆಟ್ಟಿ, ಮೋಹನ ಹಾಗೂ ಗಿರಿಧರ್ ಬಂಧಿತರು. ಕೊಲೆಯ ಹಿಂದಿನ ನಿಜವಾದ ಉದ್ದೇಶ ನಿಖರವಾಗಿ ತಿಳಿದಿಲ್ಲವಾದರೂ, ಜುಲೈ 26ರಂದು ನಡೆದಿದ್ದ ಬಿಜೆಪಿ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಕೊಲೆಗೆ ಪ್ರತೀಕಾರವಾಗಿ ಫಾಜಿಲ್‌ನನ್ನು ಕೊಲೆ ಮಾಡಲಾಗಿದೆ ಎಂದು ಹೇಳಲಾಗಿದೆ.

ಡ್ರ್ಯಾಗನ್ ಮತ್ತು ತಲ್ವಾರ್ ಬಳಸಿ ಫಾಜಿಲ್‌ನನ್ನು ಬರ್ಬರವಾಗಿ ಹತ್ಯೆಗೈಯ್ಯಲಾಗಿತ್ತು. ಆರಂಭದಲ್ಲಿ ಆರೇಳು ಮಂದಿಯನ್ನು ಕೊಲೆ ಮಾಡಲು ಸ್ಕೆಚ್ ಹಾಕಿದ್ದರಾದರೂ, ಕಡೆಗೆ ಫಾಜಿಲ್ ಟಾರ್ಗೆಟ್ ಆಗಿದ್ದಾನೆ ಎಂಬುದು ವಿಚಾರಣೆಯಿಂದ ತಿಳಿದು ಬಂದಿದೆ. ಬಂಧಿತರ ಪೈಕಿ ಓರ್ವ ಫಾಜಿಲ್‌ಗೆ ಚಿರಪರಿಚಿತನಾಗಿದ್ದು, ಆತನ ಚಲನ–ವಲನಗಳ ಬಗ್ಗೆ ಅರಿತವನಾಗಿದ್ದ.

ಕೊಲೆ ಮಾಡಿದ ನಂತರ ಎಲ್ಲಾ 6 ಮಂದಿ ಪಾತಕಿಗಳು, ಕೃತ್ಯಕ್ಕೆ ಬಳಸಿದ್ದ ಕಾರನ್ನು ಕಾರ್ಕಳ ಬಳಿಯ ಇನ್ನಾ ಗ್ರಾಮದ ಪೊದೆಯೊಂದರ ಬಳಿ ಬಿಟ್ಟು, ಉಡುಪಿ ಜಿಲ್ಲೆಯ ಉದ್ಯಾವರ ಎಂಬಲ್ಲಿ ಅಡಗಿದ್ದರು. ಪ್ರಕರಣದ ತನಿಖೆ ನಡೆಸುತ್ತಿದ್ದ ಪೊಲೀಸರು, ಸುಳಿವಿನ ಜಾಡು ಹಿಡಿದು ಅವರ ಪತ್ತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಉಳಿದಂತೆ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಶಂಕಿತರಿಬ್ಬರನ್ನು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸರು ನಿನ್ನೆ ಬೆಂಗಳೂರಲ್ಲಿ ವಶಕ್ಕೆ ಪಡೆದಿದ್ದಾರೆ. ಅವರನ್ನು ಬೆಳ್ಳಾರೆ ಸಮೀಪದ ಪಳ್ಳಿಮಜಲು ನಿವಾಸಿಗಳೆನ್ನಲಾದ ಸದ್ದಾಂ, ಹ್ಯಾರಿಸ್ ಎಂದು ಗುರುತಿಸಲಾಗಿದ್ದು, ತಲೆಮರೆಸಿಕೊಂಡಿರುವ ಇತರರಿಗಾಗಿ ಶೋಧಕಾರ್ಯ ನಿನ್ನೆ ಬೆಂಗಳೂರಲ್ಲಿ ನಡೆದಿದೆ.



ಸುನೀಲ್ ಶೆಟ್ಟಿ ಗಿರಿಧರ್ ದೀಕ್ಷಿತ್



ಅಭಿಷೇಕ್ ಮೋಹನ್ ಶ್ರೀನಿವಾಸ್

ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣ; ಮತ್ತಿಬ್ಬರು ಶಂಕಿತ ಹಂತಕರ ಬಂಧನ

ಮಂಗಳೂರು: ಬಿಜೆಪಿ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಹತ್ಯೆಗೆ ಸಂಬಂಧಿಸಿದಂತೆ ಮತ್ತಿಬ್ಬರು ಶಂಕಿತ ಹಂತಕರನ್ನು ದಕ್ಷಿಣ ಕನ್ನಡ ಜಿಲ್ಲೆಯ ಪೊಲೀಸರು ಬಂಧಿಸಿದ್ದಾರೆ. ಬೆಳ್ಳಾರೆ ಸಮೀಪದ ಪಳ್ಳಿಮಜಲು ನಿವಾಸಿಗಳಾದ ಸದ್ದಾಂ (32 ವರ್ಷ) ಹ್ಯಾರಿಸ್ (42 ವರ್ಷ) ಎಂದು ಎಸ್ಪಿ ಋಷಿಕೇಶ್ ಸೋನವಾನೆ ಗುರುತಿಸಿದ್ದಾರೆ. ಪ್ರಕರಣದಲ್ಲಿ ಭಾಗಿಯಾಗಿರುವ ಇನ್ನೂ ಕೆಲವರು ತಲೆಮರೆಸಿಕೊಂಡಿದ್ದು, ಅವರ ಪತ್ತೆಗೆ ತೀವ್ರ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಇಬ್ಬರ ವಿರುದ್ಧ ಬೆಳ್ಳಾರೆ ಪೊಲೀಸ್ ಠಾಣೆಯಲ್ಲಿ 1967ರ ಯುಎ(ಪಿ) ಕಾಯ್ದೆಯ ಸೆಕ್ಷನ್ 16, 18 ಮತ್ತು ಐಪಿಸಿ ಸೆಕ್ಷನ್ 302 ಮತ್ತು 120 ಬಿಆರ್/ ಡಬ್ಲ್ಯೂ 34 ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಈ ಪ್ರಕರಣದಲ್ಲಿ ಇಬ್ಬರು ಆರೋಪಿಗಳಾದ ಶಫೀಕ್ ಮತ್ತು ಜಾಕೀರ್ ಎಂಬುವರನ್ನು ಜುಲೈ 28ರಂದು ಬಂಧಿಸಲಾಗಿತ್ತು. ಈ ಆರೋಪಿಗಳನ್ನು ಪೊಲೀಸರ ವಶಕ್ಕೆ ಪಡೆದ ನಂತರ ವಿಚಾರಣೆ ಮುಂದುವರೆಸಿದಾಗ ಸಿಕ್ಕ ಮತ್ತಷ್ಟು ಸಾಕ್ಷಿ ಆಧಾರಗಳೊಂದಿಗೆ ಸದ್ದಾಂ ಮತ್ತು ಹ್ಯಾರಿಸ್ ಅವರನ್ನು ಬಂಧಿಸಲಾಗಿದೆ.

ನಿಗಮ–ಮಂಡಳಿ ಅಧ್ಯಕ್ಷ ಸ್ಥಾನ ಕಲ್ಪಿಸಲು ಮನವಿ

ಮೈಸೂರು,ಆ.2(ಪಿಎಂ)– ಮೈಸೂರು ನಗರ ಬಿಜೆಪಿ ಎಸ್‌ಸಿ ಮೋರ್ಚಾದ ಪ್ರಧಾನ ಕಾರ್ಯದರ್ಶಿ ಎಂ.ನರಸಿಂಹಮೂರ್ತಿ ಅವರಿಗೆ ಯಾವುದಾದರೂ ನಿಗಮ ಅಥವಾ ಮಂಡಳಿಯ ಅಧ್ಯಕ್ಷರಾಗಿ ನೇಮಕ ಮಾಡುವಂತೆ ಅಖಿಲ ಕರ್ನಾಟಕ ಶ್ರಮಜೀವಿ ಕಟ್ಟಡ ಕಾರ್ಮಿಕ ಮಹಾಸಭಾದ ಪದಾಧಿಕಾರಿಗಳು ಕೋರಿದರು. ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮಹಾಸಭಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವಕುಮಾರ್, ಪಕ್ಷದ ನಿಷ್ಠಾವಂತ ಕಾರ್ಯಕರ್ತರಾದ ಎಂ.ನರಸಿಂಹಮೂರ್ತಿ, ನಮ್ಮ ಮಹಾಸಭಾದ ಸಂಸ್ಥಾಪಕರು ಹಾಗೂ ರಾಜ್ಯಾಧ್ಯಕ್ಷರಾಗಿ ಕಟ್ಟಡ ಕಾರ್ಮಿಕರ ಪರವಾಗಿ ಹಲವು ಸೇವಾ ಕಾರ್ಯ ಮಾಡಿದ್ದಾರೆ. ಕೋವಿಡ್ ಸಂದರ್ಭದಲ್ಲಿ ಕಾರ್ಮಿಕರ ಕುಟುಂಬಕ್ಕೆ ಸಾಕಷ್ಟು ನೆರವಾಗಿದ್ದಾರೆ. ಹಾಗಾಗಿ ಸರ್ಕಾರ ಅವರ ಸೇವೆಯನ್ನು ಪರಿಗಣಿಸಬೇಕು ಎಂದು ಮನವಿ ಮಾಡಿದರು. ಮಹಾಸಭಾದ ರಾಜ್ಯ ಉಪಾಧ್ಯಕ್ಷರಾದ ಅಂದನಪ್ಪ, ಮಂಟೇಲಿಂಗು ಸುದ್ದಿಗೋಷ್ಠಿಯಲ್ಲಿದ್ದರು.

ಬಲಿಜ ಸಮುದಾಯದ ಮಕ್ಕಳಿಗೆ ಆ.14ರಂದು ಪ್ರತಿಭಾ ಪುರಸ್ಕಾರ, ಹಿರಿಯ ನಾಗರಿಕರಿಗೆ ಸನ್ಮಾನ



ಮೈಸೂರು,ಆ.2(ಪಿಎಂ)– ಶ್ರೀ ಕೈವಾರ ಯೋಗಿ ನಾರಾಯಣೇ ಯತೀಂದ್ರರ ಬಲಿಜ (ಬಣಜಿಗ) ಸಂಘದ ವತಿಯಿಂದ ಆ.14ರಂದು ಸಮುದಾಯದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಹಿರಿಯ ನಾಗರಿಕರಿಗೆ ಸನ್ಮಾನ ಸಮಾರಂಭ ಏರ್ಪಡಿಸಲಾಗಿದೆ ಎಂದು ಸಂಘದ ಕಾರ್ಯದರ್ಶಿ ಜಿ.ರಾಮು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10.30ಕ್ಕೆ ಮೈಸೂರು ವಿವಿಯ ಲಲಿತ ಕಲಾ ಕಾಲೇಜು ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದೆ. ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇ.90ಕ್ಕಿಂತ ಅಧಿಕ ಅಂಕ ಪಡೆದ ಮೈಸೂರು ಜಿಲ್ಲೆಯ ಸಮುದಾಯದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು ಎಂದರು.

ಆಸಕ್ತ ವಿದ್ಯಾರ್ಥಿಗಳು ಆ.10ರೊಳಗೆ ಅಂಕಪಟ್ಟಿಯ ಜೆರಾಕ್ಸ್ ಪ್ರತಿಯನ್ನು ಸಂಘದ (ನಂ.1855, ಬಂಗಾರಗಿರಿ ನಿವಾಸ, ರತನ್‌ಸಿಂಗ್ 2ನೇ ಮೇನ್, ಮಂಡಿ ಮೊಹಲ್ಲಾ, ಮೈಸೂರು–21) ವಿಳಾಸಕ್ಕೆ ಕಳುಹಿಸಬಹುದು. ಹೆಚ್ಚಿನ ವಿವರಗಳಿಗೆ ಮೊ.ಸಂ. 99720 80466 ಅನ್ನು ಸಂಪರ್ಕಿಸಬಹುದು. ಅಲ್ಲದೆ, ಅಂದು ಸಮುದಾಯದ ವಧು–ವರರ ಅನ್ವೇಷಣಾ ಕಾರ್ಯಕ್ರಮ ಸಹ ಹಮ್ಮಿಕೊಳ್ಳಲಾಗಿದೆ. ಜೊತೆಗೆ ಸಮುದಾಯದ ಹಿರಿಯ ನಾಗರಿಕರನ್ನು ಸನ್ಮಾನಿಸಲಾಗುವುದು ಎಂದು ಹೇಳಿದರು.

ಬೆಂಗಳೂರಿನ ನ್ಯೂ ಬಾಲ್ಡ್‌ವಿನ್ ವಿದ್ಯಾಸಂಸ್ಥೆಗಳ ಸಂಸ್ಥಾಪಕ ಡಾ.ಟಿ.ವೇಣುಗೋಪಾಲ್, ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್, ಕುಲಸಚಿವ ಪ್ರೊ.ಆರ್.ಶಿವಪ್ಪ, ಮೈಸೂರು ಬಲಿಜ ಜಿಲ್ಲಾ ಸಂಘದ ಸಂಸ್ಥಾಪಕ ರೇಣು, ಅರಗು ಮತ್ತು ಬಣ್ಣ ಕಾರ್ಖಾನೆ ಮಾಜಿ ಅಧ್ಯಕ್ಷ ಹೆಚ್.ಎ.ವೆಂಕಟೇಶ್ ಮತ್ತಿತರರು ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು. ಸಂಘದ ಅಧ್ಯಕ್ಷ ಟಿ.ಕೆ.ಉಮೇಶ್, ಉಪಾಧ್ಯಕ್ಷ ಹೆಚ್.ಕೆ.ಮೋಹನ್‌ಕುಮಾರ್, ಪದಾಧಿಕಾರಿಗಳಾದ ರಾಜು, ಚಂದ್ರಶೇಖರ್ ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.

ಮಂಕಿಪಾಕ್ಸ್ ಬಗ್ಗೆ ಆತಂಕಪಡುವ ಅಗತ್ಯವಿಲ್ಲ

ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಅಭಯ

ಕೇರಳ–ಕರ್ನಾಟಕ ಗಡಿ ಭಾಗದ ಜಿಲ್ಲೆಗಳಲ್ಲಿ ಕಟ್ಟುನಿಟ್ಟಿನ ನಿಗಾ ವಹಿಸಲು ಸೂಚನೆ

ಬೆಂಗಳೂರು,ಆ.2–ಮಂಕಿಪಾಕ್ಸ್ ಬಗ್ಗೆ ರಾಜ್ಯದ ಜನರು ಆತಂಕಪಡಬೇಕಿಲ್ಲ. ಕೇರಳ–ಕರ್ನಾಟಕ ಗಡಿ ಭಾಗದ ಜಿಲ್ಲೆಗಳಲ್ಲಿ ಕಟ್ಟುನಿಟ್ಟಿನ ನಿಗಾ ಇಡಲು ಸೂಚಿಸಲಾಗಿದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಸುಧಾಕರ್ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ತಾಂತ್ರಿಕ ಸಲಹಾ ಸಮಿತಿ ಜೊತೆ ವಿಶೇಷ ಸಭೆಯ ಬಳಿಕ ಮಾತನಾಡಿದ ಅವರು, ವಿಶ್ವ ಆರೋಗ್ಯ ಸಂಸ್ಥೆ ಜುಲೈ 22ರಂದು ಮಂಕಿಪಾಕ್ಸ್ ಅನ್ನು 'ತುರ್ತು ಆರೋಗ್ಯ ಪರಿಸ್ಥಿತಿ' ಎಂದು ಘೋಷಿಸಿದೆ. ಸುಮಾರು 80 ದೇಶಗಳ 20,000 ಜನರಿಗೆ ಈ ಸೋಂಕು ಹರಡಿದೆ. ಭಾರತದಲ್ಲಿ 6 ಪ್ರಕರಣಗಳು ಕಂಡು ಬಂದಿವೆ. ಕೇರಳದಲ್ಲಿ 4 ಮತ್ತು ದೆಹಲಿಯಲ್ಲಿ ಇಬ್ಬರು ಸೋಂಕಿತರಿದ್ದಾರೆ. ಕರ್ನಾಟಕದಲ್ಲಿ 3 ವ್ಯಕ್ತಿಗಳ ಮೇಲೆ ಸಂಶಯದ ಆಧಾರದಲ್ಲಿ ಪರೀಕ್ಷೆ ನಡೆಸಿದ್ದೇವೆ. ಈ ಪೈಕಿ ಬೆಂಗಳೂರಿನ ಇಬ್ಬರ ವರದಿ ನೆಗೆಟಿವ್ ಬಂದಿದೆ. ಬೆಲ್ಜಿಯಂನಿಂದ ಬಂದಿರುವ ಉತ್ತರಕನ್ನಡದ ವ್ಯಕ್ತಿಯ ಪರೀಕ್ಷೆ ಫಲಿತಾಂಶ ಇನ್ನಷ್ಟೇ ಬರಬೇಕಿದೆ ಎಂದರು.



ಮಂಕಿಪಾಕ್ಸ್ ಬಗ್ಗೆ ರಾಜ್ಯದ ಜನರು ಆತಂಕಪಡಬೇಕಾದ ಅಗತ್ಯವಿಲ್ಲ. ಸೋಂಕಿತರಿಗಾಗಿ ಬೆಂಗಳೂರಿನ ಸಾಂಕ್ರಾಮಿಕ ರೋಗಗಳ (ಇ.ಡಿ) ಆಸ್ಪತ್ರೆ ಹಾಗೂ ಮಂಗಳೂರಿನ ವೆನ್ಲಾಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲು ವಿಶೇಷ ವ್ಯವಸ್ಥೆ ಮಾಡಲಾಗಿದೆ. ಯಾವುದೇ ವ್ಯಕ್ತಿಗೆ ಸೋಂಕು ದೃಢಪಟ್ಟರೆ ಅವರನ್ನು 21 ದಿನಗಳ ಕಾಲ ಐಸೋಲೇಟ್ ಮಾಡಬೇಕು. 21 ದಿನ ಆಸ್ಪತ್ರೆಯಲ್ಲೇ ಇರಿಸಿ ಚಿಕಿತ್ಸೆ ನೀಡಲಾಗುತ್ತದೆ. ಚರ್ಮದ ಮೇಲೆ ಆಗಿರುವ ಗಾಯ ಗುಣಮುಖ ಆಗುವವರೆಗೆ ಅವರನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗುವುದಿಲ್ಲ ಎಂದು ಡಾ.ಸುಧಾಕರ್ ತಿಳಿಸಿದರು.

ಮಂಕಿಪಾಕ್ಸ್ ಆರಂಭದಲ್ಲಿ ಜ್ವರ, ಚರ್ಮದ ಮೇಲೆ ತುರಿಕೆಗಳು ಕಂಡು ಬಂದು ನಂತರ ದೊಡ್ಡ ಗುಳ್ಳೆಗಳಾಗುತ್ತವೆ. ಈ ಲಕ್ಷಣ ಇದ್ದವರನ್ನು ತಪಾಸಣೆ ಮಾಡಲಾಗುವುದು. ಮುಖ್ಯಮಂತ್ರಿಗಳ ಸೂಚನೆಯಂತೆ, ವಿಮಾನ ನಿಲ್ದಾಣಗಳಲ್ಲಿ ಥರ್ಮಲ್ ಸ್ಕ್ರೀನಿಂಗ್ ಮಾಡಲಾಗುತ್ತಿದೆ. ಅನುಮಾನ ಬಂದರೆ ತಪಾಸಣೆ ಮಾಡಿ ಆಸ್ಪತ್ರೆಗೆ ದಾಖಲಿಸಲಾಗುತ್ತಿದೆ. ವರದಿಗಳು ಹೇಳುವ ಪ್ರಕಾರ ಸೋಂಕಿತರ ಜೊತೆ ದೀರ್ಘ ಕಾಲದ ಸಂಪರ್ಕ ಹೊಂದಿರುವವರಿಗೆ ಮಾತ್ರ ಇದು ಹರಡಲು ಸಾಧ್ಯವಿದೆ. ಕೋವಿಡ್ ರೀತಿ ಹರಡುವ ಸಾಂಕ್ರಾಮಿಕ ರೋಗ ಇದಲ್ಲ ಎಂದು ಸ್ಪಷ್ಟಪಡಿಸಿದರು. ರಾಜ್ಯದಲ್ಲಿ ವಿಶೇಷವಾಗಿ ಕೇರಳ ಗಡಿ ಭಾಗದ ಜಿಲ್ಲಾಧಿಕಾರಿಗಳಿಗೆ ವಿಶೇಷ ಸೂಚನೆ ನೀಡಲಾಗಿದೆ. ಎಲ್ಲಾ ಭಾಗಗಳಲ್ಲೂ ಕಟ್ಟೆಚ್ಚರದಿಂದ ಇರಲು ಸೂಚಿಸಲಾಗಿದೆ. ಸದ್ಯ ರಾಜ್ಯದ ಜನರು ಆತಂಕಪಡುವ ಅಗತ್ಯವಿಲ್ಲ. ಮುನ್ನೆಚ್ಚರಿಕೆ ಮತ್ತು ಶುಚಿತ್ವ ಕಾಪಾಡಿಕೊಂಡರೆ ಸಾಕು ಎಂದು ಸಚಿವರು ತಿಳಿಸಿದರು.

2ನೇ ವರ್ಷದ ಸವಿನೆನಪು



ಶ್ರೀಮತಿ ಪುಟ್ಟತಾಯಮ್ಮ

ದುಃಖತಪ್ತರು: ಸಿ.ಆರ್. ಶ್ರೀನಿವಾಸ ಮತ್ತು ಕುಟುಂಬವರ್ಗದವರು

ತೀವ್ರ ಹೃದಯಾಘಾತದಿಂದ ವಿದ್ಯಾರ್ಥಿನಿ ಸಾವು

ಮೈಸೂರು,ಆ.2(ಆರ್‌ಕೆ)–ತೀವ್ರ ಹೃದಯಾಘಾತದಿಂದ ಮೈಸೂರಿನಲ್ಲಿ ವಿದ್ಯಾರ್ಥಿನಿ ಮಂಗಳವಾರ ಮೃತಪಟ್ಟಿದ್ದಾಳೆ. ಮೈಸೂರಿನ ಪೊಲೀಸ್ ಲೇಔಟ್ (ಐಪಿಎಸ್ ಶ್ರೀನಿವಾಸನ್ ಬಡಾವಣೆ) 3ನೇ ಹಂತದ ನಿವಾಸಿ ಚಾಮರಾಜನಗರ ಡಿಎಆರ್ ಹೆಡ್ ಕಾನ್‌ಸ್ಟೇಬಲ್ ನಂಜುಂಡಪ್ಪ ಅವರ ಪುತ್ರಿ ಸ್ಪಂದನಾ (19) ಮೃತಪಟ್ಟವರು. ಮೂಲತಃ ಗುಂಡ್ಲುಪೇಟೆ ತಾಲೂಕು ಚೌಡಹಳ್ಳಿ ಗ್ರಾಮದ ನಂಜುಂಡಪ್ಪ ಅವರು ಮೈಸೂರಿನಲ್ಲಿ ಕುಟುಂಬ ಸಮೇತ ವಾಸವಾಗಿದ್ದರು.



ಮೈಸೂರಿನ ಇಂಜಿನಿಯರಿಂಗ್ ಕಾಲೇಜೊಂದರಲ್ಲಿ ಎಲೆಕ್ಟ್ರಿಕಲ್ ವಿಭಾಗದಲ್ಲಿ ಡಿಪ್ಲೋಮಾ ವ್ಯಾಸಂಗ ಮಾಡುತ್ತಿದ್ದ ಸ್ಪಂದನಾಗೆ ಸೋಮವಾರ ಬೆಳಗ್ಗೆ 7.30 ಗಂಟೆ ವೇಳೆಗೆ ಎದೆ ನೋವು ಕಾಣಿಸಿಕೊಂಡಿದೆ. ತಕ್ಷಣ ಆಕೆಯನ್ನು ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಇಂದು ಮುಂಜಾನೆ ಕೊನೆಯುಸಿರೆಳೆದರು ಎಂದು ಮೂಲಗಳು ತಿಳಿಸಿವೆ. ಮಂಗಳವಾರ ಸಂಜೆ ಸ್ವಗ್ರಾಮ ಚೌಡಹಳ್ಳಿಯಲ್ಲಿ ಸ್ಪಂದನಾಳ ಅಂತ್ಯಕ್ರಿಯೆ ನೆರವೇರಿಸಲಾಯಿತು. ಆಕೆ ತಂದೆ, ತಾಯಿ, ಇಬ್ಬರು ಸಹೋದರಿಯರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ವಿಷ ಸೇವಿಸಿ ಯುವಕ ಆತ್ಮಹತ್ಯೆ

ಮೈಸೂರು, ಆ.2(ಆರ್‌ಕೆ)– ಜೀವನದಲ್ಲಿ ಜಿಗುಪ್ಸೆಗೊಂಡು ಯುವಕನೋರ್ವ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮೈಸೂರಿನ ಮೇದರ್ ಬ್ಲಾಕ್‌ನಲ್ಲಿ ಸಂಭವಿಸಿದೆ. ಹನುಮ ಅವರ ಮಗ ರಘು ಅಲಿಯಾಸ್ ಅವಿ (24) ಸಾವನ್ನಪ್ಪಿದವರು. ಪ್ಲೈವುಡ್ ಅಂಗಡಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಆತ ಕಳೆದ 3 ದಿನಗಳ ಹಿಂದೆ ವಿಷ ಸೇವಿಸಿ ಅಸ್ವಸ್ಥನಾಗಿದ್ದ. ತಕ್ಷಣ ಅವರನ್ನು ಕೆ.ಆರ್. ಆಸ್ಪತ್ರೆಗೆ ದಾಖಲು ಮಾಡಲಾಗಿತ್ತಾದರೂ, ಚಿಕಿತ್ಸೆ ಫಲಕಾರಿಯಾಗದೆ ಕಳೆದ ಮಧ್ಯರಾತ್ರಿ ಕೊನೆಯುಸಿರೆಳೆದರು. ಪ್ರಕರಣ ದಾಖಲಿಸಿಕೊಂಡಿರುವ ಮಂಡಿ ಠಾಣೆ ಪೊಲೀಸರು ಮಂಗಳವಾರ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ದೇಹವನ್ನು ವಾರಸುದಾರರಿಗೆ ಒಪ್ಪಿಸಿದರು. ಆತ್ಮಹತ್ಯೆಗೆ ಕಾರಣ ತಿಳಿದುಬಂದಿಲ್ಲ.





ಮುಖ್ಯಮಂತ್ರಿ ಬೊಮ್ಮಾಯಿ ಅಭಿನಂದಿಸಿದ ರಘು ಕೌಟಿಲ್ಯ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಮಂಗಳವಾರ ಭೇಟಿ ಮಾಡಿ ಕೃತಜ್ಞತೆ ಸಲ್ಲಿಸಿದ ಮೈಸೂರು ಪೇಂಟ್ಸ್ ಅಂಡ್ ವಾರ್ನಿಷ್ ಲಿ.ನ ಅಧ್ಯಕ್ಷ ಆರ್.ರಘು ಕೌಟಿಲ್ಯ ಅವರು, ಸಂಸ್ಥೆಯ 75ನೇ ವರ್ಷದ ಸಂಭ್ರಮದ ಅಮೃತ ಮಹೋತ್ಸವ ಆಚರಣೆ ಕುರಿತು ಮುಖ್ಯಮಂತ್ರಿಗಳಿಗೆ ವಿವರಣೆ ನೀಡಿದರು.

IN THE COURT OF THE PRINCIPAL III FAMILY COURT AT MYSURU
O.S. No. 21 OF 2022

Plaintiff: Smt. Harshitha P. D/o Sri Puttaswamy Aged about 20 years, R/at No. 2480/1A, 3rd Cross, Hosa bandikeri, K.R. Mohalla, Mysuru.

Vs

Defendant : Darshan J.K. S/o Sri Kantharaj, Aged about 25 years, R/at Jadaganakoppalu Village, Kasaba Hobli, Bannikuppe Post, Hunsuru Taluk, Mysuru District.

PAPER PUBLICATION

That the Plaintiff has filed the above suit against the Defendant seeking the relief of Declaration on nullity of marriage with the Defendant and hearing date of the above case has been fixed on 09.09.2022 at 11.00 O'Clock. Hence, Defendant is hereby called upon to appear in person or along with pleader to answer the above suit otherwise above case will be heard and disposed off ex-parte.

Date: 02.08.2022
Place: Mysuru

By Order of the Court
Sd/- Shirasthedar
Family Court
at Mysuru

ಮೈಸೂರು ಮಿತ್ರ 43
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ನಮ್ಮ ಕಕ್ಷಿದಾರರಾದ ಮೈಸೂರು ನಗರ, ಚಾಮರಾಜ ಮೊಹಲ್ಲಾ, ಧೋಗಾದಿ, ನಿವೇದಿತನಗರ, ಆಶ್ರಯ ಬಡಾವಣೆ, ಮನೆ ನಂ: 902 ರಲ್ಲಿ ವಾಸವಾಗಿರುವ ಎಂ.ಆಶೀಶ್ ಕುಮಾರ್ ಬಿನ್ ಲೇಟ್ ಕೆ.ಮುತ್ತುಕುಮಾರ್‌ಸ್ವಾಮಿ ರವರು ಈ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಪಡೆದುಕೊಳ್ಳಲು ಇಚ್ಛಿಸಿದ್ದು, ಈ ವಿಷಯವಾಗಿ ನೋಂದಾಯಿತ ಕ್ರಯದ ಕರಾರನ್ನು ಸದರಿ ಸ್ವತ್ತಿನ ಮಾಲೀಕರಿಂದ ಮಾಡಿಕೊಳ್ಳಲು ಮುಂದಾಗಿರುತ್ತಾರೆ. ಆದ್ದರಿಂದ ಈ ವಿಷಯವಾಗಿ ಯಾರಿಗಾದರು ಯಾವುದೇ ರೀತಿಯಾ ಹಕ್ಕು–ಬಾಧ್ಯತೆ ಹಾಗೂ ಹಿತಾಸಕ್ತಿಗಳು ಇದ್ದಂತಹ ಪಕ್ಷದಲ್ಲಿ ಇದಕ್ಕೆ ಸಂಬಂಧಪಟ್ಟಂತಹ ತಕರಾರನ್ನು ಈ ಪತ್ರಿಕಾ ಪ್ರಕಟಣೆಯ ದಿನದಿಂದ 7 ದಿನದೊಳಗಾಗಿ ನಮ್ಮ ಕಛೇರಿಯ ವಿಳಾಸಕ್ಕೆ ನೋಂದಾಯಿತ ಅಂಚೆಯ ಮೂಲಕ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಸದರಿ ಸ್ವತ್ತಿನ ಮೇಲೆ ನಮ್ಮ ಕಕ್ಷಿದಾರರಿಗೆ ಇರುವಂತಹ ಯಾವುದೇ ಹಕ್ಕು–ಬಾಧ್ಯತೆ, ಹಿತಾಸಕ್ತಿಯನ್ನು ಪ್ರಶ್ನಿಸುವ ಮತ್ತು ಯಾವುದೇ ತಕರಾರು ಮಾಡುವ ಹಕ್ಕು ಯಾರಿಗೂ ಸಹ ಇರುವುದಿಲ್ಲವೆಂದು ತಿಳಿಯತಕ್ಕದ್ದು.

: ಷೆಡ್ಯೂಲ್ ಸ್ವತ್ತಿನ ವಿವರ :

ಮೈಸೂರು ತಾಲ್ಲೂಕು, ವರುಣ ಹೋಬಳಿ, ವರಕೋಡು ಗ್ರಾಮಕ್ಕೆ ಸೇರಿದ ಸರ್ವೇ ನಂ: 547/1 ರಲ್ಲಿ ಸಾಕಮ್ಮ ಕೋಂ ಲೇಟ್ ಕಾಳಾಚಾರಿ ಹಾಗೂ ಅವರ ಕುಟುಂಬದವರ ಹೆಸರಿನಲ್ಲಿರುವ ವಿಸ್ತೀರ್ಣ 1 ಎಕರೆಯಲ್ಲಿ ಅದರ ಪೈಕಿ 13 ಗುಂಟೆ ಜಮೀನು ಮತ್ತು ಡಿಟೋ ಸರ್ವೇ ನಂ: 547/1 ರಲ್ಲಿ ಭಾಗೀರಥಮ್ಮ ಕೋಂ ಲೇಟ್ ಶಿವಣ್ಣಾಚಾರ್ ಹಾಗೂ ಅವರ ಕುಟುಂಬದವರ ಹೆಸರಿನಲ್ಲಿರುವ ವಿಸ್ತೀರ್ಣ 20 ಗುಂಟೆಯಲ್ಲಿ ಅದರ ಪೈಕಿ 11 ಗುಂಟೆ ಜಮೀನು, ಇದರ ಪೂರಾ ವಿಸ್ತೀರ್ಣ 24 ಗುಂಟೆ ಜಮೀನು, ಇದಕ್ಕೆ ಚೆಕ್ಕುಬಂದಿ: ಪೂರ್ವಕ್ಕೆ : ಸರ್ವೆ ನಂ. 547/2 ರಲ್ಲಿರುವ ವಿಶಕಂಠ ಬಿನ್ ಲೇಟ್ ನಂಜೇಗೌಡ ರವರ ಜಮೀನು, ಪಶ್ಚಿಮಕ್ಕೆ: ಸರ್ಕಾರಿ ಓಣಿ, ಉತ್ತರಕ್ಕೆ: ಸರ್ಕಾರಿ ಓಣಿ, ದಕ್ಷಿಣಕ್ಕೆ: ಸರ್ವೆ ನಂ.547/1 ರಲ್ಲಿನ ಉಳಿಕೆ ಸ್ವತ್ತು.

ಸಹಿ/– ಎಂ.ಪಿ.ಬಾಬು
ಬಿ.ಎಸ್ಸಿ., ಎಲ್‌ಎಲ್.ಬಿ., ವಕೀಲರು
ನಂ.448, ಹೊಸ ನಂ. ಎಫ್–5, 2ನೇ ಮಹಡಿ, ಎಸ್.ಪಿ.ಎನ್ ಕಾಂಪ್ಲೆಕ್ಸ್, ಎಂ.ಜಿ.ರಸ್ತೆ, ಅಗ್ರಹಾರ, ಮೈಸೂರು – 04. ಮೊ: 9448753311
ಸ್ಥಳ: ಮೈಸೂರು
ದಿನಾಂಕ: 02–08–2022.

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು, ನನ್ನ ಕಕ್ಷಿದಾರರು ಅದರ ಮಾಲೀಕರಾದ, ತಮಿಳುನಾಡು ರಾಜ್ಯ, ತೇಣಿ ಜಿಲ್ಲೆ, ತೇಣಿ ತಾಲ್ಲೂಕು, ಪಳನಿಚೆಟ್ಟಿಪಟ್ಟಿ, ಬೂತಿಪುರಂ ರಸ್ತೆ, ಮನೆ ನಂಬರ್ 16/ಸಿ ರಲ್ಲಿ ವಾಸವಾಗಿರುವ (1) ಎ. ರಾಜಗೋಪಾಲನ್ ಬಿನ್ ಅಣ್ಣಾಮಲೈ ನಡರ್, (2) ಕನಗೆ ಸಬ್ಬೈ ಬಿನ್ ಎ. ರಾಜಗೋಪಾಲನ್ ಮತ್ತು ಅವರ ಕುಟುಂಬದ ಸದಸ್ಯರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಬಾರೆಯ ವಿಚಾರದಲ್ಲಿ ಅದರ ಮಾಲೀಕರನ್ನು ಹೊರತುಪಡಿಸಿ ಇತರೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಹತ್ತು (10) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು, ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್

ಮೈಸೂರು ನಗರ, ಖಿಲ್ಲೆ ಮೊಹಲ್ಲಾ, ಇಂಡಸ್ಟ್ರಿಯಲ್ ಸಬರ್ಬ್– 3ನೇ ಹಂತದಲ್ಲಿರುವ ಪೂರ್ವ–ಪಶ್ಚಿಮ: 199 ಅಡಿಗಳು, ಉತ್ತರ–ದಕ್ಷಿಣ: 200 ಅಡಿಗಳು, ಒಟ್ಟು ವಿಸ್ತೀರ್ಣ: 39800 ಚದರ ಅಡಿ ಅಳತೆಯ ಕೈಗಾರಿಕಾ ನಿವೇಶನ ಸಂಖ್ಯೆ: 27/ಬಿ ಮತ್ತು ಇದರಲ್ಲಿರುವ 7392 ಚದರ ಅಡಿ ಕಟ್ಟಡ, ಇದಕ್ಕೆ ಚೆಕ್ಕುಬಂದಿ – ಪೂರ್ವಕ್ಕೆ: ಕೈಗಾರಿಕಾ ನಿವೇಶನ ಸಂಖ್ಯೆ: 27/ಎ; ಪಶ್ಚಿಮಕ್ಕೆ: ರಸ್ತೆ ; ಉತ್ತರಕ್ಕೆ: ಕೈಗಾರಿಕಾ ನಿವೇಶನ ಸಂಖ್ಯೆ: 27/ಡಿ ; ದಕ್ಷಿಣಕ್ಕೆ: ರಸ್ತೆ.

ಸಹಿ/– ಎಂ.ಎಸ್.ಪ್ರಕಾಶ್ ಕಾಳಪ್ಪ, ವಕೀಲರು
KAR 1996-2000
#2-3, First Floor, PRI Complex, 67/7A, New Sayyaji Rao Road, Fort Mohalla, Mysore-570 004. Cell: 93431 12535
ಮೈಸೂರು: 02/08/2022

IN THE COURT OF HON'BLE CIVIL JUDGE (Sr. Dn.) AND CJM COURT AT MYSURU
P & S.C.No. 25 /2022

PETITIONER: 1. Sri. K.N. DIWAKARA S/o Late K.K. Narasimhamurthy, Aged about 58 years R/a No. 1158/CH22, Bajjanna Lane, Chamundipuram, Mysuru
2. Sri. VIJAYANARASIMHA S.L. S/o Late S. Lakshminarasimhaiah, Aged about 77 years R/a No. 368, Vidyapeeta Main Road, Opposite to Ganapathi Temple, Banashankari 3rd Stage, Bengaluru – 560 085

V/s

RESPONDENT : NIL

PUBLIC NOTICE

The Petitioner's have filed the above petition under section 372 of Indian Succession Act for grant of Succession Certificate in respect of the schedule property.

If any person having any claim, interest or objections in granting Succession Certificate in favour of the Petitioner', may appear before this Hon'ble Court on 17-09-2022 at 11.00 A.M. Either in person or through Counsel duly instructed. Failing which, the matter will be heard and decided in accordance with law.

Sl.No.	FD Receipt No.	FD Amount	Bequeathed to / Beneficiaries
1.	50100001202597289	4,50,000/-	Administrative Officer, **Horanadu Annapurneshwari Temple**, Horanadu
2.	50100001205107334	5,00,000/-	Administrative Officer, **Sringeri Sharada Peetha, Sringeri**, Chikkamangaluru
3.	501000012025110719	2,00,000/-	Administrative Officer, **Sri Kshetra Dharmasthala, Sri Manjunatha Swamy Temple**, South Canara
4.	501000012025120468	1,00,000/-	Administrative Officer, **Orphanage [Anathalaya]**, Near Shanthala Talkies, Narayana Shastry Road, Mysuru
5.	501000012025111509	1,00,000/- equally 50% each to	**1. Sri Sharada Vilas Education Institutes**, 3rd Cross, Krishna Murthy Puram, Mysuru **AND Bidaram Krishnappa Rama Mandira**, No. 1220/B, Narayana Shastry Road, Bidara Krishnappa Road, Chamarajapuram, Devaraja Mohalla, Mysuru
6.	SB A/c No. 5262500101886201	Balance amount	Karnataka Bank Ltd., J.P. Nagar Branch, Mysuru, Joint A/c held with Petitioner No. 1 & deceased S.L. Anantha Padmanabha
7.	SB A/c No. 01200219528	Balance amount	Railway Co-operative Bank Ltd., Sheshadri Iyer Road, Mysuru
8.	501000012025113340	3,00,000/-	Distributed equally to all three daughters viz., A. Rajeshwari @ Pushpa, A. Meenakshi and M.A. Kavitha After deducting the expenses incurred for performing my last rituals
9.	501000012025113341	3,00,000/-	
10.	50100001202591113	5,00,000/-	

Given under my hand and seal of this Hon'ble court on this the 16th day of July 2022.

SLD Law Firm
Srilatha Dixit, BB.M. LLB,
#1458/A, N.S. Road, Mysuru.

By order of the court
Chief Administrative Officer
Civil Judge (Sr. Dn.), Mysuru.

ನಕ್ಕರೆ ಅದೇ ಸ್ವರ್ಗ

ಅಮ್ಮ : ಯಾಕೆ ದಿನವೂ ನಿಮ್ಮಪ್ಪನ ಹೆಸರು ಬರೆದ ಚೀಟಿಯನ್ನು ಫ್ರಿಡ್ಜ್‌ನಲ್ಲಿ ಇಡ್ತೀಯಾ?

ಮಗ : ನಮ್ಮಪ್ಪನ ಹೆಸರು ಕೆಡಬಾರದು ಅಂತ!

ಮೈಸೂರು ಮಿತ್ರ

ಬುಧವಾರ, 3 ಆಗಸ್ಟ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ತಿರಸ್ಕರಿಸಲಾಗದ ಒಂದು ಸುಖವಿದೆ; ಅದೇ ಇನ್ನೊಬ್ಬರಿಗಾಗಿ ಬದುಕು ಸವೆಸುವುದು. –ಟಾಲ್‌ಸ್ಟಾಯ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ತಾಯಿ ಇದ್ದರೆ ತವರೆಚ್ಚು, ತಂದೆ ಇದ್ದರೆ ಬಳಗ ಹೆಚ್ಚು

ನಿಮ್ಮ ಪತ್ರಗಳು

ಮಧ್ಯಾಹ್ನವೇ ಜಂಬೂಸವಾರಿ ನೆರವೇರಲಿ

ಮಾನ್ಯರೆ,

ಈ ವರ್ಷ ಶರನ್ನವರಾತ್ರಿ ಪೂಜಾ ಕೈಂಕರ್ಯದ ವಿವರಗಳಂತೆ ಅ.5 ವಿಜಯ ದಶಮಿಯಂದು ಸಂಜೆ 5.07 ರಿಂದ 5.18ರ ಶುಭ ಮೀನ ಲಗ್ನದಲ್ಲಿ ಮಾನ್ಯ ಮುಖ್ಯಮಂತ್ರಿಯವರಿಂದ ಪುಷ್ಪಾರ್ಚನೆ ನಂತರ ಜಂಬೂಸವಾರಿ ಪ್ರಾರಂಭ ಎಂದಿದೆ. ಸಂಜೆ 5 ಗಂಟೆಯ ನಂತರ ಜಂಬೂಸವಾರಿ ಅರಮನೆಯನ್ನು ಬಿಟ್ಟರೆ ಅದು ಬನ್ನಿಮಂಟಪ ತಲುಪುವುದಕ್ಕೆ ಕನಿಷ್ಠ 3 ಗಂಟೆ ಎಂದರೂ ರಾತ್ರಿ 8 ಗಂಟೆಯಾಗಿ ಬಿಡುತ್ತದೆ. ಜಂಬೂಸವಾರಿಯನ್ನು ನೋಡಲು ಸುತ್ತಮುತ್ತಲ ಹಳ್ಳಿಯಿಂದ ದೇಶ ವಿದೇಶದಿಂದ ಲಕ್ಷಾಂತರ ಜನರು ಬೆಳಗ್ಗೆ 11 ಗಂಟೆಯಿಂದಲೇ ಸಯ್ಯಾಜಿರಾವ್ ರಸ್ತೆಯ ಇಕ್ಕೆಲಗಳಲ್ಲಿ ಕುಳಿತಿರುತ್ತಾರೆ. ಎಲ್ಲಾ ರಸ್ತೆಗಳು ಮಧ್ಯಾಹ್ನ 1 ಗಂಟೆಯ ವೇಳೆಗೆ ಪೊಲೀಸರು ಬಂದ್ ಮಾಡಿರುತ್ತಾರೆ. ಅಲ್ಲಿ ಜನರ ಗುಂಪಿನಲ್ಲಿ ಸಿಕ್ಕಿಹಾಕಿಕೊಂಡಿರುವವರು ಜಲಬಾಧೆಗೆ ಕೂಡ ಹೋಗಲು ಸಾಧ್ಯವಾಗದ ರೀತಿಯಲ್ಲಿ ಹೆಣಗಾಡುತ್ತಿರುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಸಂಜೆ 5 ಗಂಟೆಗೆ ಜಂಬೂಸವಾರಿ ಪ್ರಾರಂಭಿಸುವುದು ಸಾರ್ವಜನಿಕರಿಗೆ ಮತ್ತು ಪ್ರವಾಸಿಗರಿಗೆ ತುಂಬಾ ತೊಂದರೆಯುಂಟಾಗುತ್ತದೆ ಮತ್ತು ರಾತ್ರಿ 7 ಗಂಟೆಗೆ ಪ್ರಾರಂಭವಾಗಬೇಕಿರುವ ಟಾರ್ಚ್ ಲೈಟ್ ಪೆರೇಡ್‌ಗೆ ಕೂಡ ತೊಂದರೆಯುಂಟಾಗುತ್ತದೆ. ನಾಲ್ಕು ವರ್ಷದ ಹಿಂದೆ ಇದೇ ರೀತಿ ತಡವಾಗಿ ಪ್ರಾರಂಭವಾದ ಜಂಬೂಸವಾರಿಯ ಅಂಬಾರಿ ಆನೆಗೆ ತೊಂದರೆಯಾಗುತ್ತದೆ ಎಂದು ಮೆರವಣಿಗೆಯ ಮಧ್ಯದಲ್ಲೇ ಅಂಬಾರಿ ಆನೆಯನ್ನು ಕಳಿಸಿಬಿಟ್ಟಿದ್ದರು. ಆಗ ಜನರು ಅಂಬಾರಿ ಆನೆ ಸಾಗಿದ ನಂತರ ಎಲ್ಲರೂ ಎದ್ದು ಹೊರಡಲು ಅನುವಾದಾಗ ಗೊಂದಲ ಉಂಟಾಗಿ ಹಿಂದೆ ಬರುತ್ತಿದ್ದ ಟ್ಯಾಬ್ಲೋಗಳು ಹಾಗೂ ಕಲಾತಂಡಗಳು ತೊಂದರೆಗೆ ಸಿಕ್ಕಿಹಾಕಿಕೊಂಡವು. ವಿಜಯದಶಮಿಯಂದು ಯಾವುದೇ ಕಾಲ ಇರುವುದಿಲ್ಲ. ದಿನಪೂರ್ತಿ ಒಳ್ಳೆಯ ಕಾಲ ಎಂದು ಹೇಳುತ್ತಾರೆ. ಆದುದರಿಂದ ಜಂಬೂಸವಾರಿ ಸುಗಮವಾಗಿ ಸಾಗಿ ಎಲ್ಲರೂ ಯಾವುದೇ ತೊಂದರೆ ಇಲ್ಲದೇ ವೀಕ್ಷಿಸಲು ಅನುಕೂಲವಾಗುವಂತೆ ಪ್ರತೀ ವರ್ಷ ಮಧ್ಯಾಹ್ನ 2 ಗಂಟೆಗೆ ಪ್ರಾರಂಭಿಸುವುದು ಒಳ್ಳೆಯದು. ಕಿಕ್ಕಿರಿದು ಸೇರಿರುವ ಜನಜಂಗುಳಿಯನ್ನು ಸಮಾಧಾನವಾಗಿ ಸಂಜೆಯವರೆವಿಗೂ ಕಾಯುವುದೂ ಪೊಲೀಸರಿಗೆ ಅತ್ಯಂತ ತ್ರಾಸದಾಯಕ. ಈ ವರ್ಷ ದಯಮಾಡಿ ಮಧ್ಯಾಹ್ನವೇ ಜಂಬೂಸವಾರಿ ಹೊರಡುವಂತೆ ಮಾಡಬೇಕೆಂದು ಕೋರುತ್ತೇನೆ.

–ದೇವರಾಜು, ಮೈಸೂರು.

ಹುಂಡಿ ಹಣ ತಿಂದವರಿಗೆ ಶಿಕ್ಷೆ ಆಗಲಿ

ಮಾನ್ಯರೆ,

ಇತ್ತೀಚೆಗೆ ಎರಡನೇ ತಿರುಪತಿ ಎಂದೇ ಖ್ಯಾತಿಯಾಗಿರುವ ಒಂಟಿಕೊಪ್ಪಲು ಶ್ರೀ ಲಕ್ಷ್ಮೀವೆಂಕಟರಮಣ ದೇವಸ್ಥಾನದಲ್ಲಿ ಹಾಲಿ ಧರ್ಮದರ್ಶಿಗಳ ವಿರುದ್ಧ ದೇವಸ್ಥಾನದ ಹುಂಡಿಯ ಹಣ ದುರುಪಯೋಗದ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೇವಸ್ಥಾನದ ಕಾರು ಚಾಲಕರು ಪ್ರಕರಣ ದಾಖಲಿಸಿದ್ದಾರೆ. ದೇವರ ಹಣಕ್ಕೆ ಕನ್ನ ಹಾಕಿರುವ ಪ್ರಕರಣದ ಸತ್ಯಾಸತ್ಯತೆಯನ್ನು ವಿ.ವಿ. ಪುರಂ ಪೊಲೀಸರು ಪರಿಶೀಲಿಸಿ, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಂಡು ದೇವಸ್ಥಾನದ ಪಾವಿತ್ರ್ಯತೆಯನ್ನು ಕಾಪಾಡಬೇಕೆಂದು ಮನವಿ.

–ನೊಂದ ಭಕ್ತಾದಿಗಳು, ಮೈಸೂರು.

ಅಪೂರ್ಣ ಮಾಹಿತಿಯಿಂದ ಅಭ್ಯರ್ಥಿಗಳ ಪರದಾಟ

ಮಾನ್ಯರೇ,

ಸಾರ್ವಜನಿಕ ಶಿಕ್ಷಣ ಇಲಾಖೆಯು 2022–23ನೇ ಸಾಲಿಗೆ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಅತಿಥಿ ಶಿಕ್ಷಕರ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಿರುವುದು ಸರಿಯಷ್ಟೇ. ತಾಲೂಕುವಾರು ಖಾಲಿ ಇರುವ ಒಟ್ಟು ಹುದ್ದೆಗಳ ಪಟ್ಟಿಯನ್ನೇನೋ ನೀಡಲಾಗಿದೆಯಾದರೂ ಪೂರ್ಣ ಪ್ರಮಾಣದ ಮಾಹಿತಿಯಿಲ್ಲದೆ ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಪರದಾಡುವಂತಾಗಿದೆ. ಅರ್ಜಿಗಳು ಎಲ್ಲಿ ದೊರೆಯುತ್ತವೆ? ಭರ್ತಿ ಮಾಡಿದ ಅರ್ಜಿಗಳನ್ನು ಎಲ್ಲಿ ಸಲ್ಲಿಸಬೇಕು? ವಿಷಯವಾರು ಯಾವ ಶಾಲೆಗಳಲ್ಲಿ ಎಷ್ಟು ಹುದ್ದೆಗಳು ಖಾಲಿಯಿವೆ ಎಂಬ ಬಗ್ಗೆ ಮಾಹಿತಿ ನೀಡದಿರುವುದೇ ಸಮಸ್ಯೆಗೆ ಮೂಲ ಕಾರಣವಾಗಿದೆ. ಇದರಿಂದಾಗಿ ಅಭ್ಯರ್ಥಿಗಳು ಮೊದಲು ತಮಗೆ ಸಮೀಪದಲ್ಲಿರುವ ಸರ್ಕಾರಿ ಶಾಲೆಗಳು ಯಾವುವು ಎಂಬುದನ್ನು ಪತ್ತೆ ಹಚ್ಚಿ, ಅನಂತರ ಆ ಶಾಲೆಗಳಲ್ಲಿ ಸಂಬಂಧಪಟ್ಟ ಹುದ್ದೆಗಳು ಖಾಲಿ ಇದೆಯೋ ಇಲ್ಲವೋ ಎಂಬುದನ್ನು ಆಯಾ ಶಾಲೆಯ ಮುಖ್ಯ ಶಿಕ್ಷಕರಿಂದ ಮಾಹಿತಿ ಪಡೆದುಕೊಂಡು ಅರ್ಜಿ ಸಲ್ಲಿಸಬೇಕಾಗಿದೆ. ಮೈಸೂರು ಜಿಲ್ಲೆಯೊಂದರಲ್ಲೇ ಒಂಬತ್ತು ಬ್ಲಾಕ್‌ಗಳಿದ್ದು, ಒಂದೊಂದು ಬ್ಲಾಕ್‌ನಲ್ಲಿಯೂ ಅನೇಕ ಕ್ಲಸ್ಟರ್‌ಗಳಿವೆ. ಆ ಒಂದೊಂದು ಕ್ಲಸ್ಟರ್‌ನಲ್ಲಿಯೂ ಅನೇಕ ಶಾಲೆಗಳಿವೆ. ಆ ಶಾಲೆಗಳಲ್ಲಿಯೂ ಸರ್ಕಾರಿ, ಅನುದಾನಿತ, ಅನುದಾನರಹಿತ ಹೀಗೆ ವಿವಿಧ ಪ್ರಕಾರಗಳಿದ್ದು, ಅಭ್ಯರ್ಥಿಯೊಬ್ಬ ಈ ಮಾಹಿತಿಯ ಬೆನ್ನತ್ತಿ ಹೋದರೆ ಇರುವ ಅತ್ಯಲ್ಪ ಸಮಯದಲ್ಲಿ ಖಂಡಿತಾ ಅರ್ಜಿ ಸಲ್ಲಿಸಲು ಸಾಧ್ಯವಾಗದು. ಮುಂದಿನ ದಿನಗಳಲ್ಲಾದರೂ ನಿಖರ ಮಾಹಿತಿಯನ್ನು ಒದಗಿಸಿ ಆ ನಂತರ ಅರ್ಜಿ ಆಹ್ವಾನಿಸುವ ಮೂಲಕ ಅಭ್ಯರ್ಥಿಗಳು ಸುಲಭವಾಗಿ ಅರ್ಜಿ ಸಲ್ಲಿಸಲು ಅನುಕೂಲವಾಗುವಂತೆ ಕ್ರಮ ಕೈಗೊಳ್ಳಬೇಕಾಗಿ ಸಂಬಂಧಪಟ್ಟ ಇಲಾಖೆಯಲ್ಲಿ ವಿನಂತಿ.

–ಮಂಜುಮಣಿ, ಏಕಲವ್ಯನಗರ, ಮೈಸೂರು

ಶಾಲಾ ಮಕ್ಕಳಿಗೆ ಮೊಟ್ಟೆ ವಿತರಣೆ ಸ್ವಾಗತಾರ್ಹ

ಮಾನ್ಯರೆ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ 2019ರಿಂದ 20ನೇ ಸಾಲಿನ ಸಮೀಕ್ಷೆ ವರದಿ ಅನುಗುಣವಾಗಿ ಸರ್ಕಾರಿ ಮತ್ತು ಸರ್ಕಾರದ ಅನುದಾನಿತ ಶಾಲೆಗಳ ಮಕ್ಕಳಿಗೆ ಅಪೌಷ್ಟಿಕತೆ ಕೊರತೆ ಹೋಗಲಾಡಿಸಲು 6ರಿಂದ 15 ವರ್ಷದ ವಯೋಮಾನದ ಶಾಲೆ ಮಕ್ಕಳಿಗೆ ಪೌಷ್ಟಿಕತೆ ದೊರಕಬೇಕೆಂಬ ನಿಟ್ಟಿನಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯು ಬಿಸಿ ಊಟದ ಜೊತೆಯಲ್ಲಿ ಮೊಟ್ಟೆ ವಿತರಣೆ ಮಾಡಿರುವುದು ಹಾಗೂ ಮೊಟ್ಟೆ ಸೇವಿಸದೆ ಇರುವ ಮಕ್ಕಳಿಗೆ ಎರಡು ಬಾಳೆಹಣ್ಣು. ಎರಡೂ ಬೇಡ ಎನ್ನುವವರಿಗೆ ಕಡ್ಲೆ ಬೀಜದ ಚಿಕ್ಕಿಯನ್ನು ನೀಡುತ್ತಿರುವುದು ಸ್ವಾಗತಾರ್ಹ.

–ಕಂಗಾಣಿಸೋಮು ಪಿ.ಸಿ., ಕ್ಯಾತಮಾರನಹಳ್ಳಿ ಮೈಸೂರು.

ಸಾಧ್ಯತೆ

ಮಾನ್ಯರೆ,

ಇರುವುದೊಂದೇ ಭೂಮಿ;
ಇರುವನೊಬ್ಬನೇ ಸೂರ್ಯ!
ಕ್ರಮೇಣ ತಣ್ಣಗಾಗುತ್ತಿದ್ದಾನಂತೆ, ಸೂರ್ಯ;
ನಾವೇನು ಮಾಡಬಹುದು ತಪ್ಪಿಸಲು?
ಆದರೆ ಮನಸ್ಸು ಮಾಡಿದರೆ,
ಧರೆಯನ್ನುಳಿಸಿಕೊಳ್ಳಬಹುದು!

– ಸಿಪಿಕೆ, ದತ್ತಪೀಠ ಆಸ್ಥಾನ ವಿದ್ವಾನ್, ಮೈಸೂರು.



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ಸಂಸ್ಕೃತಿ ಚಿಂತನಾ

ತತ್ತ್ವಮಸಿ ಎಂಬ ತತ್ತ್ವದ ಉಪದೇಶ

ಅದ್ವೈತ ವೇದಾಂತ ಶಾಸ್ತ್ರದಲ್ಲಿ ಉಪನಿಷತ್ತುಗಳ ನಾಲ್ಕು ವಾಕ್ಯಗಳನ್ನು ಮಹಾ ವಾಕ್ಯಗಳೆಂದು ಪರಿಗಣಿಸುತ್ತಾರೆ. ಪ್ರಜ್ಞಾನಂಬ್ರಹ್ಮ, ಅಯಮಾತ್ಮಾ ಬ್ರಹ್ಮ, ಅಹಂ ಬ್ರಹ್ಮಾಸ್ಮಿ, ತತ್ತ್ವಮಸಿ ಎಂಬ ನಾಲ್ಕು ಮಹಾವಾಕ್ಯಗಳು. ಇವು ಜೀವ ಬ್ರಹ್ಮೈಕ್ಯವನ್ನು ಪ್ರತಿಪಾದಿಸುತ್ತವೆ. ಇವುಗಳಲ್ಲಿ ತತ್ತ್ವಮಸಿ ಎಂಬ ಮಹಾವಾಕ್ಯವು ಛಾಂದೋಗ್ಯೋಪನಿಷತ್ತಿನಲ್ಲಿ ಕಂಡು ಬರುತ್ತದೆ. ಅದರ ಹಿನ್ನೆಲೆಯ ಕಥೆ ಇಂತಿದೆ.

ಆರುಣಿಯ ಮಗ ಅರುಣನ ಮೊಮ್ಮಗ ಶ್ವೇತಕೇತು. ಅವನಿಗೆ ಗುರುಕುಲಕ್ಕೆ ಹೋಗುವ ವಯಸ್ಸಾಯಿತು. ಅವನ ತಂದೆ ಹೇಳಿದನು– "ಮಗು ಶ್ವೇತಕೇತು, ಗುರುಕುಲಕ್ಕೆ ಹೋಗಿ ಬ್ರಹ್ಮಚಾರಿಯಾಗಿ ವೇದಗಳ ಅಧ್ಯಯನವನ್ನು ಮಾಡು. ವಿದ್ಯಾವಂತನಾಗು. ನಮ್ಮ ವಂಶದಲ್ಲಿ ಎಲ್ಲರೂ ಅಧ್ಯಯನವನ್ನು ಮಾಡಿದವರೇ. ಯಾರೂ ವಿದ್ಯೆಯಿಲ್ಲದೆ 'ಬ್ರಹ್ಮಬಂಧು' ಎನಿಸಿಕೊಂಡಿಲ್ಲ. ನೀನು ಅಂತಹ ನಿಂದೆಗೆ ಪಾತ್ರನಾಗ ಬಾರದು, ಗುರುಕುಲಕ್ಕೆ ಹೋಗು"

ಆ ಸಂದರ್ಭದಲ್ಲಿ ಶ್ವೇತಕೇತುವಿಗೆ ಹನ್ನೆರಡು ವರ್ಷ ವಯಸ್ಸಾಗಿತ್ತು. ತಂದೆಯ ಮಾತಿನಂತೆ ಅವನು ಗುರುಕುಲಕ್ಕೆ ಹೋಗಿ ಗುರು ಶುಶ್ರೂಷೆಯನ್ನು ಮಾಡಿ ವೇದಗಳನ್ನು ಕಲಿತನು. ಹನ್ನೆರಡು ವರ್ಷಗಳ ದೀರ್ಘ ಕಾಲದ ಅಧ್ಯಯನದಿಂದ ವೇದಗಳು ಕಂಠಸ್ಥವಾದುವು. ತಾನು ವಿದ್ವಾಂಸನಾದೆ, ಅನೂಚಾನನಾದೆ ಎಂಬ ಗರ್ವ ಅವನಲ್ಲಿ ಮೂಡಿತು. ನನ್ನ ಬುದ್ಧಿ ವಿಕಾಸ ಪೂರ್ಣವಾಗಿದೆ, ನಾನೇ ಮಹಾಮನಾ ಆಗಿದ್ದೇನೆ ಎಂದು ಅವನು ತಾನೇ ಭಾವಿಸಿಕೊಡು ದರ್ಪಿಷ್ಠನಾಗಿ ಗುರುಕುಲದಿಂದ ಮನೆಗೆ ಹಿಂದಿರುಗಿದನು. ವಿನಯವಿಲ್ಲದೆ ಗರ್ವದಿಂದ ತಲೆ ಎತ್ತಿಕೊಂಡು ಮನೆಗೆ ಬಂದ ಮಗನನ್ನು ನೋಡಿ ತಂದೆ ಆರುಣಿಗೆ ಚಿಂತೆಯಾಯಿತು. ಅವನು ಮಗನಿಗೆ ಹೇಳಿದನು–ಮಗು ಶ್ವೇತಕೇತು, ನಾಲ್ಕು ವೇದಗಳನ್ನು ಕಲಿತುಕೊಂಡನೆಂದು ನೀನು ನಿನ್ನನ್ನು ಮಹಾಮನಾ ಎಂದೂ ಅನೂಚಾನನೆಂದೂ ಭಾವಿಸಿಕೊಂಡು ಸ್ತುಬ್ಧತೆಯಿಂದ ಬೀಗುತ್ತಿರುವೆ. ಅದು ಹಾಗಿರಲಿ, ಯಾವ ಜ್ಞಾನದಿಂದ ಕೇಳಿಲ್ಲದಿರುವುದೂ ಕೇಳಿದಂತೆ ಆಲೋಚಿಸದಿದ್ದುದೂ ಆಲೋಚಿಸಿದಂತೆ, ತಿಳಿಯದುದೂ ತಿಳಿದಂತೆ ಆಗುವುದೋ ಆ ಉಪದೇಶವನ್ನು ನಿನ್ನ ಗುರುಗಳಿಂದ ಪಡೆದೆಯೇನು?

ಈ ಪ್ರಶ್ನೆಯನ್ನು ಕೇಳಿ ಉತ್ತರವನ್ನು ತಿಳಿಯದೆ ಶ್ವೇತಕೇತು ದಿಕ್ಕು ತೋಚದಂತೆ ನಿಂತನು. ಅವನ ಗರ್ವ ತೊಲಗಿತು. ವಿನಯದಿಂದ ತಲೆಯನ್ನು ತಗ್ಗಿಸಿ ತಂದೆಗೆ ನಮಸ್ಕರಿಸಿ ಹೇಳಿದನು–

"ತಂದೆ, ಇದನ್ನು ನಾನು ಗುರುಕುಲದಲ್ಲಿ ಅಷ್ಟು ಕಾಲ ಇದ್ದವನಾದರೂ ತಿಳಿದುಕೊಳ್ಳಲಿಲ್ಲ, ನೀವೇ ಕೃಪೆಯಿಟ್ಟು ಅದನ್ನು ನನಗೆ ಹೇಳಿರಿ. ತಿಳಿದುಕೊಳ್ಳದ್ದೂ ತಿಳಿದುಕೊಂಡಂತೆ ಆಗುವ ಆ ಉಪದೇಶವು ಯಾವುದು? ನನಗೆ ತಿಳಿಸಿಕೊಡಿ."

ಆಗ ತಂದೆ ಆರುಣಿ ಮಗನಿಗೆ ಆತ್ಮವಿದ್ಯೆಯನ್ನು ಬೋಧಿಸಲು ಆರಂಭಿಸುತ್ತಾನೆ. "ಶ್ವೇತಕೇತು, ಮಣ್ಣಿನ ಒಂದು ಉಂಡೆಯನ್ನು ವೈಜ್ಞಾನಿಕವಾಗಿ ಪರೀಕ್ಷಿಸಿ ಅದರ ರಚನೆಯನ್ನು ಅರಿತುಕೊಂಡರೆ ಮಣ್ಣಿನಿಂದ ಆಗಿರುವ ಸಕಲ ಮೃನ್ಮಯ ವಸ್ತುಗಳ ಜ್ಞಾನವೂ ಆದಂತೆ ಅಲ್ಲವೆ? ಮಡಕೆ, ಕುಡಿಕೆ, ಹಂಡೆ ಮುಂತಾದುವೆಲ್ಲವೂ ವಾಚಾರಂಭಣ ಮಾತ್ರ. ವಿಕಾರ, ನಾಮಧೇಯ ಇವೆಲ್ಲವೂ ನಮ್ಮ ವ್ಯವಹಾರದ ಅನುಕೂಲತೆಗಾಗಿ ನಾವೇ ಮಾಡಿಕೊಂಡಿರುವ ಕಲ್ಪನೆಗಳಲ್ಲವೆ? ಮೃತ್ತಿಕೆ ಎಂಬುದು ಸತ್ಯ, ಈ ಎಲ್ಲಾ ವಿಕಾರ ನಾಮಧೇಯಗಳು ಅಸತ್ಯವೆಂಬುದು ಸ್ಪಷ್ಟವಲ್ಲವೆ, ಆಲೋಚಿಸು"

"ಲೋಹಮಣಿಯೊಂದನ್ನು ವೈಜ್ಞಾನಿಕವಾಗಿ ಅರಿತುಕೊಂಡರೆ ಆ ಲೋಹದಿಂದಾದ ಎಲ್ಲ ವಸ್ತುಗಳನ್ನು ಅರಿತುಕೊಂಡಂತಾಗುತ್ತದೆ. ಲೋಹ ಎಂಬುದು ವೈಜ್ಞಾನಿಕ ಸತ್ಯ, ಉಳಿದುದೆಲ್ಲ ವಾಚಾರಂಭಣ. ವಿಕಾರಗಳು, ನಾಮಧೇಯಗಳು ಕಾಲ್ಪನಿಕ ಎಂಬುದನ್ನರಿತುಕೋ". ಇದನ್ನು ಕೇಳಿದ ಶ್ವೇತಕೇತುವಿಗೆ ಅರಿವು ಮೂಡಿತು. ಅವನೆಂದನು "ತಂದೆ, ಗುರುಕುಲದಲ್ಲಿದ್ದ ನನ್ನ ಗುರುಗಳಿಗೆ ಈ ಸತ್ಯವೂ ತಿಳಿದಿಲ್ಲ ಎಂದುಕೊಂಡಿದ್ದೇನೆ. ಅವರಿಗೆ ತಿಳಿದಿದ್ದರೆ ನನಗೆ ಹೇಳಿಕೊಡುತ್ತಿದ್ದರು. ನೀವೇ ನನಗೆ ಆತ್ಮವಿದ್ಯೆಯನ್ನು ಪೂರ್ಣವಾಗಿ ಬೋಧಿಸಿರಿ." ಆಗ ತಂದೆ ಆರುಣಿಯು ಮಗನಿಗೆ ಬೋಧಿಸಲಾರಂಭಿಸಿದನು "ಈ ಜಗತ್ತಿನಲ್ಲಿ ಮೊದಲು ಸದ್ವಸ್ತುವೇ ಇದ್ದಿತು. ಅದು ಒಂದೆ ಇದ್ದಿತು, ಅದ್ವಿತೀಯವಾಗಿದ್ದಿತು. ಆದರೆ ಕೆಲವರು ಅಸತ್ತೇ ಮೊದಲು ಇದ್ಧಿತು, ಅಸತ್ತಿನಿಂದ, ಎಂದರೆ ಅಭಾವದಿಂದ ಸದ್ವಸ್ತು ಹುಟ್ಟಿತೆನ್ನುತ್ತಾರೆ. ಆದರೆ ಅಭಾವದಿಂದ, ಶೂನ್ಯದಿಂದ ಸದ್ವಸ್ತು ಹುಟ್ಟಿತೆಂಬುದು ಹೇಗೆ ಸಾಧ್ಯ? ಎರಡು ನಾಯಿಗಳಿದ್ದರೆ ನಾಯಿಗಳ ಸಂತತಿ ಬೆಳೆಯಲು ಸಾಧ್ಯ. ಏನೂ ಇಲ್ಲದ ಶೂನ್ಯದಿಂದ ಅಸ್ತಿತ್ವವುಳ್ಳ ವಸ್ತುವಿನ ಉತ್ಪತ್ತಿಯಾಗುವುದು ಅಸಂಭವ. ಆ ಸದ್ರೂಪದ, ಎಂದರೆ ಸದಾ ಅಸ್ತಿತ್ವವನ್ನುಳ್ಳ ಬ್ರಹ್ಮವೇ ಬಹತ್ವವನ್ನು ಅಪೇಕ್ಷಿಸಿ ಮೊದಲು ತೇಜಸ್ಸನ್ನು ಸೃಷ್ಟಿಸಿತು. ಹೀಗೆ ಬ್ರಹ್ಮವಸ್ತುವಿನಿಂದ ಸಮಸ್ತ ಜಗತ್‌ಸೃಷ್ಟಿ,

"ಈ ರೀತಿ ಸೃಷ್ಟಿಯನ್ನು ಹೊಂದಿದ ಜೀವಿಗಳು ಅಂಡಜ, ಜರಾಯುಜ, ಉದ್ಭಿಜ್ಜ" ಎಂದು ಮೂರು ವಿಧವಾಗಿರುತ್ತವೆ. ಅಂಡಜ ಎಂದರೆ ಮೊಟ್ಟೆಯಿಂದ ಹುಟ್ಟುವ ಪಕ್ಷಿ, ಸರ್ಪ ಮುಂತಾದುವು. ಜರಾಯುಜ ಎಂದರೆ ಗರ್ಭದಿಂದ ಜನಿಸುವ ಹಸು, ಮನುಷ್ಯ ಮುಂತಾದುವು. ಉದ್ಭಿಜ್ಜ ಎಂದರೆ ಬೀಜದಿಂದ ಹುಟ್ಟಿ ಭೂಮಿಯನ್ನು ಒಡೆದು ಮೇಲೆ ಬರುವ ಎಲ್ಲ ಸಸ್ಯಗಳು. ಸದ್ವಸ್ತು ಬ್ರಹ್ಮವೇ ಇವುಗಳಲ್ಲಿ ಪ್ರವೇಶಿಸಿ ನಾಮ– ರೂಪಗಳಿಗೆ ಕಾರಣವಾಗಿದೆ" ಎಂದು ಆರುಣಿಯು ಶ್ವೇತಕೇತುವಿಗೆ ಉಪದೇಶವನ್ನು ನೀಡಿದನು.

ಮತ್ತೆ ಈ ವಿಷಯವನ್ನು ಹೆಚ್ಚು ಸ್ಪಷ್ಟವಾಗಿ ಹೇಳಬೇಕು ಎಂದು ಶ್ವೇತಕೇತುವು ಕೋರಿದಾಗ ಆರುಣಿಯು ಹೇಳುತ್ತಾನೆ –

"ಅಸ್ಯ ಪುರುಷಸ್ಯ ಪ್ರುಯತೋ ವಾಙ್ ಮನಸಿ ಸಂಪದ್ಯತೇ,
ಮನಃ ಪ್ರಾಣೇ ಪ್ರಾಣಸ್ತೇಜಸಿ ತೇಜಃ ಪುರಸ್ಯಾಂ ದೇವತಾಯಾಮ್"

(ಈ ಲೋಕದಿಂದ ತೆರಳುವ ಮನುಷ್ಯನ ಮಾತು ಮನಸ್ಸಿನಲ್ಲಿ ಸೇರಿ ಹೋಗುತ್ತದೆ, ಮನಸ್ಸು ಪ್ರಾಣದಲ್ಲಿ, ಪ್ರಾಣವು ತೇಜಸ್ಸಿನಲ್ಲಿ, ತೇಜಸ್ಸು ಪರದೇವತೆಯಲ್ಲಿ ಸೇರಿ ಹೋಗುತ್ತವೆ.)

ಸ ಏಷೋಽಣಿಮಾ, ಐತದಾತ್ಮ್ಯಮ್ ಇದಂ ಸರ್ವಂ, ತತ್ಸತ್ಯಂ
ಸ ಆತ್ಮಾ ! ತತ್ ತ್ವಮಸಿ ಶ್ವೇತ ಕೇತೋ ಇತಿ

(ಈ ಸೂಕ್ಷ್ಮವಾದ ಅಣಿಮೆ ಅಥವಾ ಅಣುರೂಪವಿದೆಯಲ್ಲ, ಇದೆಲ್ಲವೂ ಆ ಆತ್ಮನ ಸ್ವರೂಪದ್ದು. ಅದೇ ಸತ್ಯ, ಅದೇ ಆತ್ಮ. ಶ್ವೇತಕೇತುವೆ, ಆ ಆತ್ಮವು ನೀನೇ ಆಗಿರುವೆ)

ಇಲ್ಲಿ ಬಂದಿರುವ ತತ್ತ್ವಮಸಿ ಎಂಬ ವಾಕ್ಯವೇ ಮಹಾವಾಕ್ಯ. ಈ ವಾಕ್ಯ ಗುಚ್ಛದಲ್ಲಿ ಬಂದಿರುವ ಆತ್ಮ ಶಬ್ದಕ್ಕೆ ಪ್ರತ್ಯಗಾತ್ಮ, ಸತ್ ಎಂಬುದು ನಿಜವಾದ ಅರ್ಥವೆಂದು ಶ್ರೀಶಂಕರಾಚಾರ್ಯರ ಅಭಿಪ್ರಾಯವಾಗಿದೆ. **ಆತ್ಮ ಶಬ್ದಸ್ಯ ನಿರುಪಪದಸ್ಯ ಪ್ರತ್ಯಗಾತ್ಮನಿ ಗವಾದಿ ಶಬ್ದವನ್ನಿರೂಢಶ್ವಾತ್ । ಅತಃತತ್ ಸತ್ ಸ್ವಮಸಿ ಶ್ವೇತಕೇತೋ** ಎಂದು ಅವರು ಭವಿಷ್ಯವನ್ನು ಬರೆದಿದ್ದಾರೆ.

ಇಷ್ಟರಿಂದಲೂ ಶ್ವೇತಕೇತುವಿಗೆ ವಿಷಯವು ಪೂರ್ಣವಾಗಿ ಮನಸ್ಸಿಗೆ ಬರಲಿಲ್ಲ. ಮತ್ತೆ ಬೇರೆ ದೃಷ್ಟಾಂತದಿಂದ ವಿವರಿಸಬೇಕು ಎಂದು ಅವನು ತಂದೆಯನ್ನು ಬೇಡಿದನು. ಆಗ ಆರುಣಿಯು ಜೇನು ಹುಳುಗಳು ಮಧುವನ್ನು ಅಥವಾ ಮಕರಂದವನ್ನು ಸಂಗ್ರಹಿಸುವ ದೃಷ್ಟಾಂತವನ್ನು ಕೊಡುತ್ತಾನೆ.

ಜೇನು ನೊಣಗಳು ಅನೇಕ ಮರಗಳ ರಸಗಳನ್ನು ಸಂಗ್ರಹಿಸಿ ಜೇನು ತುಪ್ಪವನ್ನು ತಯಾರಿಸುತ್ತವೆ. ಜೇನು ತುಪ್ಪವಾದ ಮೇಲೆ ಇದು ಈ ವೃಕ್ಷದ್ದು, ಆ ವೃಕ್ಷದ್ದು ಎಂದು ಹೇಳಲಾಗುವುದಿಲ್ಲ. ಆ ರೀತಿಯಾಗಿ ಒಂದೇ ಆದ ಸದ್ವಸ್ತು ಬ್ರಹ್ಮದಲ್ಲಿ ಸಂಪನ್ನರಾಗಿದ್ದರೂ ಜೀವರು ಅದನ್ನು ಅರಿಯರು. ವ್ಯಾಘ್ರ, ಸಿಂಹ, ತೋಳ ಇತ್ಯಾದಿ ನಾನಾ ರೂಪದಲ್ಲಿರುವ ಜೀವಾತ್ಮರೆಲ್ಲರೂ ಒಂದೇ 'ಸತ್' ರೂಪಗೊಂಡವರು. ಎಲ್ಲರೂ ಕೊನೆಗೆ ಸೇರುವುದೂ ಆ ಸತ್ತಿನಲ್ಲೇ.

ಇದೇ ರೀತಿಯಾಗಿ ಆರುಣಿ ನದಿಯ ದೃಷ್ಟಾಂತವನ್ನು ಕೊಡುತ್ತಾನೆ. ನದಿಗಳೆಲ್ಲ ಸಮುದ್ರಕ್ಕೆ ಸೇರಿದ ಮೇಲೆ ಸಮುದ್ರವೇ ಆಗಿಬಿಡುತ್ತವೆ. ನಾನು ಗಂಗೆ, ನಾನು ಕಾವೇರಿ ಎಂಬ ಭೇದವಿರುವುದಿಲ್ಲ. ಹಾಗೆ ಜೀವಾತ್ಮರು ಸತ್‌ನಿಂದಲೇ ಬಂದು ಅಲ್ಲಿಗೆ ಸೇರುವರಾದರೂ ಅದನ್ನು ಅರಿತಿಲ್ಲ. ಹೀಗೆ ಹಲವು ದೃಷ್ಟಾಂತಗಳನ್ನು ಕೊಟ್ಟು ಸದಾತ್ಮಕವಾದ ಪರಬ್ರಹ್ಮವು ನೀನೆಂದು ಉಪನಿಷತ್ತು ಪ್ರತಿಪಾದಿಸುತ್ತದೆ ಎಂಬುದು ಶ್ರೀ ಶಂಕರಾಚಾರ್ಯರ ಅಭಿಪ್ರಾಯವಾಗಿದೆ.

ಈ ದೃಷ್ಟಾಂತಗಳಿಂದಲೂ ಶ್ವೇತಕೇತುವಿಗೆ ಸ್ಪಷ್ಟತೆ ಸಿಗಲಿಲ್ಲ. ಅದನ್ನು ಪ್ರಯೋಗದಿಂದ ಸ್ಪಷ್ಟಪಡಿಸಬೇಕೆಂದು ಆರುಣಿಯು ಮಗನಿಗೆ ಒಂದು ಆಲದ ಮರದ ಹಣ್ಣನ್ನು ತರಲು ಹೇಳಿ ಅದನ್ನು ಚಚ್ಚಲು ಹೇಳುತ್ತಾನೆ. ಹಾಗೆ ಮಾಡಿದಾಗ ಸಣ್ಣ ಬೀಜಗಳು ಕಂಡುಬರುತ್ತವೆ. ಬೀಜವನ್ನು ಕುಟ್ಟಿದಾಗ ಪುಡಿಯಾಗುತ್ತದೆ. ಅದರಲ್ಲಿ ಆಲದ ಮರವು ಕಾಣಿಸದಿದ್ದರೂ ಬೀಜದಲ್ಲಿ ಆಲದಮರವು ಅಡಗಿರುವಂತೆ ಎಲ್ಲರಲ್ಲಿ ಸೂಕ್ಷ್ಮರೂಪದಿಂದ ಸದ್‌ಬ್ರಹ್ಮವಸ್ತುವು ಇದೆಯೆಂಬುದನ್ನು ಆರುಣಿ ಶ್ವೇತಕೇತುವಿಗೆ ನಿರೂಪಿಸುತ್ತಾನೆ. ಇದೇ ರೀತಿ ನೀರಿನಲ್ಲಿ ಉಪ್ಪನ್ನು ಹಾಕಲು ಹೇಳಿ ಅದು ಕರಗಿದಾಗ ಕಾಣಿಸದು. ಆದರೆ ಒಂದೊಂದು ಹನಿಯಲ್ಲೂ ಉಪ್ಪು ಅಂತರ್ಗತವಾಗಿರುವುದು ರುಚಿ ನೋಡಿದಾಗ ತಿಳಿಯುತ್ತದೆ. ಹಾಗೆ ಬ್ರಹ್ಮವು ಪ್ರತಿಯೊಬ್ಬರಲ್ಲಿದೆ ಎಂದು ಉಪನಿಷತ್ತು ತಿಳಿಸುತ್ತದೆ. 'ಶ್ರದ್ಧತ್ಸ್ವ ಸೋಮ್ಯ' ಶ್ರದ್ಧೆಯಿಟ್ಟು ಇದನ್ನು ತಿಳಿದುಕೋ ಎಂದು ಉಪನಿಷತ್ತು ಶ್ವೇತಕೇತುವನ್ನು ನೆವವನ್ನಾಗಿ ಮಾಡಿಕೊಂಡು ಎಲ್ಲ ಮಾನವರಿಗೆ ಉಪದೇಶಿಸಿದೆ.

ಗಂಧಾರ ದೇಶದಿಂದ ಒಬ್ಬ ವ್ಯಕ್ತಿಯನ್ನು ಕಣ್ಣು ಕಟ್ಟಿ ತಂದು ಭಾರತದಲ್ಲಿ ಬಿಟ್ಟರೆ ಆ ವ್ಯಕ್ತಿ, ಕಣ್ಣು ಕಾಣದೆ ಗೋಳಾಡುತ್ತಾನೆ. ದಯಾಳುಗಳಾದವರು ಅವನ ಕಟ್ಟುಗಳನ್ನು ಬಿಡಿಸಿ ಗಾಂಧಾರದ ದಿಕ್ಕನ್ನು ತೋರಿಸಿದರೆ ಆ ವ್ಯಕ್ತಿ ತನ್ನ ದೇಶಕ್ಕೆ ಹೋಗಲು ಶಕ್ಯ. ಹಾಗೆ ಈ ಲೋಕದಲ್ಲಿ ತೊಳಲಾಡುತ್ತಿರುವಾಗ ಜ್ಞಾನಿಗಳು ನಮ್ಮ ಕಣ್ಣನ್ನು ತೆರೆಸಿ ನಾವು ಎಲ್ಲಿಂದ ಬಂದೆವೋ ಆ ಸತ್ ಅಥವಾ ಬ್ರಹ್ಮ ವಸ್ತುವಿನ ದಾರಿಯನ್ನು ತೋರಿಸಿದರೆ ನಾವೂ ಆ ಬ್ರಹ್ಮ ವಸ್ತುವಿನಲ್ಲಿ ಲೀನರಾಗಲು ಸಾಧ್ಯವೆಂಬುದನ್ನು ಛಾಂದೋಗ್ಯೋಪನಿಷತ್ತು ತಿಳಿಸಿದೆ. **ಆಚಾರ್ಯವಾನ್ ಪುರುಷೋ ವೇದ** ಎಂಬ ಮಾತಿನಿಂದ ಬ್ರಹ್ಮವಿದ್ಯೆಯಲ್ಲಿ ಗುರುವಿನ ಪ್ರಾಮುಖ್ಯವನ್ನೂ ಉಪನಿಷತ್ತು ಒತ್ತಿ ಹೇಳಿದೆ.

ವಿಶಿಷ್ಟ ಅಂಗವೈಕಲ್ಯ ಗುರುತಿನ ಚೀಟಿ ಕಲ್ಪಿಸಲು ಶೀಘ್ರ ತಪಾಸಣಾ ಶಿಬಿರ ಆಯೋಜನೆ

ಆಗಸ್ಟ್‌ನಿಂದ ಡಿ.3ರವರೆಗೆ ಜಿಲ್ಲೆಯ ವಿವಿಧ ಭಾಗಗಳಲ್ಲಿ ಶಿಬಿರ

ಮೈಸೂರು,ಆ.2(ಪಿಎಂ)– ಕೇಂದ್ರ ಸರ್ಕಾರದ 'ವಿಶಿಷ್ಟ ಅಂಗವೈಕಲ್ಯ ಗುರುತಿನ ಚೀಟಿ (ಯುಡಿಐಡಿ)' ನೀಡುವ ಸಂಬಂಧ ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರ, ಭಾರತೀಯ ರೆಡ್‌ಕ್ರಾಸ್ ಸೊಸೈಟಿ ಮೈಸೂರು ಕೇಂದ್ರ ಹಾಗೂ ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಜಿಲ್ಲೆಯಾದ್ಯಂತ ಶೀಘ್ರದಲ್ಲಿ ವೈದ್ಯಕೀಯ ತಪಾಸಣೆ ಶಿಬಿರಗಳನ್ನು ನಡೆಸಲಾಗುವುದು ಎಂದು ಪುನರ್ವಸತಿ ಕೇಂದ್ರದ ಸದಸ್ಯ ಕಾರ್ಯದರ್ಶಿ, ರೆಡ್‌ಕ್ರಾಸ್‌ನ ಜಿಲ್ಲಾ ಕೇಂದ್ರದ ಕಾರ್ಯದರ್ಶಿ ಎಸ್.ಎಸ್.ವೈದ್ಯನಾಥ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಶೇಷಚೇತನರಿಗೆ ಸರ್ಕಾರದ ಸವಲತ್ತುಗಳನ್ನು ಪಾರದರ್ಶಕ ಮತ್ತು ಸುಲಭವಾಗಿ ತಲುಪಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ 'ಯುಡಿಐಡಿ' ನೀಡುವ ಯೋಜನೆ ಜಾರಿಗೊಳಿಸಿದೆ. ಈ ಚೀಟಿ ನೀಡಲು ವೈದ್ಯಕೀಯ ತಪಾಸಣೆ ಅಗತ್ಯವಿದ್ದು, ಹಾಗಾಗಿ ಆಗಸ್ಟ್‌ನಿಂದ ಡಿಸೆಂಬರ್ 3ರವರೆಗೆ ಜಿಲ್ಲೆಯಲ್ಲಿ ತಪಾಸಣಾ ಶಿಬಿರ ನಡೆಸಲು ಜಿಲ್ಲಾಧಿಕಾರಿಗಳ ಅನುಮತಿ ಮೇರೆಗೆ ಯೋಜನೆ ರೂಪಿಸಲಾಗಿದೆ ಎಂದು ಹೇಳಿದರು.

2016ರಿಂದ ಕೇಂದ್ರ ಸರ್ಕಾರದ ಈ ಯೋಜನೆ ಅನುಷ್ಠಾನಕ್ಕೆ ಬಂದಿದೆ. ವೈದ್ಯಕೀಯ ತಪಾಸಣೆ ನಡೆಸಿ ಚೀಟಿ ಪಡೆಯಲು ಅರ್ಹರನ್ನು ಗುರುತಿಸಲಾಗುವುದು. ಮೈಸೂರು ಜಿಲ್ಲೆಯಲ್ಲಿ ಎಲ್ಲಾ ವಯೋಮಾನದ ಸುಮಾರು 80 ಸಾವಿರ ಮಂದಿ ವಿಶೇಷಚೇತನರು ಇದ್ದಾರೆ. ಈ ಪೈಕಿ 35,412 ಮಂದಿ ಯುಡಿಐಡಿ ಕಾರ್ಡ್ ಪಡೆಯಲು ವೆಬ್‌ಸೈಟ್‌ನಲ್ಲಿ ನೋಂದಣಿಯಾಗಿದ್ದರು. ಇದರಲ್ಲಿ 20,896 ಮಂದಿ ಕಾರ್ಡ್ ಪಡೆದುಕೊಂಡಿದ್ದು, 1,920 ಮಂದಿಯ ಅರ್ಜಿಗಳು ತಿರಸ್ಕೃತಗೊಂಡು, 12,596 ಮಂದಿ ಕಾರ್ಡ್ ಪಡೆಯಲು ಬಾಕಿ ಉಳಿದಿದ್ದಾರೆ ಎಂದು ತಿಳಿಸಿದರು.

ಕಾರ್ಡ್ ವಿತರಣೆಯಲ್ಲಿ ರಾಜ್ಯದಲ್ಲಿ ಮೈಸೂರು ಜಿಲ್ಲೆಯು 28ನೇ ಸ್ಥಾನಕ್ಕೆ ಕುಸಿದಿದೆ. ವಿಕಲಚೇತನರು ವೆಬ್‌ಸೈಟ್‌ನಲ್ಲಿ (https://www. swavlambancard.gov.in) ಕಾರ್ಡ್‌ಗಾಗಿ ನೋಂದಣಿ ಮಾಡಿಕೊಳ್ಳಬಹುದು. ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ ಯಾವ್ಯಾವ ಸ್ಥಳಗಳಲ್ಲಿ ಯಾವ ದಿನಾಂಕ ಗಳಂದು ಶಿಬಿರಗಳನ್ನು ನಡೆಸಲಾಗುತ್ತದೆ ಎಂಬ ಬಗ್ಗೆ ಮುಂಗಡವಾಗಿ ಪತ್ರಿಕಾ ಪ್ರಕಟಣೆ ಮೂಲಕ ಮಾಹಿತಿ ನೀಡಲಾಗುವುದು ಎಂದರು. ರೆಡ್‌ಕ್ರಾಸ್ ಸೊಸೈಟಿ ಮೈಸೂರು ಕೇಂದ್ರದ ಕಾರ್ಯಕಾರಿ ಸಮಿತಿ ಸದಸ್ಯರಾದ ಕೆ.ಎಂ. ವೀರಯ್ಯ, ಬಸಪ್ಪ, ನಾಗರಾಜು ಗೋಷ್ಠಿಯಲ್ಲಿದ್ದರು.





ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಹಾಗೂ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್ ಅವರನ್ನು ಎಸ್.ಎಂ.ಕೃಷ್ಣ ಅಭಿಮಾನಿ ಸಂಘದ ಅಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ ಅಭಿನಂದಿಸಿದರು.

ಉಚಿತ ಕಂಪ್ಯೂಟರ್ ತರಬೇತಿ

ಮೈಸೂರು: ಎಸಿಇಟಿ ಕಂಪ್ಯೂಟರ್ ತರಬೇತಿ ಕೇಂದ್ರದಿಂದ 2 ತಿಂಗಳ ಉಚಿತ ಕಂಪ್ಯೂಟರ್ ಡಿಟಿಪಿ, ಟ್ಯಾಲಿ, ಸ್ಪೋಕನ್ ಇಂಗ್ಲಿಷ್ ತರಗತಿಗಳನ್ನು ಹಮ್ಮಿಕೊಂಡಿದ್ದು, ಆಸಕ್ತರು ಆ.8ರೊಳಗೆ ನೋಂದಾಯಿಸಿಕೊಳ್ಳಲು ಕೋರಲಾಗಿದೆ. ಮಾಹಿತಿಗೆ ಮೊ. 7259143121 ಸಂಪರ್ಕಿಸಿ.

ದೇವರು ಮಹಿಳೆಯರಿಗೆ ಸೃಷ್ಟಿಸುವ ಶಕ್ತಿ ನೀಡಿದ್ದಾನೆ: ಸಿಎಂ

ಮಹಿಳೆಯರಿಗೆ ಡಿಜಿಟಲ್ ಮಾರ್ಕೆಟಿಂಗ್ ಕುರಿತ ತರಬೇತಿ ಕಾರ್ಯಾಗಾರಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ

ಬೆಂಗಳೂರು, ಆ.2(ಕೆಎಂಶಿ)–ದೇವರು ಎಲ್ಲವನ್ನೂ ಸೃಷ್ಟಿಸಲು ಸಾಧ್ಯವಿಲ್ಲವೆಂದು, ಮಹಿಳೆಯರನ್ನು ಸೃಷ್ಟಿಸಿದ. ಜೊತೆಯಲ್ಲಿ ಮಹಿಳೆಯರಿಗೆ ಸೃಷ್ಟಿಸುವ ಪರಮಾಧಿಕಾರವನ್ನು ದೇವರು ನೀಡಿದ್ದಾನೆ, ಮಹಿಳೆಯರು ಏನು ಬೇಕಾದರೂ ಸೃಷ್ಟಿಸುವ ಶಕ್ತಿ ಹೊಂದಿದ್ದಾರೆ. ಸ್ವಸಹಾಯ ಸಂಘದ ಮೂಲಕ ಇಂದು ರಾಜ್ಯದ ಮಹಿಳೆಯರು ಬೆಳೆಸುತ್ತಿರುವ ಕಿರು ಉದ್ದಿಮೆಗಳಿಗೆ ಡಿಜಿಟಲ್ ತರಬೇತಿ ನೀಡುವ ಮೂಲಕ ಮಾರುಕಟ್ಟೆ ವ್ಯವಸ್ಥೆಯನ್ನು ಜಾಗತಿಕ ವಿಸ್ತರಿಸುವ ಕಾರ್ಯವನ್ನು UBUNTU & UNESCAP ಮಾಡುತ್ತಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಇಂದು ಮತ್ತು ನಾಳೆ ನಗರದ ಅಶೋಕ ಹೋಟೆಲ್‌ನಲ್ಲಿ ಎರಡು ದಿನಗಳ ಕಾಲ UBUNTU & UNESCAP ಸಹಯೋಗದಲ್ಲಿ ಹಮ್ಮಿಕೊಂಡಿರುವ "ಡಿಜಿಟಲ್ ಪರಿವರ್ತನೆ ಮಹಿಳಾ ಉದ್ಯಮಿಗಳಿಗೆ ಹೊಸ ದಾರಿ" ಕಾರ್ಯಕ್ರಮದಡಿಯಲ್ಲಿ 10,000 ಮಹಿಳೆಯರಿಗೆ ಡಿಜಿಟಲ್ ಮಾರ್ಕೆಟಿಂಗ್ ಕುರಿತು ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿ, ರಾಜ್ಯದ ಜನಸಂಖ್ಯೆಯಲ್ಲಿ ಪುರುಷರಷ್ಟೆ ಸರಿ ಸಮಾನರಾಗಿರುವ ಮಹಿಳೆಯರು ಪುರುಷರಿಗಿಂತ ಕಡಿಮೆ ಇಲ್ಲ, ಅವರಿಗೆ ಇಂತಹ ತರಬೇತಿಗಳನ್ನು ನೀಡುವ ಮೂಲಕ ಪ್ರೋತ್ಸಾಹಿಸುವುದು ನಮ್ಮ ಜವಾಬ್ದಾರಿಯಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಕಳೆದೊಂದು ವರ್ಷದಲ್ಲಿ ಮಾರುಕಟ್ಟೆ ವ್ಯವಸ್ಥೆಯಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ, ಇಂದು ಡಿಜಿಟಲ್ ಮಾರುಕಟ್ಟೆ ವ್ಯವಸ್ಥೆ ದೈತ್ಯವಾಗಿ ಬೆಳೆಯುತ್ತಿದ್ದು, ಗ್ರಾಮೀಣ ಭಾಗದ ಕರಕುಶಲ ಮತ್ತು ಸಣ್ಣ ಉದ್ದಿಮೆಗಳಿಗೆ ಡಿಜಿಟಲ್ ಮಾರುಕಟ್ಟೆ ವ್ಯವಸ್ಥೆಯ ತರಬೇತಿ ಅವಶ್ಯಕವಾಗಿದೆ. ಜ್ಞಾನ ಕೇವಲ ಒಬ್ಬರ ಸ್ವತ್ತಲ್ಲ, ಅದು ವಿದ್ಯುಚ್ಛಕ್ತಿಯಂತೆ ಸದಾ ಹರಿಯುತ್ತಿರಬೇಕು, ಅದು ನಿಂತ ನೀರಾಗಬಾರದು, ಇಂತಹ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳುವ ಮೂಲಕ ಜ್ಞಾನಕ್ಕೆ ಹರಿಯುವ ಮತ್ತು ಹಂಚುವ ಕೆಲಸವನ್ನು ಮಾಡಬೇಕು. ಸಮಾಜದಲ್ಲಿ ಜ್ಞಾನವಂತರಿಗೆ ವಿಶೇಷ ಸ್ಥಾನವಿದೆ.

ಡಿಜಿಟಲ್ ಮಾರುಕಟ್ಟೆ ವ್ಯವಹಾರ ಮುಖಸ್ತುತಿ ಹೊಂದಿರುವುದಿಲ್ಲ, ಇಲ್ಲಿ ಮಾರಾಟಕ್ಕಿಟ್ಟ ವಸ್ತುಗಳ ಗುಣಮಟ್ಟ ಮತ್ತು ಅದರ ನಂಬಿಕೆಯೆ ಮುಖ್ಯ ಬಂಡವಾಳ, ಇಲ್ಲಿ ವಸ್ತುಗಳನ್ನು ಮಾಡಿದವರು, ಮಾರಿದವರು ಮತ್ತು ಕೊಳ್ಳುವವರಿಗೆ ಒಬ್ಬರಿಗೊಬ್ಬರು ಪರಿಚಯವಿರುವುದಿಲ್ಲ. ಇಲ್ಲೇನಿದ್ದರು ಕೇವಲ ನಂಬಿಕೆ ಎಂಬ ಬಂಡವಾಳ ಹಣಕ್ಕಿಂತ ಮುಖ್ಯವಾಗಿರುತ್ತದೆ ಎಂದರು.

ರಾಜ್ಯದ ಅಭಿವೃದ್ಧಿಗೆ ಮಹಿಳೆಯರು ಇಂಜಿನ್ ಇದ್ದಂತೆ ಎಂಬುದನ್ನು ಮನಗಂಡು ರಾಜ್ಯದಲ್ಲಿ ಮಹಿಳಾ ಉದ್ಯಮಿಗಳನ್ನು ಪ್ರೋತ್ಸಾಹಿಸಲು ಈಗಾಗಲೇ ಸರ್ಕಾರ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. ಅದರಲ್ಲೂ ಮಹಿಳಾ ಸ್ವಸಹಾಯ ಸಂಘಗಳನ್ನು ಪ್ರೋತ್ಸಾಹಿಸಲು ಹೊಸದಾಗಿ ರಾಜ್ಯದ 33,000 ಮಹಿಳಾ ಸ್ವಸಹಾಯ ಸಂಘಗಳಿಗೆ ಆರ್ಥಿಕ ಸಹಾಯ ಮತ್ತು ಮಾರುಕಟ್ಟೆ ವಿಸ್ತರಿಸುವ ಯೋಜನೆಗೆ ಚಾಲನೆ ನೀಡಲಾಗಿದೆ. ಪ್ರತಿ ಹಳ್ಳಿಯಲ್ಲೊಂದು ಪ್ರಬಲ ಮಹಿಳಾ ಸ್ವಸಹಾಯ ಸಂಘಗಳನ್ನು ಸ್ಥಾಪಿಸುವ ಮೂಲಕ ಮಹಿಳಾ ಸಬಲೀಕರಣಕ್ಕೆ ನಾಂದಿಯಾಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ UBUNTU ಸಂಸ್ಥಾಪಕ ಅಧ್ಯಕ್ಷೆ ಶ್ರೀಮತಿ ಕೆ.ರತ್ನಪ್ರಭಾ ಮಾತನಾಡಿ, ಡಿಜಿಟಲ್ ಮಾರ್ಕೆಟಿಂಗ್ ತರಬೇತಿಯು ಇ–ಕಾಮರ್ಸ್ ಮೂಲಕ ವ್ಯಾಪಾರವನ್ನು ಉತ್ತೇಜಿಸಲು, ಅಸ್ತಿತ್ವದಲ್ಲಿರುವ ಅವಕಾಶಗಳ ಕುರಿತು ಜಾಗೃತಿ ಮೂಡಿಸಲು ಮತ್ತು 3 ವರ್ಷಗಳಲ್ಲಿ ಭಾರತದಾದ್ಯಂತ 10,000 ಮಹಿಳಾ ಉದ್ಯಮಿಗಳನ್ನು ತಲುಪುವ ಮಹತ್ವಾಕಾಂಕ್ಷೆಯೊಂದಿಗೆ ಡಿಜಿಟಲ್ ಮತ್ತು ಆನ್‌ಲೈನ್ ಫ್ಲಾಟ್‌ಫಾರಂಗಳನ್ನು ಬಳಸಲು ಮಹಿಳಾ ಉದ್ಯಮಿಗಳ ಜ್ಞಾನ ಮತ್ತು ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಈ ಕಾರ್ಯಕ್ರಮದಡಿಯಲ್ಲಿ 10,000 ಮಹಿಳೆಯರಿಗೆ ಡಿಜಿಟಲ್ ಮಾರ್ಕೆಟಿಂಗ್ ಕುರಿತು ತರಬೇತಿ ನೀಡಲಾಗುತ್ತದೆ. ವರ್ಚುವಲ್ ತರಬೇತಿಯು ಡಿಜಿಟಲ್ ಮಾರ್ಕೆಟಿಂಗ್ ಪರಿಕರಗಳ ಪರಿಚಯವನ್ನು ಒದಗಿಸುವ ಗುರಿಯನ್ನು ಹೊಂದಿದೆ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಗಳನ್ನು ತಲುಪುವ ವ್ಯಾಪಾರವನ್ನು ಉತ್ತೇಜಿಸಲು ಇ–ಕಾಮರ್ಸ್ ಅನ್ನು ಬಳಸುವ ಪರಿಚಯವನ್ನು ಮಹಿಳಾ ಉದ್ಯಮಿಗಳಿಗೆ ಅವರ ಬಿಸಿನೆಸ್ ಹೆಚ್ಚಿಸಲು ಅನುವು ಮಾಡಿಕೊಡುತ್ತದೆ. ಮಹಿಳಾ ಉದ್ಯಮಿಗಳಿಗೆ UBUNTU ಉಚಿತವಾಗಿ ಈ ತರಬೇತಿಯನ್ನು ಒದಗಿಸುತ್ತದೆ. ತರಬೇತಿ ನಂತರ ಪ್ರಮಾಣಪತ್ರವನ್ನು ನೀಡಲಾಗುತ್ತದೆ ರಾಜ್ಯ ಮತ್ತು ದೇಶದ ವಿವಿಧ ಭಾಗಗಳಿಂದ 220ಕ್ಕೂ ಹೆಚ್ಚು ಮಹಿಳಾ ಉದ್ಯಮಿಗಳು ಭಾಗವಹಿಸಿದ್ದಾರೆ ಎಂದರು.



ಬೆಂಗಳೂರಿನ ಅಶೋಕ ಹೋಟೆಲ್‌ನಲ್ಲಿ ಎರಡು ದಿನಗಳ ಕಾಲ ಹಮ್ಮಿಕೊಂಡಿರುವ ಡಿಜಿಟಲ್ ಪರಿವರ್ತನೆ ಮಹಿಳಾ ಉದ್ಯಮಿಗಳಿಗೆ ಹೊಸ ದಾರಿ ಕಾರ್ಯಕ್ರಮದಡಿಯಲ್ಲಿ ಡಿಜಿಟಲ್ ಮಾರ್ಕೆಟಿಂಗ್ ಕುರಿತು ತರಬೇತಿ ಕಾರ್ಯಾಗಾರವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದರು.

> "ಗ್ರಾಹಕರೊಂದಿಗೆ ಸಂಪರ್ಕ ಸಾಧಿಸಲು ಇ–ಕಾಮರ್ಸ್ ಪ್ರಬಲ ಸಾಧನವಾಗಿದೆ. ಇದು ಮಹಿಳಾ ಉದ್ಯಮಿಗಳಿಗೆ ಹೆಚ್ಚಿನ ಲಾಭ ತರಬಹುದು. ಹೆಚ್ಚುವರಿಯಾಗಿ ಇ–ಕಾಮರ್ಸ್ ವ್ಯಾಪಾರ ವಹಿವಾಟುಗಳು ದೇಶದಲ್ಲಿ ಹೆಚ್ಚುತ್ತಿವೆ. COVID–19 ಕಾರಣದಿಂದ ಈ ಪ್ರದೇಶದಲ್ಲಿ ಇ–ಕಾಮರ್ಸ್ ವ್ಯವಹಾರದಲ್ಲಿ ಹೆಚ್ಚಳವಾಗಿದೆ. ಇದು ಮಹಿಳಾ ಉದ್ಯಮಿಗಳು ಎದುರಿಸುತ್ತಿರುವ ಸವಾಲುಗಳನ್ನು ಜಯಿಸಲು ಮತ್ತು ಜಾಗತಿಕ ಮತ್ತು ಪ್ರಾದೇಶಿಕ ಮಾರುಕಟ್ಟೆಗಳನ್ನು ಅನ್ವೇಷಿಸಲು ಒಂದು ದೊಡ್ಡ ಅವಕಾಶವನ್ನು ಒದಗಿಸಿದೆ. ಪ್ರಧಾನಿ ಮೋದಿ ಅವರ ದೃಷ್ಟಿಕೋನಕ್ಕೆ ಡಿಜಿಟಲ್ ಇಂಡಿಯಾ ಆಶಯಕ್ಕನುಗುಣವಾಗಿದೆ.
> –ಕೆ.ರತ್ನಪ್ರಭಾ, UBUNTU ಸಂಸ್ಥಾಪಕ ಅಧ್ಯಕ್ಷೆ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಒಂದನೇ ಪುಟದಿಂದ

ಸಿದ್ದರಾಮಯ್ಯ ಅಮೃತ ಮಹೋತ್ಸವ

ರಾಹುಲ್ ಗಾಂಧಿ ಅವರ ಭಾರೀ ಎತ್ತರದ ಕಟೌಟ್ ರಾರಾಜಿಸುತ್ತಿದೆ. ಪ್ರಮುಖ ಬೀದಿಗಳಲ್ಲಿ ಕಾಂಗ್ರೆಸ್ ನಾಯಕರನ್ನು ಸ್ವಾಗತಿಸುವ, ಸಿದ್ದರಾಮಯ್ಯ ಅವರಿಗೆ ಶುಭಾಶಯ ಕೋರುವಂತಹ ಫ್ಲೆಕ್ಸ್‌ಗಳು ಗಮನ ಸೆಳೆಯುತ್ತಿವೆ.

ಸಜ್ಜಾದ ಬೃಹತ್ ವೇದಿಕೆ: ಸಿದ್ದರಾಮಯ್ಯ ಅವರ ಆಪ್ತ ಮೈಸೂರಿನ ಪೆಂಡಾಲ್ ಮಾಲೀಕ ಷರೀಫ್, 200ಕ್ಕೂ ಹೆಚ್ಚು ಕಾರ್ಮಿಕರಿಂದ ಮುಖ್ಯ ವೇದಿಕೆ, ಸಾರ್ವಜನಿಕರಿಗಾಗಿ ವೇದಿಕೆ ಹಾಗೂ ಊಟದ ವೇದಿಕೆ ನಿರ್ಮಾಣಗೊಂಡಿದೆ. ಇಂತಹ ಬೃಹತ್ ವಿಶಾಲ ವೇದಿಕೆ ಇದೇ ಮೊದಲು ನಿರ್ಮಾಣವಾಗಿದೆ ಎನ್ನುತ್ತಾರೆ ಅವರು. ಆರು ಲಕ್ಷ ಆಸನಗಳ ವ್ಯವಸ್ಥೆ ಮಾಡಲಾಗಿದ್ದು, ಕಾರ್ಯಕ್ರಮ ವೀಕ್ಷಿಸಲು ಅಲ್ಲಲ್ಲಿ ಬೃಹತ್ ಎಲ್‌ಇಡಿ ಪರದೆಗಳ ವ್ಯವಸ್ಥೆ ಮಾಡಲಾಗಿದೆ.

ಕಾರ್ಯಕ್ರಮಕ್ಕೆ ಎಐಸಿಸಿ ವರಿಷ್ಠ ರಾಹುಲ್‌ಗಾಂಧಿ ಆಗಮಿಸಲಿದ್ದು, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ರಾಜ್ಯಸಭೆ ವಿಪಕ್ಷ ನಾಯಕ ಎಂ.ಮಲ್ಲಿಕಾರ್ಜುನ ಖರ್ಗೆ, ವಿಧಾನ ಪರಿಷತ್ ವಿಪಕ್ಷ ನಾಯಕ ಬಿ.ಕೆ.ಹರಿಪ್ರಸಾದ್ ಸೇರಿದಂತೆ ಹಲವು ಕಾಂಗ್ರೆಸ್ ಮುಖಂಡರು ಭಾಗವಹಿಸಲಿದ್ದಾರೆ.

7000 ಬಸ್ ವ್ಯವಸ್ಥೆ: ರಾಜ್ಯದ ವಿವಿಧ ಭಾಗಗಳಿಂದ ಸಿದ್ದರಾಮಯ್ಯ ಅವರ 75ನೇ ಜನ್ಮ ದಿನೋತ್ಸವಕ್ಕೆ ಬರಲಿರುವ ಅಭಿಮಾನಿಗಳು, ಕಾಂಗ್ರೆಸ್ ಕಾರ್ಯಕರ್ತರಿಗಾಗಿ 7000 ಬಸ್ಸುಗಳ ವ್ಯವಸ್ಥೆ ಮಾಡಲಾಗಿದೆ. ಪಕ್ಷದ ಮುಖಂಡರು, ಶಾಸಕರು, ಮಾಜಿ ಶಾಸಕರು, ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್, ಗ್ರಾಮ ಪಂಚಾಯತ್ ಸದಸ್ಯರು ಸೇರಿದಂತೆ ಹಲವು ಪ್ರಮುಖ ನಾಯಕರು ತಮ್ಮ ಊರುಗಳಿಂದ ವಾಹನಗಳಲ್ಲಿ ಕರೆತರಲು ವ್ಯವಸ್ಥೆ ಕೂಡ ಮಾಡಲಾಗಿದೆ.

ಹೋಟೆಲ್, ರೆಸಾರ್ಟ್, ವಸತಿ ಗೃಹಗಳು ಭರ್ತಿಯಾಗಿವೆ. ಅಮೃತ ಮಹೋತ್ಸವಕ್ಕೆ ಆಗಮಿಸುವ ಜನರಿಗಾಗಿ ದಾವಣಗೆರೆ ನಗರ ಮತ್ತು ಸುತ್ತಮುತ್ತಲಿನ ಹೋಟೆಲ್, ರೆಸಾರ್ಟ್ ಮತ್ತು ವಸತಿ ಗೃಹಗಳ ಕೊಠಡಿಗಳು ಈಗಾಗಲೇ ಭರ್ತಿಯಾಗಿವೆ. ಪಕ್ಕದ ಊರುಗಳಲ್ಲೂ ಹೋಟೆಲ್ ಮತ್ತು ವಸತಿ ಗೃಹಗಳ ಕೊಠಡಿಗಳು ಬುಕ್ಕಿಂಗ್ ಆಗಿವೆ.

ಲಕ್ಷ ಲಕ್ಷ ಮೈಸೂರು ಪಾಕ್



ಸಿದ್ದರಾಮಯ್ಯನವರ 75ನೇ ಜನ್ಮ ದಿನೋತ್ಸವದ ಅಂಗವಾಗಿ ಅವರ ಅಭಿಮಾನಿಗಳಿಗಾಗಿ ಲಕ್ಷ ಲಕ್ಷ ಮೈಸೂರು ಪಾಕ್ ಸಿದ್ಧಗೊಂಡಿದೆ. ಈಗಾಗಲೇ 8 ಲಕ್ಷಕ್ಕೂ ಹೆಚ್ಚು ಮೈಸೂರು ಪಾಕ್ ತಯಾರಾಗಿದೆ. ಕಾರ್ಯಕ್ರಮಕ್ಕೆ ಆಗಮಿಸುವವರಿಗಾಗಿ ಬಿಸಿ ಬೇಳೆಬಾತ್, ವೆಜ್ ಪಲಾವ್, ಮೊಸರು ಬಜ್ಜಿ ಮೊಸರನ್ನ, ಮೈಸೂರು ಪಾಕ್ ನೀಡಲಾಗುತ್ತದೆ. 170 ಊಟದ ಕೌಂಟರ್‌ಗಳಲ್ಲಿ ಒಂದು ನಿಮಿಷದಲ್ಲಿ 7000 ಮಂದಿಗೆ ಊಟ ವಿತರಿಸುವ ವ್ಯವಸ್ಥೆ ಇದೆ. ಬೆಳಗ್ಗೆ 9 ಗಂಟೆಯಿಂದಲೇ ಊಟ ನೀಡಲು ಪ್ರಾರಂಭವಾಗಲಿದೆ ಎಂದು ಅದರ ಉಸ್ತುವಾರಿ ಹೊತ್ತಿರುವವರು ತಿಳಿಸಿದ್ದಾರೆ. ಬೆಂಗಳೂರಿನ 2000 ಮಂದಿ ಬಾಣಸಿಗರು ಊಟದ ತಯಾರಿಯಲ್ಲಿ ತೊಡಗಿದ್ದಾರೆ.

ದಾವಣಗೆರೆಯತ್ತ ಅಭಿಮಾನಿಗಳು, ಕಾರ್ಯಕರ್ತರ ದಂಡು

ಸಿದ್ದರಾಮಯ್ಯ ಅಮೃತ ಮಹೋತ್ಸವ ಜನ್ಮ ದಿನೋತ್ಸವಕ್ಕೆ ರಾಜ್ಯದ ವಿವಿಧೆಡೆಯಿಂದ ಲಕ್ಷ ಲಕ್ಷ ಜನ ದಾವಣಗೆರೆಯತ್ತ ಬರುತ್ತಿದ್ದಾರೆ. ಮೈಸೂರು, ಚಾಮರಾಜನಗರ, ಮಂಡ್ಯ, ಕೊಡಗು, ಹಾಸನ ಇನ್ನಿತರೆ ಜಿಲ್ಲೆಗಳಿಂದ ಮಂಗಳವಾರ ಮಧ್ಯಾಹ್ನವೇ ಸಿದ್ದರಾಮಯ್ಯ ಅಭಿಮಾನಿಗಳ ದಂಡು ದಾವಣ ಗೆರೆಯತ್ತ ತೆರಳಿದವು. ಮೈಸೂರು, ಚಾಮರಾಜನಗರ ಜಿಲ್ಲೆಗಳಿಂದ ಸುಮಾರು 700 ಬಸ್ಸುಗಳಲ್ಲಿ ಸಿದ್ದರಾಮಯ್ಯ ಅಭಿಮಾನಿಗಳು, ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ತೆರಳಿದ್ದಾರೆ.

ಮೈಸೂರಿಂದ 25 ಸಾವಿರಕ್ಕೂ ಅಧಿಕ ಮಂದಿ



ವಾಹನಗಳ ಮೂಲಕ ಸಾವಿರಾರು ಮಂದಿ ತೆರಳಿದರು. ಮೈಸೂರು ನಗರದ ಎಲ್ಲಾ ವಾರ್ಡ್‌ಗಳಿಂದಲೂ ಅಭಿಮಾನಿಗಳು ವಾಹನ ವ್ಯವಸ್ಥೆ ಮಾಡಿದ್ದರು. ವಾಹನದ ಮುಂದೆ 'ಸಿದ್ದರಾಮಯ್ಯನವರ ಜನ್ಮದಿನ ಅಮೃತಮಹೋತ್ಸವ' ಬ್ಯಾನರ್ ಅಳವಡಿಸಿ, ಸಿದ್ದರಾಮಯ್ಯನವರಿಗೆ ಜೈಕಾರ ಹಾಕಿ ಪ್ರಯಾಣಕ್ಕೆ ಮುಂದಾಗಿದ್ದು ಕಂಡು ಬಂದಿತು.

ಈ ಸಂಬಂಧ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿ, ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳಿಂದ ಒಟ್ಟು 562 ಬಸ್ಸುಗಳ ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ ಟೆಂಪೋ ಟ್ರಾವೆಲರ್, ಕಾರು ಇನ್ನಿತರೆ ಮಾದರಿಯ 600ಕ್ಕೂ ಹೆಚ್ಚು ವಾಹನಗಳಲ್ಲೂ ಜನ ಆಗಮಿಸಲಿದ್ದಾರೆ. ಒಟ್ಟಾರೆ ಜಿಲ್ಲೆಯ 25 ಸಾವಿರಕ್ಕೂ ಹೆಚ್ಚು ಜನ ದಾವಣಗೆರೆಯಲ್ಲಿ ನಡೆಯುವ ಅಮೃತ ಮಹೋತ್ಸವದಲ್ಲಿ ಭಾಗಿಯಾಗಲಿದ್ದಾರೆ. ಪಕ್ಷದ ಎಲ್ಲಾ ನಾಯಕರು, ಮುಖಂಡರು ಮುಂಚಿತವಾಗಿ ತೆರಳಿದ್ದು, ಎಲ್ಲಾ ಕ್ಷೇತ್ರಗಳಿಂದ ರಾತ್ರಿಗೆ ವಾಹನಗಳು ಹೊರಡಲಿವೆ. ಮುಂಜಾನೆ ವೇಳೆಗೆ ದಾವಣಗೆರೆ ತಲುಪಲಿದ್ದಾರೆ ಎಂದರು. ಸಿದ್ದರಾಮಯ್ಯನವರ ಹುಟ್ಟೂರು ಸಿದ್ದರಾಮನಹುಂಡಿ ಸೇರಿದಂತೆ ವರುಣಾ ವಿಧಾನಸಭಾ ಕ್ಷೇತ್ರದಿಂದ ಹೆಚ್ಚು ಜನ ದಾವಣಗೆರೆಗೆ ತೆರಳಿದ್ದಾರೆ. ತಮ್ಮ ಊರಿನ ಮಗನ ಹುಟ್ಟುಹಬ್ಬವನ್ನು ಉತ್ತರದ ಬೆಣ್ಣೆ ನಗರಿಯಲ್ಲಿ ಅದ್ದೂರಿಯಾಗಿ ಆಚರಿಸುವುದನ್ನು ಕಣ್ತುಂಬಿಕೊಳ್ಳಲು 65–70 ಬಸ್ಸುಗಳು ಹಾಗೂ ನೂರಾರು ಇತರೆ ವಾಹನಗಳಲ್ಲಿ ಪ್ರಯಾಣ ಬೆಳೆಸಿದ್ದಾರೆ.

ಪರಿಹಾರ ನೀಡಿ

5,419 ಕಿ.ಮಿ ಗ್ರಾಮೀಣ ರಸ್ತೆಗಳು ಮಳೆಗೆ ಅಲ್ಲಲ್ಲಿ ಕೊಚ್ಚಿಹೋಗಿರುವ ಬಗ್ಗೆ ವರದಿಯಾಗಿದೆ ಎಂದು ಜಿಲ್ಲಾಧಿಕಾರಿಗಳು ವಿವರಿಸಿದರು. ಸಭೆಯಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ಆರ್ಥಿಕ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರಾದ ಐ.ಎಸ್.ಎನ್.ಪ್ರಸಾದ್, ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್.ಆರ್.ಉಮಾಶಂಕರ್, ರಾಜ್ಯ ವಿಕೋಪ ನಿರ್ವಹಣಾ ಪ್ರಾಧಿಕಾರದ ಆಯುಕ್ತ ಮನೋಜ್ ರಾಜನ್, ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು.

ಜಿಲ್ಲಾಧಿಕಾರಿಗಳಿಗೆ ಸಿಎಂ ಸೂಚನೆ

● ಸತತ ಮಳೆಯಿಂದ ಎಲ್ಲ ಕೆರೆಗಳು ತುಂಬಿದ್ದು, ಕೆರೆಗಳ ಕಟ್ಟೆಗಳು ಮತ್ತು ಕೋಡಿಗಳು ದುರ್ಬಲಗೊಂಡಿರುತ್ತವೆ. ಸಂಗ್ರಹ ಸಾಮರ್ಥ್ಯ ಹೆಚ್ಚಿರುವ ಕೆರೆಗಳ ಬಗ್ಗೆ ವಿಶೇಷ ಗಮನ ಹರಿಸಬೇಕು. ಕೆರೆಗಳು ವಡ್ಡು ಬಿರುಕು ಬಿಡದಂತೆ ನಿಗಾವಹಿಸಿ. ಸಣ್ಣ ನೀರಾವರಿ ಹಾಗೂ ಜಿಲ್ಲಾ ಪಂಚಾಯತ್ ಈ ಬಗ್ಗೆ ಜಂಟಿಯಾಗಿ ಕಾರ್ಯ ನಿರ್ವಹಿಸಬೇಕು. ● ಸಮರೋಪಾದಿಯಲ್ಲಿ ಜೀವ ರಕ್ಷಣೆ, ಹಾನಿಗೆ ಪರಿಹಾರ ಮತ್ತು ಪುನಶ್ಚೇತನ ಕಾರ್ಯಗಳನ್ನು ಕೈಗೊಳ್ಳುವುದು. ಕರಾವಳಿ 3 ಜಿಲ್ಲೆಗಳಲ್ಲಿ ಕೊಚ್ಚಿಹೋದ ರಸ್ತೆ ಸಂಪರ್ಕ ಪುನಃ ಸ್ಥಾಪಿಸಲು ಕ್ರಮ ಕೈಗೊಳ್ಳುವುದು. ● ಬಿದ್ದುಹೋದ ಮನೆಗಳ ಬಗ್ಗೆ ತುರ್ತಾಗಿ ಜಂಟಿ ಸಮೀಕ್ಷೆ ನಡೆಸಿ. ಭೂ ಕುಸಿತ ಸಂಭವಿಸುವ ಸಾಧ್ಯತೆ ಇರುವ ಕಡೆಗಳಲ್ಲಿ ಜನರನ್ನು ಮುಂಚಿತವಾಗಿಯೇ ಸ್ಥಳಾಂತರ ಮಾಡಿ. ಭಟ್ಕಳ, ಸುಳ್ಯ ಸೇರಿದಂತೆ ಇತರ ಕಡೆಗಳ ವಾಣಿಜ್ಯ ಸಂಕೀರ್ಣಗಳಲ್ಲಿ ನೀರು ನುಗ್ಗಿ ಹಾಳಾಗಿರುವ ಬಗ್ಗೆ ವರದಿ ಸಲ್ಲಿಸುವುದು. ● ಭಾರೀ ಮಳೆ ಹಿನ್ನೆಲೆ 'ರೆಡ್ ಅಲರ್ಟ್' ಪಡೆದ ಜಿಲ್ಲೆಗಳಲ್ಲಿ ಸೂಕ್ತ ಮುನ್ನೆಚ್ಚರಿಕೆ ವಹಿಸಿ. ಕೊಡಗು ಜಿಲ್ಲೆಯಲ್ಲಿ ಭೂ ಕುಸಿತವಾಗುವ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಿ. ● ಪ್ರವಾಹದಂಥ ತುರ್ತು ಸಂದರ್ಭದಲ್ಲಿ ತಕ್ಷಣ ಪರಿಹಾರ ಕೈಗೊಳ್ಳುವ ಮೂಲಕ ಸರ್ಕಾರ ಜನರ ಕಷ್ಟಗಳಿಗೆ ಸ್ಪಂದಿಸುತ್ತಿದೆ ಎಂಬ ಸಂದೇಶ ರವಾನಿಸುವುದು. ● ಜಿಲ್ಲಾಧಿಕಾರಿಗಳು ಪರಿಹಾರ ವಿಳಂಬ ಮಾಡದೇ ವಿತರಿಸಬೇಕು. ಪ್ರತಿ ತಾಲೂಕು ಇಒಗಳು ಅವರ ವ್ಯಾಪ್ತಿಯಲ್ಲಿ ಹಾನಿಯಾದ ಮನೆಗಳ ಪ್ರಾಥಮಿಕ ವರದಿ ಪಡೆಯಬೇಕು. ● ಕಾಳಜಿ ಕೇಂದ್ರಗಳಲ್ಲಿ ಸೂಕ್ತ ವ್ಯವಸ್ಥೆ ಮಾಡಿ ತಹಶೀಲ್ದಾರ್‌ಗಳು ಖಾತರಿಪಡಿಸಿ ಕೊಳ್ಳಬೇಕು. ಅದನ್ನು ಡಿಸಿಗಳು ಮೇಲ್ವಿಚಾರಣೆ ಮಾಡಬೇಕು. ● ಮೈಸೂರು, ದಾವಣಗೆರೆ ಹಾಗೂ ಉಡುಪಿ ಜಿಲ್ಲೆಗಳಿಗೆ ಅಗತ್ಯವಿರುವ ಹೆಚ್ಚುವರಿ ಅನುದಾನ ನೀಡಿ. ಹಾನಿಯಾದ ಮೀನುಗಾರರ ದೋಣಿಗಳ ದುರಸ್ತಿಗೆ ತಗಲುವ ವೆಚ್ಚ ಅಂದಾಜು ಮಾಡಿ. ಎಲ್ಲ ಇಲಾಖೆಗಳು ಪರಸ್ಪರ ಸಮನ್ವಯ ಸಾಧಿಸಿ ಭಾರಿ ಮಳೆ, ನೆರೆ ಸಂದರ್ಭಗಳಲ್ಲಿ ಜೀವ ರಕ್ಷಣೆಗೆ, ಪರಿಹಾರ ಮತ್ತು ಪುನಶ್ಚೇತನ ಕಾರ್ಯಕ್ಕೆ ಆದ್ಯತೆ ನೀಡಬೇಕು. ಅಲ್ಲದೇ ತ್ವರಿತ ಕ್ರಮ ಕೈಗೊಳ್ಳಬೇಕು.

ನಾಲ್ವರು ಜೀವಂತ ಸಮಾಧಿ

ಪ್ರವೀಣ ನಾಯ್ಕ್ ಹಾಗೂ ಲಕ್ಷ್ಮೀನಾಯ್ಕ್ ಎಂದು ಗುರುತಿಸಲಾಗಿದೆ. ಮನೆ ಮೇಲೆ ದಿಢೀರ್ ಗುಡ್ಡ ಕುಸಿದಿದ್ದರಿಂದ ಮನೆಯಲ್ಲಿದ್ದವರು ಹೊರಗೆ ಬರಲು ಸಾಧ್ಯವಾಗಿರಲಿಲ್ಲ. ಈ ಸುದ್ದಿ ತಿಳಿದ ಕೂಡಲೇ ಜಿಲ್ಲಾಡಳಿತ ರಕ್ಷಣಾ ಕಾರ್ಯಾಚರಣೆಯನ್ನು ಕೈಗೊಂಡಿತ್ತು. ಆದರೆ ಅವರ ಜೀವ ಉಳಿಸಲು ಸಾಧ್ಯವಾಗಿರಲಿಲ್ಲ. ಇನ್ನು ಸ್ಥಳೀಯರು ಹಾಗೂ ಎನ್ಡಿಆರ್‌ಎಫ್ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಶವಗಳನ್ನು ಹೊರತೆಗೆದಿದ್ದಾರೆ.

ಮುಕ್ತ ವಿಶ್ವವಿದ್ಯಾಲಯದಲ್ಲಿ ಕುಲಪತಿ, ಸಹಾಯಕ ಕುಲಸಚಿವ ಮಾರಾಮಾರಿ

ಪೊಲೀಸರಿಗೆ ದೂರು–ಪ್ರತಿ ದೂರು

ಮೈಸೂರು,ಆ.2(ಎಸ್‌ಪಿಎನ್)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ವಿದ್ಯಾಶಂಕರ್ ಹಾಗೂ ಸಹಾಯಕ ಕುಲಸಚಿವ(ಪರೀಕ್ಷಾಂಗ)ರ ನಡುವಿನ ಕಿತ್ತಾಟ ಬೀದಿಗೆ ಬಂದಿದ್ದು, ಇಬ್ಬರು ಜಯಲಕ್ಷ್ಮೀಪುರಂ ಠಾಣೆಯಲ್ಲಿ ದೂರು–ಪ್ರತಿ ದೂರು ನೀಡಿದ್ದಾರೆ.




ಪ್ರೊ ವಿದ್ಯಾಶಂಕರ್

ಕೆಲಸಕ್ಕೆ ಪದೇ ಪದೇ ಗೈರು ಹಾಜರಾಗುತ್ತಿದ್ದ ಸಹಾಯಕ ಕುಲಸಚಿವ(ಪರೀಕ್ಷಾಂಗ) ಎಸ್.ಪ್ರದೀಪ್ ಗಿರಿ ಅವರಿಗೆ ಕಾರಣ ಕೇಳಿ 10 ನೋಟೀಸ್ ಅನ್ನು ಈ ಹಿಂದೆ ಜಾರಿ ಮಾಡಲಾಗಿತ್ತು. ಅವರು ಈ ನೋಟೀಸ್‌ಗಳಿಗೆ ಸರಿಯಾದ ಉತ್ತರ ನೀಡಿರಲಿಲ್ಲ. ಅಲ್ಲದೆ, ಮಂಗಳವಾರವೂ ಕರ್ತವ್ಯಕ್ಕೆ ತಡವಾಗಿ ಆಗಮಿಸಿದ್ದರು. ಹಾಗಾಗಿ ಇಂದು ಅಂತಿಮವಾಗಿ ಅವರನ್ನು ಇಲಾಖಾ ವಿಚಾರಣೆ ಕಾಯ್ದಿರಿಸಿ, ಮುಂದಿನ ಆದೇಶದವರೆಗೆ ಅಮಾನತ್ತು ಮಾಡಲಾಗಿದೆ.

ಇದರಿಂದ ಕುಪಿತಗೊಂಡ ಎಸ್.ಪ್ರದೀಪ್ ಅವರು, ಮಂಗಳವಾರ ಮಧ್ಯಾಹ್ನ ನನ್ನ ಕೊಠಡಿಗೆ ಆಗಮಿಸಿ, ನನ್ನ ಅವಾಚ್ಯ ಶಬ್ದಗಳಿಂದ ನಿಂದಿಸುತ್ತ, ಹಲ್ಲೆಗೆ ಮುಂದಾದರು. ಈ ವೇಳೆ ಅಕ್ಕ–ಪಕ್ಕದಲ್ಲಿದ್ದ ಸಿಬ್ಬಂದಿ ತಡೆಯುವಾಗ ಕಿಟಕಿ ಗ್ಲಾಸ್ ತಗುಲಿ(ಎಸ್.ಪ್ರದೀಪ್ ಗಿರಿ ಅವರಿಗೆ) ಕಿವಿ ಬಳಿ ತರಚಿಗೊಂಡಿದೆ ಅಷ್ಟೇ. ಇದನ್ನು ಅವರು ಹಲ್ಲೆ ಎಂದು ನನ್ನ ಮೇಲೆ ಸುಳ್ಳು ದೂರು ನೀಡಿದ್ದಾರೆ. ಈ ಎಲ್ಲಾ ಅಂಶಗಳನ್ನು ನಮೂದಿಸಿ ಜಯಲಕ್ಷ್ಮೀಪುರಂ ಠಾಣೆಗೆ ಅವರ ವಿರುದ್ಧ ದೂರು ನೀಡಿದ್ದೇನೆ. ಕರ್ತವ್ಯ ಲೋಪ ಆರೋಪದಡಿ ಅವರನ್ನು ಅಮಾನತುಗೊಳಿಸಲಾಗಿದೆ ಎಂದು ಕುಲಪತಿ ಪ್ರೊ.ವಿದ್ಯಾಶಂಕರ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.



ಎಸ್.ಪ್ರದೀಪ್ ಗಿರಿ ಕಪಾಲಕ್ಕೆ ಆಗಿರುವ ಗಾಯ.



ಜಯಲಕ್ಷ್ಮೀ ಪುರಂ ಠಾಣೆ ಮುಂಭಾಗ ಸಹಾಯಕ ಕುಲಸಚಿವ ಎಸ್. ಪ್ರದೀಪ್ ಗಿರಿ ಅವರೊಂದಿಗೆ ಅವರ ಹಿತೈಷಿಗಳು

ಕುಲಪತಿ ಮತ್ತು ಆಪ್ತ ಸಹಾಯಕನ ವಿರುದ್ಧ ಪ್ರತಿ ದೂರು: ಮುಕ್ತ ವಿವಿ ಕುಲಪತಿ ಪ್ರೊ. ವಿದ್ಯಾಶಂಕರ್ ಹಾಗೂ ಅವರ ಆಪ್ತ ಸಹಾಯಕ ದೇವರಾಜು ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಿ ಜಯಲಕ್ಷ್ಮೀಪುರಂ ಠಾಣೆಯಲ್ಲಿ ಸಹಾಯಕ ಕುಲಸಚಿವ ಎಸ್.ಪ್ರದೀಪ್ ಗಿರಿ ಪ್ರತಿ ದೂರು ನೀಡಿದ್ದಾರೆ. ಕೆಎಸ್‌ಓಯುವಿನ ಪರೀಕ್ಷಾಂಗ ಭವನದ ನನ್ನ ಕಚೇರಿಗೆ ಕರ್ತವ್ಯಕ್ಕೆ ತಡವಾಗಿ ಆಗಮಿಸಿದ್ದಕ್ಕೆ ಕುಲಪತಿ ಪ್ರೊ.ವಿದ್ಯಾಶಂಕರ್, ತಮ್ಮ ಕಚೇರಿಯೊಳಗೆ ಕರೆಸಿಕೊಂಡು ಅವಾಚ್ಯ ಶಬ್ದಗಳಿಂದ ನಿಂದಿಸಿ, ನನ್ನ ಮೇಲೆ ಹಲ್ಲೆ ನಡೆಸಿದ್ದಾರೆ. ಇದಕ್ಕೆ ಅವರ ಆಪ್ತ ಸಹಾಯಕ ದೇವರಾಜು ಸಹ ಅವರಿಗೆ ಸಾಥ್ ನೀಡಿದರು ಎಂದು ಆರೋಪಿಸಿದ್ದಾರೆ.

ಈ ಹಿಂದೆ ಕುಲಪತಿ ಪ್ರೊ.ವಿದ್ಯಾಶಂಕರ್ ವಿರುದ್ಧ ಭ್ರಷ್ಟಾಚಾರ ಹಾಗೂ ಹಣ ದುರುಪಯೋಗ ಕುರಿತು ಸಾಮಾಜಿಕ ಕಾರ್ಯಕರ್ತರೊಬ್ಬರು ಪತ್ರಿಕಾಗೋಷ್ಠಿ ನಡೆಸಿ ಆರೋಪಿಸಿದ್ದರು. ಇವರಿಗೆ ಗೌಪ್ಯವಾಗಿ ನಾನು ಮಾಹಿತಿ ನೀಡಿದ್ದೇನೆ. ಎಂಬ ತಪ್ಪು ಗ್ರಹಿಕೆಯಿಂದ ನನ್ನ ವಿರುದ್ಧ ಸುಳ್ಳು ಆಪಾದನೆ ಹೊರಿಸಿ, ಹಲ್ಲೆ ನಡೆಸಿದ್ದಾರೆ.

ಅಲ್ಲದೆ, ಕರ್ನಾಟಕ ಮುಕ್ತ ವಿವಿ ಬೋಧಕರ ಸಂಘದ ಸದಸ್ಯನಾಗಿದ್ದು, ಕುಲಪತಿಗಳ ವಿರುದ್ಧ ಈ ಹಿಂದಿನ ಭ್ರಷ್ಟಾಚಾರ ಪ್ರಕರಣದಲ್ಲಿ ಪೊಲೀಸರ ತನಿಖೆ ವೇಳೆ ಹೇಳಿಕೆ ನೀಡಿದ್ದೆ. ಇವೆಲ್ಲಾ ಪ್ರಕರಣಗಳನ್ನು ಮನಸ್ಸಿನಲ್ಲಿಟ್ಟುಕೊಂಡು ನನ್ನ ವಿರುದ್ಧ ಜಿದ್ದು ಸಾಧಿಸಿ, ಮಂಗಳವಾರ ಮಧ್ಯಾಹ್ನ ಅವರ ಕಚೇರಿಗೆ ಕರೆಸಿ, ಬಾಗಿಲು ಹಾಕಿಕೊಂಡು ನನ್ನ ಮೇಲೆ ಹಲ್ಲೆ ಮಾಡಿದ್ದು, ಇದಕ್ಕೆ ಕುಲಪತಿಗಳ ಆಪ್ತ ಸಹಾಯಕ ದೇವರಾಜ್ ಸಹ ಸಾಥ್ ನೀಡಿದ್ದಾರೆ ಎಂದು ಜಯಲಕ್ಷ್ಮೀಪುರಂ ಠಾಣೆಗೆ ದೂರು ನೀಡಿದ್ದೇನೆ.ಅಲ್ಲದೆ ಕೆ.ಆರ್.ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ವೈದ್ಯಕೀಯ ಪ್ರಮಾಣ ಪತ್ರ (ಎಂಎಲ್‌ಸಿ) ಪಡೆಯಲಾಗಿದೆ ಎಂದು 'ಮೈಸೂರು ಮಿತ್ರ'ನಿಗೆ ಪ್ರದೀಪ್ ತಿಳಿಸಿದರು.



ಜಯಲಕ್ಷ್ಮೀಪುರಂ ಠಾಣೆ ಪೊಲೀಸ್ ಇನ್ಸ್‌ಪೆಕ್ಟರ್ ಮುಕ್ತ ವಿವಿ ಸಹಾಯಕ ಕುಲಸಚಿವ ಹಾಗೂ ಕುಲಪತಿಗಳ ಕಚೇರಿಗೆ ಭೇಟಿ ನೀಡಿ, ಪರಿಶೀಲಿಸುತ್ತಿರುವುದು.

ಸ್ಥಳ ಪರಿಶೀಲನೆ: ಅಲ್ಲದೆ, ಸಹಾಯಕ ಕುಲಸಚಿವರು ಹಾಗೂ ಕುಲಪತಿಗಳ ದೂರಿನ ಹಿನ್ನೆಲೆಯಲ್ಲಿ ಜಯಲಕ್ಷ್ಮೀಪುರಂ ಠಾಣೆ ಪೊಲೀಸ್ ಇನ್ಸ್‌ಪೆಕ್ಟರ್ ನೇತೃತ್ವದಲ್ಲಿ ಮುಕ್ತ ವಿವಿಯ ಕುಲಸಚಿವ ಕಚೇರಿ ಹಾಗೂ ಕುಲಪತಿಗಳ ಕಚೇರಿಗೆ ಭೇಟಿ ನೀಡಿ, ಸ್ಥಳ ಪರಿಶೀಲನೆ ಮಾಡಿದ್ದು, ಈ ಘಟನೆ ಕುರಿತು ಮುಕ್ತ ವಿವಿ ಸಿಬ್ಬಂದಿಗಳಿಂದ ಮಾಹಿತಿ ಪಡೆದಿದ್ದಾರೆ.

ಈ ಪ್ರಕರಣ ಕುರಿತು ಮಾಹಿತಿ ಪಡೆಯಲು ಜಯಲಕ್ಷ್ಮೀಪುರಂ ಠಾಣೆ ಪೊಲೀಸ್ ಇನ್ಸ್‌ಪೆಕ್ಟರ್ ಹಾಗೂ ನಗರ ಪೊಲೀಸ್ ಆಯುಕ್ತರು, ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಅವರನ್ನು ಸಂಪರ್ಕಿಸಲು ಪ್ರಯತ್ನಿಸಿದರೂ ಅವರು ಕರೆ ಸ್ವೀಕರಿಸಲಿಲ್ಲ.

ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್‌ನಿಂದ ಮಹಾರಾಜ ಟ್ರೋಫಿ 20 ಪಂದ್ಯಾವಳಿ

ಮೈಸೂರು ವಾರಿಯರ್ಸ್‌ಗೆ ಕರುಣ್ ನಾಯರ್ ನಾಯಕ

ಮೈಸೂರು, ಆ.2(ಜಿಎ)– ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ವತಿಯಿಂದ ನಡೆಯುವ ಮಹಾರಾಜ ಟ್ರೋಫಿ ಟಿ20 ಪಂದ್ಯಾವಳಿ(ಈ ಹಿಂದೆ ಕರ್ನಾಟಕ ಪ್ರೀಮಿಯರ್ ಲೀಗ್)ಯಲ್ಲಿ ಮೈಸೂರು ವಾರಿಯರ್ಸ್ ತಂಡವನ್ನು ಕರುಣ್ ನಾಯರ್ ಮುನ್ನಡೆಸಲಿದ್ದಾರೆ.



ಪಂದ್ಯಾವಳಿಯು ಆ.7ರಿಂದ 26ರವರೆಗೆ ಸಾಂಸ್ಕೃತಿಕ ನಗರಿ ಮೈಸೂರು ಹಾಗೂ ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ನಡೆಯಲಿದ್ದು, ಜು.30 ರಂದು ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ತಂಡದ ಆಯ್ಕೆ ವೇಳೆ ಸೈಕಲ್ ಪ್ಯೂರ್ ಅಗರಬತ್ತಿ ಪ್ರಾಯೋಜಕತ್ವದ ಮೈಸೂರು ವಾರಿಯರ್ಸ್ ಕ್ರಿಕೆಟ್ ತಂಡದ ನಾಯಕರನ್ನಾಗಿ ಕರುಣ್ ನಾಯರ್ ಅವರನ್ನು ಆಯ್ಕೆ ಮಾಡಲಾಯಿತು.

ಕರುಣ್ ನಾಯರ್ ಅತ್ಯುತ್ತಮ ಬ್ಯಾಟ್ಸ್‌ಮನ್ ಆಗಿದ್ದು, ಅವರು ಭಾರತದ ಪರ ಜಿಂಬಾಬೆ ವಿರುದ್ಧ ಸೀಮಿತ ಓವರ್‌ಗಳ ಪಂದ್ಯ ಆಡುವ ಮೂಲಕ ಅಂತರಾಷ್ಟ್ರೀಯ ಮಟ್ಟದಲ್ಲಿ ತಮ್ಮ ವೃತ್ತಿ ಜೀವನ ಆರಂಭಿಸಿದರು. ವೀರೇಂದ್ರ ಸೆಹ್ವಾಗ್ ಬಳಿಕ 2016ರಲ್ಲಿ ಇಂಗ್ಲೆಂಡ್‌ನಲ್ಲಿ ನಡೆದ ಟೆಸ್ಟ್ ಕ್ರಿಕೆಟ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಪಂದ್ಯದಲ್ಲಿ ತ್ರಿಶತಕ ಸಿಡಿಸಿದ ಸಾಧನೆ ಮಾಡಿದ್ದಾರೆ.

ಸೈಕಲ್ ಪ್ಯೂರ್ ಅಗರಬತ್ತಿ ವ್ಯವಸ್ಥಾಪಕ ನಿರ್ದೇಶಕ ಅರ್ಜುನ್ ರಂಗ ಮಾತನಾಡಿ, ಕರುಣ್ ನಾಯರ್ ಅವರಿಗೆ ನಾಯಕತ್ವ ಸವಾಲಾಗಲಿದ್ದು, ತಮ್ಮ ದೈಹಿಕ ದೃಢತೆ ಮತ್ತು ಚುರುಕುತನ ಉಳಿಸಿಕೊಳ್ಳಬೇಕು. ಅಲ್ಲದೇ ಅವರ ಬದ್ಧತೆ ಮತ್ತು ಪ್ರಯತ್ನ ತಂಡಕ್ಕೆ ಮೌಲ್ಯವರ್ಧನೆ ನೀಡಲಿವೆ. ಅವರ ನಾಯಕತ್ವ ತಂಡದ ಸ್ಥಾನ ದೃಢಪಡಿಸಲಿದೆ. ಈ ವರ್ಷ ನಾವು ತಂಡ ಬಗ್ಗೆ ಅಪಾರ ಭರವಸೆ ಹೊಂದಿದ್ದೇವೆ ಎಂದರು.

ನಾಯಕ ಕರುಣ್ ನಾಯರ್ ಮಾತನಾಡಿ, 'ಈ ಜವಾಬ್ದಾರಿಯನ್ನು ನಾನು ವಿನಮ್ರನಾಗಿ ಸ್ವೀಕರಿಸುತ್ತೇನೆ. ನಾನು ದೇಶಕ್ಕಾಗಿ ಆಡಿದ್ದೇನೆ. ಈಗ ಕೆಲವು ಉತ್ತಮ ಆಟಗಾರರನ್ನು ಪೋಷಿಸಲು ಮತ್ತು ತಂಡಕ್ಕೆ ನನ್ನ ಅನುಭವ ಧಾರೆ ಎರೆಯುವ ಸಮಯ ಬಂದಿದೆ. ಮೈಸೂರು ವಾರಿಯರ್ಸ್ ತಂಡಕ್ಕೆ ಇದು ನನ್ನ 2ನೇ ವರ್ಷದ ನಾಯಕತ್ವ ಎಲ್ಲರೂ ಹೆಮ್ಮೆ ಪಡುವಂತೆ ನಾವು ಪ್ರದರ್ಶನ ನೀಡುವ ಸಕಾರಾತ್ಮಕ ಮನೋಭಾವ ಹೊಂದಿದ್ದೇನೆ ಎಂದರು.

ಮೈಸೂರು ವಾರಿಯರ್ಸ್ ತಂಡ: ಕರುಣ್ ನಾಯರ್, ಶ್ರೇಯಸ್ ಗೋಪಾಲ್, ಪವನ್ ದೇಶಪಾಂಡೆ, ವಿದ್ಯಾಧರ ಪಾಟೀಲ್, ನಿಹಾಲ್ ಉಲ್ಲಾಳ್, ಪ್ರತೀಕ್ ಜೈನ್, ಭರತ್ ಧುರಿ, ಚಿರಂಜೀವಿ, ಶುಭಾಂಗ ಹೆಗ್ಡೆ, ಲೋಚನ್ ಅಪ್ಪಣ್ಣ, ಶಿವರಾಜ್, ಮೋನಿಶ್ ರೆಡ್ಡಿ, ವರುಣ್ ರಾವ್, ರಾಹುಲ್ ಪ್ರಸನ್ನ, ನಿತಿನ್ ಬಿಲ್ಲೆ, ಆದಿತ್ಯ ಗೋಯಲ್, ಅಭಿಷೇಕ್ ಅಲವತ್, ಅರುಣ್ ಕೆ., ತುಷಾರ್ ಹೆಚ್. ಮತ್ತು ನಾಗಭರತ್, ಪಿ.ವಿ. ಶಶಿಕಾಂತ್ ಅವರನ್ನು ತಂಡದ ಮುಖ್ಯ ತರಬೇತುದಾರರಾಗಿ ನೇಮಕ ಮಾಡಲಾಗಿದೆ. ತಂಡದಲ್ಲಿ ಸಹಾಯಕ ತರಬೇತುದಾರರಾಗಿ ಕೆಎಲ್ ಅಕ್ಷಯ್, ಆಯ್ಕೆದಾರರಾಗಿ ಕೆಎಲ್ ಅಶ್ವತ್, ಫಿಜಿಯೋ ಥೆರಪಿಸ್ಟ್ ಆಗಿ ಟಿ.ಮಂಜುನಾಥ್, ಟ್ರೇನರ್ ಆಗಿ ಇರ್ಫಾನ್‌ಉಲ್ಲಾ ಖಾನ್, ವಿಡಿಯೋ ವಿಶ್ಲೇಷಕರಾಗಿ ಕಿರಣ್ ಕೆ. ಕಾರ್ಯನಿರ್ವಹಿಸಲಿದ್ದಾರೆ.

ಮೈಸೂರಿನಲ್ಲಿ ಭರದ ಸಿದ್ಧತೆ: ಮಹಾರಾಜ ಟ್ರೋಫಿ ಟಿ20 ಪಂದ್ಯಾವಳಿ ಟ್ರೋಫಿಯನ್ನು ಆ.4ರಂದು ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಅನಾವರಣಗೊಳಿಸಲಾಗುವುದು. ಅಂದಿನ ಕಾರ್ಯಕ್ರಮದಲ್ಲಿ ನಟ ಕಿಚ್ಚ ಸುದೀಪ್, ಕೆಎಸ್‌ಸಿಎ ಅಧ್ಯಕ್ಷ ರೋಜರ್ ಬಿನ್ನಿ, ಕೋಶಾಧಿಕಾರಿ ವಿನಯ್ ಮೃತ್ಯುಂಜಯ ಭಾಗವಹಿಸಲಿದ್ದಾರೆ. ಮೈಸೂರಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಮೈದಾನ (ಗಂಗೋತ್ರಿ ಗ್ಲೇಡ್ಸ್) ನಲ್ಲಿ ಉದ್ಘಾಟನಾ ಪಂದ್ಯ ನಡೆಯಲಿದ್ದು, ಈಗಾಗಲೇ ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಳ್ಳಲಾಗಿದೆ. ಮಳೆ ಬರುವ ಸಾಧ್ಯತೆ ಹೆಚ್ಚಿದ್ದು, ಸೂಕ್ತ ಯಂತ್ರೋಪಕರಣ ಬಳಸಲಾಗುತ್ತದೆ ಎಂದು ಕೆಎಸ್‌ಸಿಎ ಮೈಸೂರು ವಿಭಾಗದ ಸಂಚಾಲಕ ಎಸ್.ಸುಧಾಕರ್ ರೈ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ತ್ರೈ ಮಾಸಿಕದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ

ಬೆಂಗಳೂರು: ಮತದಾರರು ಈಗ ತಮ್ಮ ಆಧಾರ್ ಸಂಖ್ಯೆಯನ್ನು ಮತದಾರರ ಗುರುತಿನ ಚೀಟಿಯೊಂದಿಗೆ ಜೋಡಿಸಬಹುದು ಎಂದು ಚುನಾವಣಾ ಆಯೋಗ ಪ್ರಕಟಿಸಿದೆ.

17 ವರ್ಷ ಆದವರು 18 ವರ್ಷಕ್ಕೆ ಕಾಯುವ ಬದಲು ಮುಂಚಿತವಾಗಿ ಮತದಾರರ ಗುರುತಿನ ಚೀಟಿಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಪ್ರತಿ ತ್ರೈಮಾಸಿಕದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆಗೂ ಆಯೋಗ ಮುಂದಾಗಿದೆ.

ಚುನಾವಣಾ ಆಯೋಗದ ವಿವಿಧ ಉಪಕ್ರಮಗಳಿಗೆ ಚಾಲನೆ ನೀಡಿ ಮಾತನಾಡಿದ ರಾಜ್ಯದ ಮುಖ್ಯ ಚುನಾವಣಾಧಿಕಾರಿ ಮನೋಜ್‌ಕುಮಾರ್ ಮೀನಾ, ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಲು, ವಿಳಾಸ ಬದಲಾವಣೆ, ಪಟ್ಟಿಯಿಂದ ಹೆಸರು ತೆಗೆದುಹಾಕುವುದು ಮತ್ತು ಅದರೊಂದಿಗೆ ಆಧಾರ್ ಜೋಡಣೆಗಾಗಿ ನಾಗರಿಕರಿಗೆ ಹೊಸ ನಮೂನೆಗಳನ್ನು ನೀಡಲಾಗುವುದು ಎಂದು ತಿಳಿಸಿದರು.

ಚುನಾವಣಾ ಆಯೋಗ ಈಗ 17 ವರ್ಷ ವಯಸ್ಸಿನವರಿಂದ ಮುಂಚಿತವಾಗಿ ಅರ್ಜಿಗಳನ್ನು ಸ್ವೀಕರಿಸುತ್ತದೆ ಮತ್ತು ಅವುಗಳನ್ನು ನಿಯತಕಾಲಿಕವಾಗಿ ಪರಿಶೀಲಿಸುತ್ತದೆ. ಮೊದಲು, ಅವರು ನೋಂದಾಯಿಸಲು ಜನವರಿ 1ರವರೆಗೆ ಕಾಯಬೇಕಾಗಿತ್ತು, ಆದರೆ ಹೊಸ ವ್ಯವಸ್ಥೆಯಲ್ಲಿ, ಜನವರಿ, ಏಪ್ರಿಲ್, ಜುಲೈ ಮತ್ತು ಅಕ್ಟೋಬರ್‌ನಲ್ಲಿ ಪ್ರತಿ ತ್ರೈಮಾಸಿಕದಲ್ಲಿ ಅರ್ಜಿಗಳನ್ನು ಪರಿಶೀಲಿಸಲಾಗುತ್ತದೆ. ಮತದಾರರು ವೈಯಕ್ತಿಕ ವಿವರಗಳು ಮತ್ತು ಇಪಿಐಸಿ ಸಂಖ್ಯೆಗಳನ್ನು ಬಳಸಿ ಕೊಂಡು ತಮ್ಮ ಮತದಾರರ ಪಟ್ಟಿ ಹುಡುಕಲು ಅನುವು ಮಾಡಿಕೊಡುವ ಸಹಾಯವಾಣಿ ಆರ್ಪ್‌ನ್ನು ಆಯೋಗ ಪರಿಚಯಿಸಿದೆ.

ಚುನಾವಣಾ ಆಯೋಗವು ಸೋಮವಾರದಿಂದ ಸ್ವಯಂಪ್ರೇರಣೆಯಿಂದ ಮತದಾರರ ಗುರುತಿನ ಚೀಟಿಗೆ ಆಧಾರ್ ಜೋಡಿಸುವ ಅಭಿಯಾನಕ್ಕೆ ಮುಂದಾಗಿದೆ. ಆದರೆ ಇದು ಕಡ್ಡಾಯವಲ್ಲ. ನಕಲಿ ನಮೂದುಗಳನ್ನು ತೆಗೆದುಹಾಕಲು ಮತ್ತು ಸೇವಾ ಮತದಾರರಿಗೆ ಚುನಾವಣಾ ಕಾನೂನನ್ನು ಲಿಂಗ–ತಟಸ್ಥಗೊಳಿಸಲು ಮತದಾರರ ಪಟ್ಟಿಯೊಂದಿಗೆ ಆಧಾರ್ ವಿವರಗಳನ್ನು ಜೋಡಿಸಲು ಅವಕಾಶ ಮಾಡಿಕೊಡಲು ಜೂನ್‌ನಲ್ಲಿ ಸರ್ಕಾರ ಮತದಾರರ ನೋಂದಣಿ ನಿಯಮಗಳಿಗೆ ತಿದ್ದುಪಡಿ ಮಾಡಿದೆ.

ಮೈಸೂರಲ್ಲಿ ಭಕ್ತಿಭಾವದ ನಾಗರ ಪಂಚಮಿ



ಮೈಸೂರು,ಆ.2(ಎಂಟಿವೈ)–ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಮಂಗಳವಾರ ನಾಗರ ಪಂಚಮಿಯನ್ನು ಭಕ್ತಿ–ಭಾವದಿಂದ ಆಚರಿಸಲಾಯಿತು. ಮೈಸೂರಿನ ಅಮೃತೇಶ್ವರ ದೇವಾಲಯ ಸೇರಿದಂತೆ ನಗರದ ವಿವಿಧೆಡೆ ನಾಗರಕಲ್ಲಿಗೆ ಜನರು ಹಾಲೆರೆದು ಪೂಜೆ ಸಲ್ಲಿಸಿದರು. ಅಲ್ಲದೆ ವಿವಿಧೆಡೆ ಹುತ್ತಗಳಿಗೆ ಹಾಲು, ಬೆಣ್ಣೆ, ಅರಿಶಿನ, ಕುಂಕುಮ ಹಚ್ಚುವ ಮೂಲಕ ಪೂಜಿಸಿ ನಾಗರಪಂಚಮಿಯನ್ನು ಆಚರಿಸಿದರು. ಹಿಂದೂ ಸಂಪ್ರದಾಯದಲ್ಲಿ ಅಣ್ಣ–ತಂಗಿಯರ ಬಾಂಧವ್ಯವನ್ನು ಗಟ್ಟಿಗೊಳಿಸುವ ಹಬ್ಬ ಇದಾಗಿದೆ. ಈ ಹಿನ್ನೆಲೆಯಲ್ಲಿ ಮಹಿಳೆಯರು, ಹೆಣ್ಣು ಮಕ್ಕಳು ನಾಗರ ಪಂಚಮಿಯನ್ನು ಸಂಭ್ರಮದಿಂದ ಆಚರಿಸಿದರು.

ಮರದ ಮೇಲೆ ಕೇರೆ ಹಾವು ಭರ್ಜರಿ ಬೇಟೆ

ಮೈಸೂರಿನ ಮಹಾರಾಜ ಪದವಿ ಪೂರ್ವ ಕಾಲೇಜಿನ ಹಿಂಭಾಗದ ರಸ್ತೆಯಲ್ಲಿರುವ ಮರದ ಮೇಲೆ ಬೃಹತ್ ಗಾತ್ರದ ಕೇರೆ ಹಾವು ಕಾಣಿಸಿಕೊಂಡು ಮರದ ಮೇಲಿದ್ದ ಪೊಟರೆಯಲ್ಲಿದ್ದ ಇಲಿಯೊಂದನ್ನು ಕಚ್ಚಿ ತಂದು ನೂರಾರು ಜನರ ಸಮ್ಮುಖದಲ್ಲೇ ಭಕ್ಷಿಸಿತು. ಕೆಲ ಸಮಯದ ನಂತರ ಮತ್ತೆ ಪೊಟರೆಗೆ ನುಸುಳಿ ಮತ್ತೊಂದು ಇಲಿಯನ್ನು ಕಚ್ಚಿಕೊಂಡು ಬಂದಿತು. ಈ ವೇಳೆ ಆ ಇಲಿ ಹಾವಿನ ಬಾಯಿಂದ ತಪ್ಪಿಸಿಕೊಂಡು ಮರದಿಂದ ಕೆಳಗೆ ಹಾರಿ ಬಚಾವಾಯಿತು.

ಹೀಗೆ ಒಂದೂವರೆ ಗಂಟೆ ಮರದಲ್ಲಿ ಹರಿದಾಡುತ್ತಿದ್ದ ಕೇರೆ ಹಾವನ್ನು ನೋಡಲು ನೂರಾರು ಮಂದಿ ನೆರೆದಿದ್ದರು. ಜನದಟ್ಟಣೆಯಿಂದ ವಾಹನ ಸಂಚಾರಕ್ಕೆ ಕೆಲ ಸಮಯ ಅಡ್ಡಿಯಾಯಿತು. ವಿಷಯ ತಿಳಿದು ಸ್ಥಳಕ್ಕೆ ಬಂದ ಸ್ನೇಕ್ ಶಿವು ಕೇರೆ ಹಾವನ್ನು ರಕ್ಷಿಸಿ, ಸುರಕ್ಷಿತ ಸ್ಥಳದಲ್ಲಿ ಬಿಡುಗಡೆ ಮಾಡಿದರು.



ಆ.25ರಂದು ಶಿವಾರ್ಚಕ ಸಮುದಾಯದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ

ಮೈಸೂರು,ಆ.2(ಪಿಎಂ)–ಶ್ರೀ ಶಿವಾರ್ಚಕ ಸೇವಾ ಟ್ರಸ್ಟ್‌ನಿಂದ ಆ.25ರಂದು ಶಿವಾರ್ಚಕ ಸಮುದಾಯದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ದೀಕ್ಷಾ ಉಪನಯನ ಹಾಗೂ ಶ್ರೀ ವೀರಭದ್ರೇಶ್ವರ ಸ್ವಾಮಿಯ ರುದ್ರಾಭಿಷೇಕ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಮಲ್ಲಿಕಾರ್ಜುನ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯ ಕರ್ನಾಟಕ ರಾಜ್ಯ ಶ್ರೀ ಶಿವಾರ್ಚಕ ಸಂಘದ ಆವರಣದಲ್ಲಿ ಅಂದು ಬೆಳಗ್ಗೆ 11ಕ್ಕೆ ಕಾರ್ಯಕ್ರಮ ನಡೆಯಲಿದೆ ಎಂದರು.

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಗಳಿಸಿದ ಸಮುದಾಯದ ಒಟ್ಟು 20 ಮಂದಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು. ಆಸಕ್ತರು ಆ.15ರೊಳಗೆ ಅಂಕಪಟ್ಟಿಯ ಜೆರಾಕ್ಸ್ ಪ್ರತಿಯನ್ನು ಟ್ರಸ್ಟ್ ವಿಳಾಸಕ್ಕೆ (ನಂ.11, ಶಿವಶಕ್ತಿ ನಿಲಯ, ಪಂಚಗವಿ ಮಠ ರಸ್ತೆ ಗೌರಿಶಂಕರನಗರ ಮೈಸೂರು –570025) ಕಳುಹಿಸಬಹುದು. ವಿವರಗಳಿಗೆ ಮೊ.ಸಂ. 98447 05061 ಸಂಪರ್ಕಿಸಬಹುದು. ಜೊತೆಗೆ ಆ.24ರಂದು ವಿವಿಧ ಪೂಜಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು. ಟ್ರಸ್ಟ್‌ನ ಕಾರ್ಯದರ್ಶಿ ಸದಾಶಿವಮೂರ್ತಿ, ಖಜಾಂಚಿ ಗಿರೀಶ್, ಕುಮಾರ ಸ್ವಾಮಿ, ವಿಶ್ವನಾಥ್ ಸುದ್ದಿಗೋಷ್ಠಿಯಲ್ಲಿದ್ದರು.

ಹತ್ಯೆಗೀಡಾದ ಹಿಂದೂಪರ ಕಾರ್ಯಕರ್ತರಿಗೆ ಮೈಸೂರಲ್ಲಿ ಶ್ರದ್ಧಾಂಜಲಿ

ಮೌನ ಮೆರವಣಿಗೆ ಮೂಲಕ ಭಾವಪೂರ್ಣ ನಮನ

ಮೈಸೂರು, ಆ.2(ಎಂಕೆ)– ಇದುವರೆಗೆ ಹತ್ಯೆಗೀಡಾದ ದಕ್ಷಿಣ ಕನ್ನಡ ಜಿಲ್ಲಾ ಬಿಜೆಪಿ ಯುವ ಮೋರ್ಚಾ ಕಾರ್ಯಕಾರಿಣಿ ಸದಸ್ಯ ಪ್ರವೀಣ್ ನೆಟ್ಟಾರು ಸೇರಿದಂತೆ ಹಿಂದೂಪರ ಸಂಘಟನೆಗಳ ಕಾರ್ಯಕರ್ತರಿಗೆ ಹಿಂದೂಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಮೌನ ಮೆರವಣಿಗೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು.



ನಗರದ ಶ್ರೀ ಕೋಟೆ ಆಂಜನೇಯ ದೇವಸ್ಥಾನದ ಎದುರು ಜಮಾವಣೆಗೊಂಡ ಕಾರ್ಯಕರ್ತರು ಹತ್ಯೆಗೊಳಗಾದ ಹಿಂದೂಪರ ಸಂಘಟನೆಗಳ ಕಾರ್ಯಕರ್ತರ ಭಾವಚಿತ್ರ ಹಾಗೂ ಕೇಸರಿ ಬಾವುಟಗಳನ್ನು ಹಿಡಿದು ಆಂಜನೇಯ ದೇವಸ್ಥಾನದಿಂದ ದೊಡ್ಡಗಡಿಯಾರ, ಗಾಂಧಿವೃತ್ತ, ಮಕ್ಕಾಜಿ ಚೌಕದ ಮೂಲಕ ಸಯ್ಯಾಜಿರಾವ್ ರಸ್ತೆ ಮಾರ್ಗವಾಗಿ ಚಿಕ್ಕಗಡಿಯಾರದವರೆಗೆ ಮೌನ ಮೆರವಣಿಗೆ ನಡೆಸಿದರು.

ಬಳಿಕ ಚಿಕ್ಕಗಡಿಯಾರದ ಬಳಿ ಮೌನಾಚರಣೆ ನಡೆಸಿ, ಹತ್ಯೆಯಾದ ಹಿಂದೂಪರ ಕಾರ್ಯಕರ್ತರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ವೇಳೆ ಹಿಂದೂಪರ ಸಂಘಟನೆಗಳ ಒಕ್ಕೂಟದ ಸಂಚಾಲಕ ಮೈ.ಕಾ. ಪ್ರೇಮ್‌ಕುಮಾರ್ ಮಾತನಾಡಿ, ಶಿವಮೊಗ್ಗದ ಹರ್ಷ ಕೊಲೆ ಪ್ರಕರಣ ಜನರ ಮನಸ್ಸಿನಲ್ಲಿ ಮಾಸುವ ಮುನ್ನವೇ ಪ್ರವೀಣ್ ನೆಟ್ಟಾರು ಹತ್ಯೆ ನಡೆದಿದೆ. ಕಳೆದ 8–10 ವರ್ಷಗಳಲ್ಲಿ ಸುಮಾರು 30ಕ್ಕೂ ಅಧಿಕ ಹಿಂದೂಪರ ಕಾರ್ಯಕರ್ತರ ಹತ್ಯೆಯಾಗಿದ್ದು, ರಾಜ್ಯದಲ್ಲಿ ಹಿಂದೂ ವಿರೋಧಿ ಸರ್ಕಾರ ಆಡಳಿತ ನಡೆಸುತ್ತಿದೆ ಎಂಬ ಭಾವನೆಯನ್ನು ಜನರಲ್ಲಿ ಮೂಡಿದೆ ಎಂದು ಹೇಳಿದರು.

ಹಿಜಾಬ್, ಹಲಾಲ್ ಹಾಗೂ ಆಜಾನ್ ವಿಚಾರವಾಗಿ ಹಿಂದೂ ಹಾಗೂ ಮುಸ್ಲಿಂ ಸಂಘಟನೆಗಳ ನಡುವೆ ಬಿಕ್ಕಟ್ಟು ಪ್ರಾರಂಭವಾದಾಗಲೇ ಎಚ್ಚೆತ್ತುಕೊಳ್ಳಬೇಕಿದ್ದ ಗುಪ್ತಚರ ಇಲಾಖೆ ಮಲಗಿದೆ. ಪೊಲೀಸ್ ಇಲಾಖೆ ವರ್ಗಾವಣೆ ದಂಧೆಯೇ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಡಲು ಮುಖ್ಯ ಕಾರಣ. ಪ್ರಾಮಾಣಿಕ ಅಧಿಕಾರಿಗಳು ಮೂಲೆಗುಂಪಾಗಿಸಿ ಬಹುತೇಕ ಅಪ್ರಾಮಾಣಿಕರೇ ಮುಖ್ಯ ಆಯಾಕಟ್ಟಿನ ಜಾಗಗಳಲ್ಲಿ ಕುಳಿತಿದ್ದಾರೆ. ಈಗಲಾದರೂ ವರ್ಗಾವಣೆ ದಂಧೆಗೆ ತಡೆ ಹಾಕಿ ಕಾನೂನು–ಸುವ್ಯವಸ್ಥೆ ಕಾಪಾಡಬೇಕು ಎಂದು ಆಗ್ರಹಿಸಿದರು.

ಹಿಂದೂಪರ ಸಂಘಟನೆಗಳ ಒಕ್ಕೂಟದ ಸಹ ಸಂಚಾಲಕರಾದ ಸಂಜಯ್, ರಾಕೇಶ್‌ಭಟ್, ಜೀವನ್, ಚಂದ್ರು, ಕುಮಾರ್, ವಿಕಾಸ್ ಶಾಸ್ತ್ರಿ, ಶಶಿಕಾಂತ್, ತನುಜಾ ಮಹೇಶ್, ಮಹೇಶ್ ಮೂರ್ತಿ, ಲಿಂಗಾಂಬುದಿ ಸಿದ್ದೇಶ್, ಪಂಕಜ್ ಪಾರೇಖ್, ಗಾಲ್ಫ್ ಕುಮಾರ್, ಅಭಿ ಲಾಶ್, ತೇಜಸ್, ಸುರೇಂದ್ರ, ಅನುಜ್ ಸಾರಸ್ವತ್, ಆನಂದ್ ಮೈಲಾರಿ, ಸುರೇಶ್, ಶರ್ಮಣ್ ಪಾರ್ಮಾರ್, ಬಿಜೆಪಿ ಮುಖಂಡ ಪಿ.ವಿ.ಶಿವಾನಂದ ರಾವ್, ಸಿದ್ದೇಶ್ ಮತ್ತಿತರರಿದ್ದರು.

ಆ.7ರಿಂದ ಕೆಆರ್‌ಎಸ್ ಹಿನ್ನೀರಿನಲ್ಲಿ ಸೈಲಿಂಗ್ ಚಾಂಪಿಯನ್‌ಶಿಪ್

ಶ್ರೀರಂಗಪಟ್ಟಣ, ಆ.2– ತಾಲೂಕಿನ ಕೃಷ್ಣರಾಜ ಸಾಗರ (ಕೆಆರ್‌ಎಸ್) ಜಲಾಶಯದಲ್ಲಿ ಆ. 7ರಿಂದ 13ರವರೆಗೆ ರಾಷ್ಟ್ರ ಮಟ್ಟದ ಮಲ್ಟಿ ಕ್ಲಾಸ್ ಯೂತ್ ಸೈಲಿಂಗ್ ಅಂಡ್ ಕೈಟ್ ಬೋರ್ಡ್ ಚಾಂಪಿಯನ್‌ಶಿಪ್ ಆಯೋಜಿಸಲಾಗಿದೆ ಎಂದು ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಡಾ.ನಾರಾಯಣಗೌಡ ಹೇಳಿದರು.

ಕೆ.ಆರ್.ಸಾಗರ ಹಿನ್ನಿರಿನ ಉತ್ತರ ಬೃಂದಾವನ ದಲ್ಲಿರುವ ಎಂಇಜಿ ಕ್ಯಾಂಪ್‌ನಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಂಡ್ಯ ಜಿಲ್ಲಾಡಳಿತದ ಸಹಕಾರದೊಂದಿಗೆ, ಭಾರತೀಯ ಸೇನೆಯ ಮದ್ರಾಸ್ ಇಂಜಿನಿಯರಿಂಗ್ ಗ್ರೂಪ್(MEG) ಮತ್ತು ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ (GETHNAA) ಸಹ ಭಾಗಿತ್ವದಲ್ಲಿ ಈ ಸ್ಪರ್ಧೆ ನಡೆಯಲಿದೆ. ದೇಶದ ಮೂಲೆ ಮೂಲೆಗಳಿಂದ 200ಕ್ಕೂ ಹೆಚ್ಚು ಸೈಲರ್ಸ್ (ನಾವಿಕರು) ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಯುವ ಸೈಲರ್ಸ್‌ಗೆ ಇದೊಂದು ಅದ್ಭುತ ಅವಕಾಶವಾಗಿದ್ದು, ತಮ್ಮ ಪ್ರತಿಭೆಯನ್ನು ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆಗೆ ಉತ್ತಮ ವೇದಿಕೆ ಆಗಿದೆ. ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿಯು ಕ್ಲೈಂಬಿಂಗ್, ಕಯಾಕಿಂಗ್ ಮತ್ತು ಕೆನೋಯಿಂಗ್ ಸೇರಿದಂತೆ ಹಲವು ಸಾಹಸಮಯ ಸ್ಪೋರ್ಟ್ಸ್‌ಗಳನ್ನು ಆಯೋಜಿಸಿದ್ದು, ಸೈಲಿಂಗ್ ಕೂಡ ಒಂದಾಗಿದೆ. ಜೇತನಾ ಮೂಲಕ ಇದುವರೆಗೂ ಸಾವಿರಾರು ಗ್ರಾಮೀಣ ಯುವ ಜನತೆಗೆ ಸಾಹಸ ಕ್ರೀಡೆಗಳ ಪರಿಚಯ ಹಾಗೂ ತರಬೇತಿ ನೀಡಲಾಗಿದೆ. ಈ ಸ್ಪರ್ಧೆ ಆಯೋಜಿಸಿರು



ವುದರಿಂದ ಪ್ರವಾಸೋದ್ಯಮಕ್ಕೆ ಮತ್ತಷ್ಟು ಉತ್ತೇಜನ ಸಿಗಲಿದೆ ಎಂದು ಸಚಿವರು ಮಾಹಿತಿ ನೀಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಮಾತನಾಡಿ, ಮದರಾಸ್ ಇಂಜಿನಿಯರಿಂಗ್ ಗ್ರೂಪ್ ಅಂಡ್ ಸೆಂಟರ್ ಬೆಂಗಳೂರು ಮತ್ತು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಯೋಗದೊಂದಿಗೆ ಆ. 7ರಿಂದ ಹಿನ್ನೀರಿನಲ್ಲಿ 'YAI MULTI CLASS YOUTH SAILING (NATIONAL RANKING EVENT) & KITE BOARD CHAMPIONSHIP-2022' ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಹೇಳಿದರು.

ದೇಶದ ವಿವಿಧ ಮೂಲದಿಂದ ಕ್ರೀಡಾಪಟುಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಎಂಬ ಉದ್ದೇಶದಿಂದ ಕಾರ್ಯಕ್ರಮವನ್ನು ಆಯೋಜಿಸಿದ್ದೇವೆ. ಸರ್ಕಾರದಿಂದ ಸಂಪೂರ್ಣ ಸಹಕಾರ ಇದೆ ಎಂದರು. ಕಾರ್ಯಕ್ರಮ ರಾಷ್ಟ್ರ ಮಟ್ಟದಲ್ಲಿ ಗೌರವವನ್ನು ತರುತ್ತದೆ. ಇದರ ಜೊತೆಗೆ ಭಾಗವಹಿಸಿದಂತಹ ಕ್ರೀಡಾಪಟುಗಳಿಗೆ ಉದ್ಯೋಗ ಸಿಗುವ ಅವಕಾಶವಿದೆ. ವಿಶೇಷವಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ವಿಶ್ವೇಶ್ವರಯ್ಯ ಅವರು ನಿರ್ಮಿಸಿರುವಂತಹ ಕೆಆರ್‌ಎಸ್ ಹಿನ್ನೀರಿನಲ್ಲಿ ನಡೆಯುವ ಕಾರ್ಯಕ್ರಮ ಯಶಸ್ವಿಯಾಗಲಿ ಎಂದರು.

ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, ಕಾರ್ಯಕ್ರಮ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಲಾಗಿದೆ. ಮುಂದಿನ ದಿನದಲ್ಲಿ ಆರ್ಮಿ ಟ್ರೈನಿಂಗ್ ಸೆಂಟರ್ ಮೂಲಕ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸಲು ಇದೊಂದು ಉತ್ತಮವಾದ ಕಾರ್ಯಕ್ರಮವಾಗಿದೆ ಎಂದರು. ಆ. 11ರಂದು ದಿವಂಗತ ಡಾ.ಪುನೀತ್ ರಾಜ್‌ಕುಮಾರ್ ಅವರಿಗೆ ಗೌರವ ಸಮರ್ಪಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಕಾರ್ಯಕ್ರಮವನ್ನು ಶಿವರಾಜ್ ಕುಮಾರ್ ಅವರು ಉದ್ಘಾಟಿಸಲಿದ್ದಾರೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮೇಜರ್ ಗಿರಿಜೇಶ್, ವೈಎಐ ಜಂಟಿ-ಕಾರ್ಯದರ್ಶಿ ಕ್ಯಾಪ್ಟನ್ ಜಿತೆಂದರ್ ದೀಕ್ಷಿತ್, ಯಾಕ್ ಕಮಿಟಿ ಸದಸ್ಯ ಮೇಜರ ಜನರಲ್ ದೇವಯ್ಯ, ಉಪವಿಭಾಗಾಧಿಕಾರಿ ಶಿವನಂದಾ ಮೂರ್ತಿ, ಜನರಲ್ ತಿಮ್ಮಯ ಸಹಾಸ ಅಕಾಡೆಮಿ ನಿರ್ದೇಶಕ ಮಂಜುನಾಥ್, ಪಾಂಡವಪುರ ತಹಸೀಲ್ದಾರ್ ನಯನಾ, ಶ್ರೀರಂಪಗಟ್ಟನ ತಹಸೀಲ್ದಾರ್ ಶ್ವೇತಾ, ಇಓ ಬಿಂದು ಸೇರಿದಂತೆ ಇತರರು ಇದ್ದರು. ಇದೇ ವೇಳೆ ವಾಟರ್ ಬೈಕ್‌ನಲ್ಲಿ ಸಚಿವರು ಹಾಗೂ ಶಾಸಕರು ರೈಡ್ ಮಾಡಿದರು.

ಮಂಡ್ಯದಲ್ಲಿ ಮಳೆಯ ಆರ್ಭಟ; ನೀರು ಪಾಲಾದ ಬೆಳೆ, ಅಪಾರ ನಷ್ಟ



ಮಂಡ್ಯ, ಆ.2– ಮಂಡ್ಯದಲ್ಲಿ ಗುಡುಗು ಸಿಡಿಲು ಸಹಿತ ಭಾರೀ ಮಳೆ ಸುರಿದಿದೆ. ರಾತ್ರಿ ಸುರಿದ ಭಾರೀ ಬಿರುಗಾಳಿ ಸಹಿತ ಮಳೆಗೆ ಜಿಲ್ಲೆಯ ಹಲವೆಡೆ ಸಾಕಷ್ಟು ಹಾನಿಯಾಗಿದೆ.

ಜಿಲ್ಲೆಯ ಹಲವೆಡೆ ಅನಾಹುತ ಸಂಭವಿಸಿದೆ. ತೆಂಗು, ಅಡಿಕೆ ಇನ್ನಿತರ ಮರಗಳು ನೆಲಕ್ಕುರುಳಿವೆ. ಬಾಳೆ, ಭತ್ತ, ಕಬ್ಬು ಸೇರಿದಂತೆ ರೈತರು ಬೆಳೆದಿದ್ದ ಹಲವು ಬೆಳೆಗಳು ನೀರು ಪಾಲಾಗಿದ್ದು, ರೈತರು ಕಂಗಾಲಾಗಿದ್ದಾರೆ.

ಜಮೀನು ಜಲಾವೃತ, ರಸ್ತೆ ಬಂದ್; ನಗರದ ಹೊರವಲಯದಲ್ಲಿರುವ ನೂರಾರು ಎಕರೆ ಕೃಷಿ ಭೂಮಿ ಜಲಾವೃತಗೊಂಡಿದೆ. ಹಳ್ಳಗಳು ತುಂಬಿ ಹರಿಯುತ್ತಿರುವ ಕಾರಣ ವಿವಿಧೆಡೆ ರಸ್ತೆ ಸಂಪರ್ಕ ಬಂದ್ ಆಗಿದೆ.

ಮಂಡ್ಯ– ಹೊಳಲು ರಸ್ತೆಯ ಸಂಪರ್ಕ ಬಂದ್ ಆಗಿದ್ದು, ಮೇಲುಕೋಟೆ ಕಡೆಗೆ ತೆರಳುವ ವಾಹನಗಳಿಗೆ ಮಾರ್ಗ ಬದಲಾವಣೆ ಮಾಡಲಾಗಿದೆ. ಈ ಮಾರ್ಗದಲ್ಲಿ 3 ಸೇತುವೆಗಳ ಮೇಲೆ ರಭಸವಾಗಿ ನೀರು ಹರಿಯುತ್ತಿದ್ದು ಅಪಾಯ ಸನ್ನಿವೇಶ ಸೃಷ್ಟಿಯಾಗಿದೆ. ಸ್ಥಳೀಯರು ಬಲೆ ಹಾಕಿ ಮೀನು ಹಿಡಿಯುತ್ತಿದ್ದಾರೆ. ಮುಂಜಾಗ್ರತಾ ಕ್ರಮವಾಗಿ ಸೇತುವೆ ಮೇಲೆ ಪೊಲೀಸರು ಬ್ಯಾರಿಕೇಡ್ ಹಾಕಿದ್ದಾರೆ. ರಾಷ್ಟ್ರೀಯ ಹೆದ್ದಾರಿ ಮೇಲ್ಸೇತುವೆ ಕೆಳಗೆ ಮಂಡಿಯುದ್ದ ನೀರು ಹರಿಯುತ್ತಿದೆ.

ಬೆಂಗಳೂರು– ಮೈಸೂರು ರಾಷ್ಟ್ರೀಯ ಹೆದ್ದಾರಿ ದಶಪಥ ಕಾಮಗಾರಿ ನಡೆಯುತ್ತಿರುವ ಹಿನ್ನೆಲೆಯಲ್ಲಿ ಹಲವೆಡೆ ರಸ್ತೆ, ಕಾಲುವೆಗಳು, ಪೈಪ್‌ಲೈನ್‌ಗಳು ಒಡೆದು ಹೋಗಿವೆ. ಕಾಮಗಾರಿಗೆ ಬೇಕಾದ ವಸ್ತುಗಳ ಸಾಗಣೆಗೆ ಭಾರಿ ವಾಹನಗಳು ಓಡಾಡುವ ಕಾರಣ ಪೈಪ್‌ಲೈನ್‌ಗಳು ಹಾಳಾಗಿವೆ. ಹೀಗಾಗಿ ನೀರು ಸಾರಾಗವಾಗಿ ಹರಿದು ಹೋಗಲು ಸಾಧ್ಯವಾಗದೇ ರಸ್ತೆ ಜಮೀನುಗಳಿಗೆ ನುಗ್ಗುತ್ತಿದೆ

ಮಳೆ ಹಾನಿ ಪ್ರದೇಶಗಳಿಗೆ ಸಚಿವ ಕೆ.ಗೋಪಾಲಯ್ಯ ಭೇಟಿ, ಪರಿಹಾರ ವಿತರಣೆ



ಮಂಡ್ಯ, ಆ.2– ಕಳೆದ ರಾತ್ರಿ ಸುರಿದ ಭಾರಿ ಮಳೆಯಿಂದ ಹಾನಿಗೊಳಗಾದ ಮಂಡ್ಯದ ವಿವಿಧ ಪ್ರದೇಶಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಗೋಪಾಲಯ್ಯ ಮಂಗಳವಾರ ಭೇಟಿ ನೀಡಿ ಪರಿಶೀಲಿಸಿದರು.

ಸಾತನೂರಿನಲ್ಲಿ ಕೆರೆ ಕೋಡಿ ಒಡೆದು ರಸ್ತೆಗಳು ಕೊಚ್ಚಿ ಹೋಗಿದ್ದು, ಮನೆಗಳಿಗೆ ನೀರು ನುಗ್ಗಿ ಸಾಕಷ್ಟು ಹಾನಿಯಾಗಿತ್ತು. ಸ್ಥಳಕ್ಕೆ ಸಚಿವರು ಭೇಟಿ ನೀಡಿ, ಕೂಡಲೇ ಪರಿಹಾರ ನೀಡಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು. ಬಳಿಕ, ಉಮ್ಮಡಹಳ್ಳಿಯಲ್ಲಿ ಮನೆ ಕುಸಿದು 40ಕ್ಕೂ ಹೆಚ್ಚು ಕುರಿಗಳು ಸಾವನ್ನಪ್ಪಿರುವುದನ್ನು ಪರಿಶೀಲಿಸಿ, ನಷ್ಟಕ್ಕೊಳಗಾದವರಿಗೆ ಸ್ಥಳದಲ್ಲೇ 90ಸಾವಿರ ರೂ. ಪರಿಹಾರ ಚೆಕ್ ವಿತರಿಸಿದರು. ಶೀಘ್ರದಲ್ಲೇ ಇನ್ನಷ್ಟು ಪರಿಹಾರ ಹಾಗೂ ಮನೆ ನಿರ್ಮಿಸಿ ಕೊಡುವ ಭರವಸೆ ನೀಡಿದರು. ಈ ಸಂದರ್ಭದಲ್ಲಿ ರೇಷ್ಮೆ ಮತ್ತು ಯುವಜನ ಸಬಲೀಕರಣ ಖಾತೆ ಸಚಿವ ಡಾ.ಕೆ.ಸಿ.ನಾರಾಯಣಗೌಡ, ಶಾಸಕ ಶ್ರೀನಿವಾಸ್, ಜಿಲ್ಲಾಧಿಕಾರಿ ಎಸ್.ಅಶ್ವತಿ, ಉಪವಿಭಾಗಾಧಿಕಾರಿ ಐಶ್ವರ್ಯ ಸೇರಿದಂತೆ ಹಲವು ಅಧಿಕಾರಿಗಳು ಉಪಸ್ಥಿತರಿದ್ದರು.

ಮನೆ ಗೋಡೆ ಕುಸಿದು ಕೊಟ್ಟಿಗೆಯಲ್ಲಿದ್ದ 40 ಕುರಿ ಸಾವು



ಮಂಡ್ಯ ತಾಲೂಕಿನ ಉಮ್ಮಡಹಳ್ಳಿ ಗ್ರಾಮದ ಮನೆ ಕುಸಿದು ಕೊಟ್ಟಿಗೆಯಲ್ಲಿದ್ದ 40 ಕುರಿಗಳು ಸಾವನ್ನಪ್ಪಿದ್ದು, ಪವಾಡ ಸದೃಶ್ಯ ರೀತಿಯಲ್ಲಿ ಮನೆಯವರು ಪಾರಾಗಿದ್ದಾರೆ. ಗ್ರಾಮದ ಯಶೋಧಮ್ಮ ಎಂಬುವವರಿಗೆ ಸೇರಿದ ಮನೆ ಕುಸಿದು ದುರ್ಘಟನೆ ಸಂಭವಿಸಿದೆ. ಮನೆಯ ಕೊಟ್ಟಿಗೆಯಲ್ಲಿ ಕೂಡಿ ಹಾಕಿದ್ದ ಕುರಿಗಳು ಮಣ್ಣಿನಡಿಯಲ್ಲಿ ಸಿಲುಕಿ ಮೃತಪಟ್ಟಿವೆ. ಪರಿಹಾರಕ್ಕಾಗಿ ತಾಲೂಕು ಆಡಳಿತಕ್ಕೆ ಕುಟುಂಬಸ್ಥರು ಮನವಿ ಮಾಡಿದ್ದಾರೆ.

ಶಿಂಷಾ ನದಿಯಲ್ಲಿ ಕೊಚ್ಚಿ ಹೋದ ಆಡುಗಳು: ಮದ್ದೂರು ಪಟ್ಟಣದ ಹೊಳೆ ಆಂಜನೇಯ ದೇವಾಲಯಕ್ಕೆ ಹೋಗುವ ರಸ್ತೆ ಸಮೀಪದ ಶಿಂಷಾನದಿ ಅಂಚಿನಲ್ಲಿ ಗುಡಿಸಲಿನಲ್ಲಿದ್ದ ಗೋವಿಂದಪ್ಪ ಎಂಬುವರಿಗೆ ಸೇರಿದ್ದ ಅಂದಾಜು 15 ಆಡುಗಳು ಹಾಗೂ 1 ಹಸು ನದಿಯಲ್ಲಿ ಕೊಚ್ಚಿಕೊಂಡು ಹೋಗಿದೆ. 3 ಹಸುಗಳಿದ್ದು ಅದರಲ್ಲಿ 2 ಹಸುಗಳನ್ನು ನದಿಯಲ್ಲಿ ಮುಳುಗಿ ಹೋಗುತ್ತಿದ್ದ ವೇಳೆ 2 ಹಸುಗಳನ್ನು ನದಿಯಿಂದ ಸುರಕ್ಷಿತವಾಗಿ ಹೊರ ತಂದಿದ್ದಾರೆ. ಒಂದು ಹಸು ಕೊಚ್ಚಿ ಹೋಗಿದೆ.

ನಿರಂತರ ಮಳೆ; ಕೆಆರ್‌ಎಸ್ ಒಳಹರಿವು ಹೆಚ್ಚಳ



ಶ್ರೀರಂಗಪಟ್ಟಣ, ಆ.2– ಮಂಡ್ಯ, ಕೊಡಗು ಸೇರಿದಂತೆ ಕಾವೇರಿ ಜಲಾನಯನ ಪ್ರದೇಶದ ವ್ಯಾಪ್ತಿಯಲ್ಲಿ ಕಳೆದ ಮೂರ್‍ನಾಲ್ಕು ದಿನಗಳಿಂದ ಹೆಚ್ಚಿನ ಮಳೆಯಾಗುತ್ತಿರುವ ಪರಿಣಾಮ ಜಲಾಶಯದ ಒಳಹರಿವಿನ ಪ್ರಮಾಣ ಹೆಚ್ಚಳವಾಗಿದೆ. ಮಂಗಳವಾರ ಜಲಾಶಯಕ್ಕೆ 30,580 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ಜಲಾಶಯ 124.80 ಅಡಿಗಳಷ್ಟು ಗರಿಷ್ಠ ಮಟ್ಟ ಭರ್ತಿಯಾಗಿದೆ. ಹಾಗಾಗಿ, ಬಂದಷ್ಟೇ ನೀರನ್ನು ಹೊರಬಿಡಲಾಗುತ್ತಿದೆ.

ಮಳೆ ಅವಾಂತರಕ್ಕೆ ಮದ್ದೂರು ತಾಲೂಕಿನಲ್ಲೂ ಅಪಾರ ನಷ್ಟ



ಮದ್ದೂರು, ಆ.2– ಪಟ್ಟಣದ ಸೇರಿದಂತೆ ತಾಲೂಕಿನಾದ್ಯಂತ ಕಳೆದೆರಡು ದಿನಗಳಿಂದ ಸುರಿದ ಭಾರಿ ಮಳೆಗೆ ಹಲವಾರು ರೀತಿಯಲ್ಲಿ ಅವಾಂತರ ಸೃಷ್ಟಿಸಿ, ಅಪಾರ ಪ್ರಮಾಣದಲ್ಲಿ ನಷ್ಟ ಉಂಟಾಗಿದೆ.

ಪ್ರವಾಹದಲ್ಲಿ ಸಿಲುಕಿದ ಸೆಕ್ಯೂರಿಟಿ ಗಾರ್ಡ್ ರಕ್ಷಣೆ: ತಾಲೂಕಿನ ಕೊಪ್ಪ ಹೋಬಳಿ ಪ್ರವಾಹದಲ್ಲಿ ಸಿಲುಕಿದ್ದ ಸೆಕ್ಯೂರಿಟಿ ಗಾರ್ಡ್ ರಕ್ಷಣೆ ಮಾಡಲಾಗಿದೆ. ಅಣೆದೊಡ್ಡಿ ಗ್ರಾಮದ ಶಿಂಷಾ ನದಿ ಪ್ರವಾಹದಲ್ಲಿ ಸಿಲುಕಿಕೊಂಡಿದ್ದ ಎನ್‌ಎಸ್‌ಎಲ್ ಕಾರ್ಖಾನೆಯ ಜಾಕ್ ವೆಲ್‌ನಲ್ಲಿ ಸೆಕ್ಯೂರಿಟಿ ಗಾರ್ಡ್ ದಿನೇಶ್ ಎಂಬುವವರನ್ನು ರಕ್ಷಣೆ ಮಾಡಲಾಗಿದೆ.

ಅಸ್ಸಾಂ ಮೂಲದ ದಿನೇಶ್, ದಿಢೀರ್ ಪ್ರವಾಹಕ್ಕೆ ಸೋಮವಾರ ರಾತ್ರಿ ಸಿಲುಕಿ ಪರದಾಡುತ್ತಿದ್ದರು. ಇಂದು ಬೆಳಗ್ಗೆ ಗ್ರಾಮಸ್ಥರು ಮತ್ತು ಕಾರ್ಖಾನೆಯವರಿಗೆ ವಿಚಾರ ತಿಳಿದು ತಕ್ಷಣ ರಕ್ಷಿಸುವ ಕೆಲಸಕ್ಕೆ ಮುಂದಾಗಿದ್ದಾರೆ. ಮತ್ತೊಬ್ಬ ಯುವಕ ಪ್ರವಾಹದ ನಡುವೆ ವಾಪಸ್ ಬರಲಾಗದೆ ಅಲ್ಲೇ ಸಿಲುಕಿಕೊಂಡು ಭಯಭೀತನಾಗಿದ್ದ. ನಂತರ ಗ್ರಾಮಸ್ಥರು ಮತ್ತು ಕಾರ್ಖಾನೆಯ ಸಿಬ್ಬಂದಿ ದೋಣಿಯ ಸಹಾಯದಿಂದ ಆತನನ್ನೂ ರಕ್ಷಿಸಲಾಗಿದೆ.

ಕೀಳಘಟ್ಟ: ತಾಲೂಕಿನ ಕೊಪ್ಪ ಹೋಬಳಿಯ ಕೀಳಘಟ್ಟ ಗ್ರಾಮದಲ್ಲಿ ಶಿಂಷಾ ನದಿಗೆ ನಿರ್ಮಿಸಿರುವ ಸೇತುವೆ ಮೇಲೆ ಅಪಾಯದ ಮಟ್ಟ ಮೀರಿ ನೀರು ಹರಿದ ಪರಿಣಾಮ ಸಂಚಾರಕ್ಕೆ ತೊಂದರೆ ಉಂಟಾಗಿತ್ತು

ಕುದರಗುಂಡಿ: ತಾಲೂಕಿನ ಕುದರಗುಂಡಿಯಲ್ಲಿ ಕೆರೆ ಕೋಡಿ ಬಿದ್ದು ಅಂದಾಜು 80 ಎಕರೆ ಪ್ರದೇಶದಲ್ಲಿ ಬೆಳೆದಿದ್ದ ಭತ್ತದ ಪೋಟ್ಲು ಹಾಗೂ ಕಬ್ಬಿನ ಫಸಲು ನಾಶವಾಗಿದೆ.

ಮೈದುಂಬಿ ಹರಿದ ಶಿಂಷಾ ನದಿ: ಕಳೆದೆರಡು ದಿನಗಳಿಂದ ಉತ್ತಮ ಮಳೆಯಾದ ಹಿನ್ನೆಲೆಯಲ್ಲಿ ಶಿಂಷಾ ನದಿ ಮೈದುಂಬಿ ಹರಿದಿದೆ. ಕೆಲವರ ಪ್ರಕಾರ ಸುಮಾರು 50 ವರ್ಷಗಳಿಂದ ಶಿಂಷಾನದಿಯಲ್ಲಿ ಇಷ್ಟು ಪ್ರಮಾಣದ ನೀರನ್ನು ನಾವು ನೋಡೇ ಇಲ್ಲ ಎನ್ನುತ್ತಾರೆ ಹಿರಿಯರು.

ಬಿದರಕೋಟೆ: ತಾಲೂಕಿನ ಬಿದರ ಕೋಟೆಯಲ್ಲಿ ರಸ್ತೆಯಲ್ಲೇ ಕೆರೆಯ ನೀರು ಹರಿದ ಪರಿಣಾಮ ಸಂಚಾರಕ್ಕೆ ತೊಂದರೆಯಾಗಿತ್ತು.

ಬೈಕ್‌ಗೆ ಕ್ಯಾಂಟರ್ ಡಿಕ್ಕಿ: ಮೂವರು ಸಾವು

ಹೆಚ್.ಡಿ.ಕೋಟೆ, ಆ.2– ಬೈಕ್‌ಗೆ ಕ್ಯಾಂಟರ್ ಡಿಕ್ಕಿ ಹೊಡೆದ ಪರಿಣಾಮ ಮೂವರು ಸಾವಿಗೀಡಾಗಿರುವ ದುರಂತ ತಾಲೂಕಿನ ಭೀಮನಹಳ್ಳಿ ಗ್ರಾಮದ ಹೆಬ್ಬಾಳ ತಿರುವಿನಲ್ಲಿ ಮಂಗಳವಾರ ಸಂಜೆ ನಡೆದಿದೆ.

ತಾಲೂಕಿನ ಚಿಕ್ಕಕಾಳೇಗೌಡನಪುರ ಗ್ರಾಮದ ನಿವಾಸಿಗಳಾದ ಪ್ರಭು(40), ಸಣ್ಣಸ್ವಾಮಿ(37) ಹಾಗೂ ಸಿದ್ದರಾಜು(40) ಸಾವನ್ನಪ್ಪಿದವರು. ಈ ಮೂವರು ಕಾರ್ಯ ನಿಮಿತ್ತ ಹೀರೋ ಹೋಂಡಾ ಸ್ಪ್ಲೆಂಡರ್ ಬೈಕ್(ಕೆಎ.45, ಡಬ್ಲ್ಯೂ.4799)ನಲ್ಲಿ ಹುಣಸೂರು ತಾಲೂಕಿನ ಗುರುಪುರ ಗ್ರಾಮಕ್ಕೆ ಹೋಗಿ, ಸ್ವಗ್ರಾಮಕ್ಕೆ ವಾಪಸ್ಸಾಗುವ ವೇಳೆ ಹೆಚ್.ಡಿ.ಕೋಟೆಯಿಂದ ಹುಣಸೂರು ಕಡೆಗೆ ಚೆಂಡು ಹೂ ತುಂಬಿಕೊಂಡು ಹೋಗುತ್ತಿದ್ದ ಕ್ಯಾಂಟರ್ (ಕೆಎ.17, ಎ.4133) ಭೀಮನಹಳ್ಳಿ ಗ್ರಾಮದ ಹೆಬ್ಬಾಳ ತಿರುವಿನಲ್ಲಿ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರವಾಗಿ ಗಾಯಗೊಂಡ ಸಣ್ಣಸ್ವಾಮಿ ಸ್ಥಳದಲ್ಲೇ ಸಾವನ್ನಪ್ಪಿದರೆ, ಪ್ರಭು ಹಾಗೂ ಸಿದ್ದರಾಜು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಸಾವನ್ನಪ್ಪಿದ್ದಾರೆ. ಈ ಸಂಬಂಧ ಹೆಚ್.ಡಿ.ಕೋಟೆ ಪಟ್ಟಣ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಶವಗಳನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಶವಾಗಾರಕ್ಕೆ ರವಾನಿಸಿದ್ದಾರೆ. ಸ್ಥಳಕ್ಕೆ ಎಸ್‌ಐ ಸುರೇಶ್, ರಾಮು, ಸಿಬ್ಬಂದಿಗಳಾದ ಮಹದೇವಸ್ವಾಮಿ, ಯೋಗೇಶ್ ಇನ್ನಿತರರು ಭೇಟಿ ನೀಡಿ ಪರಿಶೀಲಿಸಿ, ಎರಡೂ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ.

ಮನೆಗೋಡೆ ಕುಸಿದು ವೃದ್ಧೆ ಸಾವು

ಹುಣಸೂರು, ಆ.2– ಕಳೆದ 2 ದಿನಗಳಿಂದ ಸುರಿಯುತ್ತಿರುವ ಗುಡುಗು, ಬಿರುಗಾಳಿ ಸಹಿತ ಮಳೆಗೆ ಮನೆ ಗೋಡೆ ಕುಸಿದು ಬಿದ್ದು ವೃದ್ಧೆಯೊಬ್ಬರು ಸಾವನ್ನಪ್ಪಿರುವ ಘಟನೆ ತಾಲೂಕಿನ ಕೆಂಚನಕೆರೆ ಹೊಸಕೋಟೆಯಲ್ಲಿ ಸೋಮವಾರ ಮಧ್ಯರಾತ್ರಿ ನಡೆದಿದೆ. ತಾಲೂಕಿನ ಕಸಬಾ ಹೋಬಳಿ ಕೆಂಚನಕೆರೆ ಹೊಸಕೋಟೆ ಗ್ರಾಮದ ಲೇ.ಗುರುಮೂರ್ತಿ ಅವರ ಪತ್ನಿ ಶಾಂತಮ್ಮ(65) ಮೃತಪಟ್ಟವರು. ರಾತ್ರಿ ಇಡೀ ಬಿದ್ದ ಮಳೆಗೆ ಮನೆಗೋಡೆ ಶಾಂತಮ್ಮ ಅವರ ಮೇಲೆ ಬಿದ್ದಿದೆ. ಪರಿಣಾಮ ತೀವ್ರ ಗಾಯಗೊಂಡ ಅವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ವಿಷಯ ತಿಳಿಯುತ್ತಿದ್ದಂತೆ ಶಾಸಕ ಹೆಚ್.ಪಿ.ಮಂಜುನಾಥ್, ತಹಸೀಲ್ದಾರ್ ಡಾ.ಅಶೋಕ್, ಆರ್.ನಂದೀಶ್, ಶಿವಕುಮಾರ್ ಮತ್ತಿತರ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು.


ಹುಣಸೂರು ತಾಲೂಕು ಭೂ ನ್ಯಾಯ ಮಂಡಳಿಗೆ ನೇಮಕ



ಕೆ.ಗಣಪತಿ ಚಂದ್ರು ಮುಚ್ಚಲುವಯ್ಯ

ಹುಣಸೂರು, ಆ.2– ಕರ್ನಾಟಕ ಭೂ ಸುಧಾರಣಾ ಕಾಯಿದೆ ಅಡಿ ಹುಣಸೂರು ತಾಲೂಕು ಭೂ ನ್ಯಾಯ ಮಂಡಳಿಗೆ ಸರ್ಕಾರೇತರ ನೂತನ ನಾಮ ನಿರ್ದೇಶಿತ ಸದಸ್ಯರನ್ನು ನೇಮಕ ಮಾಡಿ ಕಂದಾಯ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಕೆ.ಜಗದೀಶ್ ಆದೇಶ ಹೊರಡಿಸಿದ್ದಾರೆ.

ಸಾಮಾನ್ಯ ವರ್ಗಕ್ಕೆ ತಾಲೂಕಿನ ಕಚ್ಚುವಿನಹಳ್ಳಿ ಗ್ರಾಮದ ಕೆ.ಗಣಪತಿ, ಬನ್ನಿಕುಪ್ಪೆ ಗ್ರಾಮದ ಚಂದ್ರು ಹಾಗೂ ಪರಿಶಿಷ್ಟ ಜಾತಿಯಿಂದ ಹಗರನಹಳ್ಳಿ ಗ್ರಾಮದ ಮುಚ್ಚಲುವಯ್ಯ ಅವರನ್ನು ಸರ್ಕಾರೇತರ ನೂತನ ನಾಮ ನಿರ್ದೇಶನ ಸದಸ್ಯರನ್ನಾಗಿ ನೇಮಕ ಮಾಡಲಾಗಿದ್ದು, ಹುಣಸೂರು ತಾಲೂಕು ಭೂ ನ್ಯಾಯ ಮಂಡಳಿ ಅಧ್ಯಕ್ಷರಾಗಿ ಹುಣಸೂರು ಉಪವಿಭಾಗದ ಸಹಾಯಕ ಆಯುಕ್ತರು, ಸದಸ್ಯ ಕಾರ್ಯದರ್ಶಿಯಾಗಿ ತಹಸೀಲ್ದಾರ್ ಖಾಯಂ ಸದಸ್ಯರಾಗಿರುತ್ತಾರೆ.



ಭಾನುವಾರ 61ನೇ ವರ್ಷದ ಹುಟ್ಟುಹಬ್ಬ ಆಚರಿಸಿಕೊಂಡ ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆದ ಮಾಜಿ ಸಂಸದ ಆರ್.ಧ್ರುವನಾರಾಯಣ್ ಅವರನ್ನು ಮೈಸೂರಿನ ಅವರ ನಿವಾಸದಲ್ಲಿ ಕಾಂಗ್ರೆಸ್ ಮುಖಂಡರಾದ ಸತೀಶ್‌ಗೌಡ, ಸೋಮೇಶ್, ನಯಾಜ್, ರಾಜು, ಪ್ರದೀಪ್, ಗಣೇಶ್, ಜಯರಾಮ ಸೇರಿದಂತೆ ಇನ್ನಿತರರು ಅಭಿನಂದಿಸಿ, ಹುಟ್ಟುಹಬ್ಬದ ಶುಭ ಕೋರಿದರು.

ಉನ್ನತ ಸ್ಥಾನ ಅಲಂಕರಿಸಲು ಕ್ರೀಡಾ ಸಾಧನೆ ಸಹಕಾರಿ

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಎಚ್‌ವಿ.ಉದಯ್ ಕುಮಾರ್



ತಿ.ನರಸೀಪುರ, ಆ.2– ಉನ್ನತ ಸ್ಥಾನ ಅಲಂಕರಿಸಲು ಕ್ರೀಡಾ ಸಾಧನೆಗಳು ಸಹಕಾರಿಯಾಗಲಿವೆ ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ. ಎಚ್‌ವಿ.ಉದಯ್ ಕುಮಾರ್ ತಿಳಿಸಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದ ವತಿಯಿಂದ ಮೈಸೂರು ವಿಶ್ವವಿದ್ಯಾನಿಲಯ ಚಾಮರಾಜ ವಲಯ ಅಂತರ ಕಾಲೇಜು ಪುರುಷರ ಖೋ ಖೋ ಮತ್ತು ಥ್ರೋಬಾಲ್ ಪಂದ್ಯಾವಳಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕ್ರೀಡೆ ಮಾನಸಿಕ ಹಾಗೂ ದೈಹಿಕ ಸಾಮರ್ಥ್ಯ ಹೆಚ್ಚಿಸುವ ಜೊತೆಗೆ ಉತ್ತಮ ಆರೋಗ್ಯಕ್ಕೂ ಸಹಕಾರಿ. ಉತ್ತಮ ಆರೋಗ್ಯ ವಿದ್ಯಾರ್ಜನೆಗೆ ಅನುಕೂಲ. ಈ ಹಿನ್ನೆಲೆಯಲ್ಲಿ ಕ್ರೀಡೆಗಳಲ್ಲಿ ಹೆಚ್ಚೆಚ್ಚು ಭಾಗವಹಿಸಿ ಉತ್ತಮ ಕ್ರೀಡಾಪಟುಗಳಾಗಿ ಹೊರ ಹೊಮ್ಮಿದರೆ ಉದ್ಯೋಗದಲ್ಲಿ ತಮಗೆ ಮೊದಲ ಆದ್ಯತೆ ದೊರೆಯುವ ಮೂಲಕ ಉನ್ನತ ಹುದ್ದೆ ಅಲಂಕರಿಸಲು ಸಾಧ್ಯವಾಗಲಿದೆ ಎಂದರು.

ಗರ್ಗೇಶ್ವರಿ ನಿಶಾಂತ್ ಕ್ಲಿನಿಕ್‌ನ ಡಾ.ವಿ. ಪ್ರದೀಪ್ ಮಾತನಾಡಿ, ವಿದ್ಯಾರ್ಥಿಗಳು, ಬದುಕಿನಲ್ಲಿ ಶಿಸ್ತು, ಸಮರ್ಪಣಾ ಮನೋಭಾವ ಹಾಗೂ ಉತ್ತಮ ನಿರ್ಣಯ ಕೈಗೊಳ್ಳುವ ಶಕ್ತಿಯನ್ನು ಜೀವನದಲ್ಲಿ ಬೆಳೆಸಿಕೊಂಡಾಗ ಮಾತ್ರ ಯಶಸ್ಸು ಕಾಣಲು ಸಾಧ್ಯ ಎಂದರು.

ಕ್ರೀಡೆಗೆ ಹೆಚ್ಚು ಒತ್ತು ನೀಡಿದರೆ ದೈಹಿಕ ಹಾಗೂ ಮಾನಸಿಕವಾಗಿ ಸದೃಢವಾಗಬಹುದು. ಸಕಾರಾತ್ಮಕ ಚಿಂತನೆಗಳು ಕ್ರೀಡೆಯಿಂದ ದೊರೆಯುತ್ತದೆ. ತಾಲೂಕನ್ನು ಪ್ರತಿನಿಧಿಸುವ ಇಬ್ಬರು ಶಾಸಕರು ಕ್ರೀಡಾಪಟುಗಳಿಗೆ ಅಗತ್ಯವಿರುವ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಟ್ಟರೆ ಕ್ರೀಡಾಪಟುಗಳು ಮತ್ತಷ್ಟು ಸಾಧನೆಗೈಯಲು ಸಾಧ್ಯವಾಗುತ್ತದೆ. ಕ್ರೀಡಾಪಟುಗಳ ಬಹುದಿನಗಳ ಬೇಡಿಕೆಯಾಗಿರುವ ಕ್ರೀಡಾಂಗಣವನ್ನು ಪಟ್ಟಣದಲ್ಲಿ ಶೀಘ್ರವಾಗಿ ನಿರ್ಮಿಸಿಕೊಡುವಂತೆ ಶಾಸಕರಲ್ಲಿ ಮನವಿ ಮಾಡಿದರು.

ಇದೇ ವೇಳೆ ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕ ವಿಜೇಂದ್ರರಾವ್ ಅವರನ್ನು ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಕಾಲೇಜಿನ ಸಿಡಿಸಿ ಸದಸ್ಯರಾದ ಎನ್. ಶ್ರೀಕಂಠಪ್ರಸಾದ್, ಪ್ರವೀಣ್, ಅಶ್ವಿನ್ ಕುಮಾರ್, ಸೇವಾಶ್ರಯ ಫೌಂಡೇಶನ್ ಅಧ್ಯಕ್ಷ ಆರ್.ಮಣಿಕಂಠರಾಜ್‌ಗೌಡ, ಶಿವಶಂಕರ್ ಸ್ಪೋರ್ಟ್ಸ್ ಅಕಾಡೆಮಿ ವ್ಯವಸ್ಥಾಪಕ ನವೀನ್ ಕುಮಾರ್, ಕಾಲೇಜಿನ ಅಧ್ಯಾಪಕ ಡಾ.ಡಿ.ಹರೀಶ್, ಡಾ.ಪುಟ್ಟಸ್ವಾಮಿ, ಡಾ. ಸಂಪತ್ ಕುಮಾರ್ , ಡಾ.ಪ್ರಮೋದ್, ಗಂಗಾಧರ್ ದೈಹಿಕ ಶಿಕ್ಷಕರಾದ ಕುಮಾರಸ್ವಾಮಿ, ಜಯಪ್ಪ, ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರು, ಶಿಕ್ಷಕರು ಹಾಜರಿದ್ದರು.

ಜನರ ಆಶಯದಂತೆ ಕೆಲಸ ನಿರ್ವಹಣೆ: ಶಾಸಕ ಕೆ.ಮಹದೇವ್



ಪಿರಿಯಾಪಟ್ಟಣ, ಆ.2– ತಾಲೂಕಿನ ಜನತೆಯ ಆಶಯಕ್ಕೆ ತಕ್ಕಂತೆ ನಾನು ಕೆಲಸ ಮಾಡುತ್ತಿದ್ದೇನೆ ಎಂದು ಶಾಸಕ ಕೆ.ಮಹದೇವ್ ನುಡಿದರು.

ತಾಲೂಕಿನ ಸಂಗರಶೆಟ್ಟಿಹಳ್ಳಿಯಲ್ಲಿ 4 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ನಾನು ಶಾಸಕನಾಗಿ 4 ವರ್ಷ ಕಳೆದಿದೆ. ಎಂದಿಗೂ ನಾನು ದ್ವೇಷದ ರಾಜಕಾರಣ ಮಾಡಿಲ್ಲ. ಜಾತಿಭೇದ ಮರೆತು ತಾಲೂಕಿನ ಅಭಿವೃದ್ಧಿಗೆ ಶ್ರಮಿಸಿದ್ದೇನೆ ಎಂದರು.

ಗ್ರಾಮದ ಜನತೆ ಕಳೆದ 3 ಚುನಾವಣೆಯಲ್ಲಿ ನನಗೆ ಅತ್ಯಧಿಕ ಮತಗಳನ್ನು ನೀಡಿದ್ದಾರೆ ನನ್ನ ಜೀವನಪೂರ್ತಿ ಈ ಹಳ್ಳಿ ಋಣ ತೀರಿಸಲು ಶ್ರಮಿಸುತ್ತೇನೆ ಹಾಗೂ ಹೆಚ್ಚಿನ ಅನುದಾನ ನೀಡುವುದಾಗಿ ಭರವಸೆ ನೀಡಿದರು.

ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯ ಶೆಟ್ಟಿ ಮಾತನಾಡಿ, ಮುಂಬರುವ ದಿನಗಳಲ್ಲಿ ವಿಧಾನಸಭೆ ಚುನಾವಣೆ ನಡೆಯಲಿದ್ದು, ಕಾಂಗ್ರೆಸ್ ಪಕ್ಷ ರಾಜ್ಯ ಹಾಗೂ ಕೇಂದ್ರದಲ್ಲಿ ತನ್ನ ಅಸ್ತಿತ್ವ ಕಳೆದುಕೊಂಡಿದೆ. ರಾಜ್ಯ ಹಾಗೂ ಕೇಂದ್ರದಲ್ಲಿ ಬಿಜೆಪಿಯ ಭ್ರಷ್ಟಾಚಾರ ಮಿತಿ ಮೀರಿದ್ದು, ಪ್ರಾದೇಶಿಕ ಪಕ್ಷವಾದ ಜೆಡಿಎಸ್‌ಗೆ ಮತ ನೀಡುವ ಮೂಲಕ ಮತ್ತೊಮ್ಮೆ ರಾಜ್ಯದಲ್ಲಿ ಕುಮಾರಸ್ವಾಮಿ ನೇತೃತ್ವದ ಸರ್ಕಾರ ತರಲು ಶ್ರಮಿಸೋಣ ಎಂದು ಮನವಿ ಮಾಡಿದರು.

ಸಮಾರಂಭದಲ್ಲಿ ತಹಸೀಲ್ದಾರ್ ಚಂದ್ರಮೌಳಿ, ಇಓ ಕೃಷ್ಣಕುಮಾರ್, ಎಇಇ ಜಯಂತ್, ಮುಖಂಡರಾದ ಪ್ರೀತಿ ಅರಸ್, ದೇವರಾಜ್, ಮಲ್ಲಿಕಾರ್ಜುನ್ ಸೇರಿದಂತೆ ಗ್ರಾಮದ ಪ್ರಮುಖರಿದ್ದರು.

ಕೃಷ್ಣರಾಜ ವಲಯ ಮಟ್ಟದ ಕಬಡ್ಡಿ ಪಂದ್ಯಾವಳಿ
ಹುಣಸೂರು ಮಹಿಳಾ ಕಾಲೇಜು ಪ್ರಥಮ, ಬನ್ನೂರು ದ್ವಿತೀಯ



ಹುಣಸೂರು, ಆ.2– ಕೃಷ್ಣರಾಜ ವಲಯ ಮಟ್ಟದ ಪದವಿ ಕಾಲೇಜುಗಳ ಮಹಿಳಾ ಕಬಡ್ಡಿ ಪಂದ್ಯದಲ್ಲಿ ಹುಣಸೂರಿನ ಮಹಿಳಾ ಕಾಲೇಜು ತಂಡ ಪ್ರಥಮ, ಬನ್ನೂರು ಸರಕಾರಿ ಪ್ರಥಮ ದರ್ಜೆ ಕಾಲೇಜಿನ ತಂಡ ದ್ವಿತೀಯ ಸ್ಥಾನಗಳಿಸಿವೆ.

ನಗರದ ಮಹಿಳಾ ಕಾಲೇಜಿನ ಆವರಣದಲ್ಲಿ ನಡೆದ ಫೈನಲ್ ಪಂದ್ಯದ ರೋಚಕ ಹಣಾಹಣಿಯಲ್ಲಿ ಹುಣಸೂರು ಕಾಲೇಜು ತಂಡ 16–14 ಅಂಕಗಳ ಅಂತರದಲ್ಲಿ ವಿಜಯ ಸಾಧಿಸಿತು. ಕೆ.ಆರ್. ನಗರದ ಸರಕಾರಿ ಮಹಿಳಾ ಪದವಿ ಕಾಲೇಜು ತೃತೀಯ ಸ್ಥಾನ ಗಿಟ್ಟಿಸಿದೆ.

ಉದ್ಯಮಿ ಎಚ್.ಪಿ.ಅಮರ್‌ನಾಥ್ ಪಂದ್ಯಾವಳಿ ಉದ್ಘಾಟಿಸಿದರು. ರೋಟರಿ ಸಂಸ್ಥೆ ಅಧ್ಯಕ್ಷ ಪಾಂಡುಕುಮಾರ್ ವಿಜೇತ ತಂಡಗಳಿಗೆ ಟ್ರೋಫಿ ನೀಡಿದರು ಪ್ರಭಾರ ಪ್ರಾಚಾರ್ಯ ಪುಟ್ಟಶೆಟ್ಟಿ ಬಹುಮಾನ ಮತ್ತು ಪ್ರಶಸ್ತಿ ಪತ್ರಗಳನ್ನು ವಿತರಿಸಿದರು. ಸಿಡಿಸಿ ಉಪಾಧ್ಯಕ್ಷ ನಟರಾಜ್, ಸದಸ್ಯರಾದ ನಾಗರಾಜ್, ಚಿನ್ನವೀರಯ್ಯ, ದೈಹಿಕ ಶಿಕ್ಷಣ ನಿರ್ದೇಶಕ ಡಾ.ಕೆ.ಎಸ್.ಭಾಸ್ಕರ್ ಹಾಗೂ ಅಧ್ಯಾಪಕ ವೃಂದ ಉಪಸ್ಥಿತರಿದ್ದರು.


ಹೊಸಹಳ್ಳಿಯಲ್ಲಿ ಆಷಾಢ, ಶ್ರಾವಣ ಮಾಸದ ವಿಶೇಷ ಪೂಜೆ



ಮೂಗೂರು, ಆ.2– ಇಲ್ಲಿಗೆ ಸಮೀಪದ ಹೊಸಹಳ್ಳಿ ಗ್ರಾಮದಲ್ಲಿ ಆಷಾಢ ಹಾಗೂ ಶ್ರಾವಣ ಮಾಸದ 3ನೇ ವಾರ್ಷಿಕೋತ್ಸವ ಅಂಗವಾಗಿ ಶ್ರೀತ್ರಿಪುರ ಸುಂದರಿ ಅಮ್ಮನವರಿಗೆ ವಿಶೇಷ ಪೂಜೆಯೊಂದಿಗೆ ಅಭಿಷೇಕ ನೆರವೇರಿಸಲಾಯಿತು. ಗ್ರಾಮದ ಚಿಗುರು ಕಡಿಯುವ ಕ್ಷೇತ್ರದ ದೇವಾಲಯದಲ್ಲಿ ಶ್ರೀ ತ್ರಿಪುರ ಸುಂದರಿ ಅಮ್ಮನವರನ್ನು ವಿವಿಧ ಬಗೆಯ ಹೂಗಳಿಂದ ಸಿಂಗರಿಸಲಾಗಿತ್ತು. ದೇವಾಲಯವನ್ನು ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು. ತಂಡೋಪತಂಡವಾಗಿ ಆಗಮಿಸಿದ ಭಕ್ತರು ಅಮ್ಮನವರಿಗೆ ಪೂಜೆ ಸಲ್ಲಿಸಿ ದರ್ಶನ ಪಡೆದರು.

ಭಕ್ತರಿಗೆ ಅನ್ನ ದಾಸೋಹ: ಹೊಸಹಳ್ಳಿ ಗ್ರಾಮಸ್ಥರಿಂದ ದೇವಾಲಯಕ್ಕೆ ಆಗಮಿಸಿದ ಭಕ್ತರಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಪ್ರತಿ ವರ್ಷ ನಡೆಯಲಿರುವ ವಿಶೇಷ ಪೂಜೆಗೆ ಈ ಬಾರಿ ಶಾಸಕ ಎಂ.ಅಶ್ವಿನ್‌ಕುಮಾರ್ ಅವರು ಹೊಸಹಳ್ಳಿ ಗ್ರಾಮದ ಚಿಗುರು ಕಡಿಯುವ ಶ್ರೀ ಕ್ಷೇತ್ರಕ್ಕೆ ಆಗಮಿಸಿ ಅಮ್ಮನವರ ದರ್ಶನ ಪಡೆದು ಸಹಪಂಕ್ತಿಯಲ್ಲಿ ಪ್ರಸಾದ ಸವಿದರು. ಗ್ರಾಮದ ದೇಗುಲಕ್ಕೆ ಆಗಮಿಸುವ ಭಕ್ತರಿಗೆ ಶೌಚಾಲಯ ವ್ಯವಸ್ಥೆ ಇಲ್ಲವಾಗಿದೆ. ಮೂಗೂರು ಮಾರ್ಗವಾಗಿ ಹೊಸಹಳ್ಳಿ ಗ್ರಾಮದ ವರೆಗೆ ರಸ್ತೆ ಹದಗೆಟ್ಟಿದ್ದು, ರಸ್ತೆ ಅಭಿವೃದ್ಧಿ ಪಡಿಸುವಂತೆ ಗ್ರಾಮಸ್ಥರು ಮನವಿ ಮಾಡಿದರು. ಈ ವೇಳೆ ಗ್ರಾಮದ ಎಲ್ಲಾ ಸಮುದಾಯದ ಮುಖಂಡರು, ಗ್ರಾಮಸ್ಥರು ಉಪಸ್ಥಿತರಿದ್ದರು.

ಮಂಡಕಳ್ಳಿ ವಿಮಾನ ನಿಲ್ದಾಣ ಮಳಿಗೆಗಳ ಮೇಲೆ ದಾಳಿ, ಪ್ಲಾಸ್ಟಿಕ್ ವಸ್ತುಗಳ ಮುಟ್ಟುಗೋಲು



ಕಡಕೊಳ, ಆ.2– ಮೈಸೂರು ತಾಲೂಕು ಕಡಕೊಳ ಪಪಂ ಹಾಗೂ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಪೊಲೀಸರ ಸಹಕಾರದೊಂದಿಗೆ ವಿಮಾನ ನಿಲ್ದಾಣದ ಪ್ರಮುಖ ವ್ಯಾಪಾರ ಮಳಿಗೆಗಳ ಮೇಲೆ ಅಧಿಕಾರಿಗಳು ದಾಳಿ ನಡೆಸಿ ಪ್ಲಾಸ್ಟಿಕ್ ಬಳಕೆ ಪತ್ತೆಮಾಡಿ ಮುಟ್ಟುಗೋಲು ಹಾಕಿಕೊಂಡು, ದಂಡ ವಿಧಿಸಿದ್ದಾರೆ. ನಂತರ ಅಲ್ಲಿನ ಮಳಿಗೆದಾರರಿಗೆ ಸರ್ಕಾರದ ಆದೇಶದಂತೆ ಪ್ಲಾಸ್ಟಿಕ್ ನಿಷೇಧದ ಬಗ್ಗೆ ಮಾಹಿತಿ ನೀಡಿ ಇನ್ನು ಮುಂದೆ ಪ್ಲಾಸ್ಟಿಕ್ ಬಳಸದಂತೆ ಎಚ್ಚರಿಕೆ ನೀಡಿ ಜಾಗೃತಿ ಮೂಡಿಸಲಾಯಿತು. ಪಪಂ ಮುಖ್ಯಾಧಿಕಾರಿ ವೆಂಕಟೇಶ್ ಮಾರ್ಗದರ್ಶನದಲ್ಲಿ ದಾಳಿ ನಡೆಸಲಾಯಿತು. ಈ ವೇಳೆ ಪಂಚಾಯಿತಿ ಆರೋಗ್ಯ ನಿರೀಕ್ಷಕ ನಾಗೇಶ್, ಪರಿಸರ ನಿಯಂತ್ರಣ ಮಂಡಳಿ ಅಧಿಕಾರಿ ರಮೇಶ್, ಸಮುದಾಯ ಸಂಘಟನಾಧಿಕಾರಿ ಮಹೇಶ್ ಹಾಗೂ ಪೊಲೀಸ್ ಇಲಾಖೆ ಅಧಿಕಾರಿಗಳು ಪಾಲ್ಗೊಂಡಿದ್ದರು.

ಮೈಸೂರು ಮಿತ್ರ ಬುಧವಾರ 3 ಆಗಸ್ಟ್ 2022



ಕೊಯನಾಡು ಕಿಂಡಿ ವ್ಯಾಪ್ತಿಯಲ್ಲಿ ಪ್ರವಾಹ

ಭಾರೀ ಮಳೆಯಿಂದ ಮನೆಗಳಿಗೆ ನೀರು ನುಗ್ಗಿ ಅವಾಂತರ, ನಿವಾಸಿಗಳ ಸ್ಥಳಾಂತರ

- ಅಧಿಕಾರಿಗಳು, ಜನಪ್ರತಿನಿಧಿಗಳ ವಿರುದ್ಧ ತಿರುಗಿಬಿದ್ದ ನಿವಾಸಿಗಳು
- ಅಣೆಕಟ್ಟೆಯಲ್ಲಿ ಸಿಲುಕಿದ್ದ ಮರದ ದಿಮ್ಮಿಗಳ ತೆರವು
- ಪರಿಹಾರ ವಿತರಣೆ

ಮಡಿಕೇರಿ, ಆ.2– ಕೊಡಗು ಜಿಲ್ಲೆಯ ಮದೆನಾಡು, 2ನೇ ಮೊಣ್ಣಂಗೇರಿ, ಜೋಡುಪಾಲ, ಕೊಯನಾಡು ವ್ಯಾಪ್ತಿಯಲ್ಲಿ ಸೋಮವಾರ ನಡು ರಾತ್ರಿ 'ಆಶ್ಲೇಷ' ಮಳೆ ಆರ್ಭಟಿಸಿದ ಪರಿಣಾಮ ಕೊಯನಾಡು ಕಿಂಡಿ ಅಣೆಕಟ್ಟೆ ವ್ಯಾಪ್ತಿಯಲ್ಲಿ ಪ್ರವಾಹ ಉಂಟಾಗಿ 5 ಮನೆಗಳಿಗೆ ನೀರು ನುಗ್ಗಿದೆ.

ಭಾರೀ ಪ್ರಮಾಣದಲ್ಲಿ ಬೃಹತ್ ಮರದ ದಿಮ್ಮಿಗಳು ಪ್ರವಾಹದಲ್ಲಿ ತೇಲಿ ಬಂದು ಕಿಂಡಿ ಅಣೆಕಟ್ಟೆಯಲ್ಲಿ ಸಿಕ್ಕಿ ಹಾಕಿಕೊಂಡಿದ್ದರಿಂದ ಪ್ರವಾಹ ಉಂಟಾಗಿ ಸುತ್ತಮುತ್ತಲಿನ ಮನೆಗಳಿಗೆ ಪಯಸ್ವಿನಿ ನದಿ ನೀರು ನುಗ್ಗಿದೆ. ಏಕಾಏಕಿ ನೀರು ನುಗ್ಗಿದ ಪರಿಣಾಮ ಗಾಢ ನಿದ್ರೆಯಲ್ಲಿದ್ದ ಮನೆ ಮಂದಿ ಬೆಚ್ಚಿ ಬಿದ್ದಿದ್ದು, ರಾತ್ರೋರಾತ್ರಿ ಸುರಕ್ಷಿತ ಸ್ಥಳಗಳಿಗೆ ತೆರಳಿ ಆಶ್ರಯ ಪಡೆದಿದ್ದಾರೆ. ಮನೆಯಲ್ಲಿದ್ದ ವಸ್ತುಗಳು ಪ್ರವಾಹ ನೀರಿನಿಂದ ತೋಯ್ದು ಹೋಗಿದ್ದು, ಭಾರೀ ಹಾನಿ ಸಂಭವಿಸಿದೆ.

ಜನರ ಆಕ್ರೋಶ: ಪ್ರವಾಹ ಸಂಭವಿಸಿದ ಪ್ರದೇಶಕ್ಕೆ ಶಾಸಕ ಕೆ.ಜಿ. ಬೋಪಯ್ಯ, ಜಿಲ್ಲಾಧಿಕಾರಿ ಡಾ.ಬಿ.ಸಿ ಸತೀಶ, ಉಪವಿಭಾಗಾಧಿಕಾರಿ ಯತೀಶ್ ಉಳ್ಳಾಲ್, ಮಡಿಕೇರಿ ತಹಶೀಲ್ದಾರ್ ಮಹೇಶ್, ಕಂದಾಯ ಇಲಾಖೆ ಅಧಿಕಾರಿಗಳು, ಪಂಚಾಯಿತಿ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಪ್ರಸ್ತುತದ ಮಳೆಗಾಲದಲ್ಲಿ ಇದೀಗ 2ನೇ ಬಾರಿಗೆ ಕಿಂಡಿ ಅಣೆಕಟ್ಟೆಯಲ್ಲಿ ಪ್ರವಾಹ ತಲೆದೋರಿ ಮನೆಗಳು ಮುಳುಗಡೆಯಾಗಿದೆ. ಈ ಹಿನ್ನೆಲೆಯಲ್ಲಿ ಕಿಂಡಿ ಅಣೆಕಟ್ಟೆಯ ವಿರುದ್ದ ಸ್ಥಳೀಯ ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಗ್ರಾಮಕ್ಕೆ ಕಿಂಡಿ ಅಣೆಕಟ್ಟೆಯ ಅಗತ್ಯ ಇರಲಿಲ್ಲ. ಆದರೂ ಯೋಜನೆ ರೂಪಿಸಿ ಮನೆಗಳು ನೀರಿನಿಂದ ಮುಳುಗುವಂತೆ ಮಾಡಲಾಗಿದೆ ಎಂದು ಗ್ರಾಮಸ್ಥರು ಆರೋಪಿಸಿದರು. ಈ ಕಿಂಡಿ ಅಣೆಕಟ್ಟೆಯಿಂದ ಮಳೆಗಾಲದಲ್ಲಿ ಸಮಸ್ಯೆ ತಲೆದೋರುತ್ತಿದ್ದು, ಅಣೆಕಟ್ಟೆಯನ್ನು ತೆರವು ಮಾಡುವಂತೆ ಗ್ರಾಮಸ್ಥರು ಆಗ್ರಹಿಸಿದ ಘಟನೆಯೂ ನಡೆದಿದೆ. ಪ್ರವಾಹ ಸಂತ್ರಸ್ತರಿಗೆ ಸಾಂತ್ವಾನ ಹೇಳಿದ ಬೋಪಯ್ಯ, ಯಾವುದೇ ಮಳೆಗಾಲದಲ್ಲೂ ಪ್ರವಾಹ ತಲೆದೋರದಂತೆ ಶಾಶ್ವತ ಪರಿಹಾರ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.



ಭಾರೀ ದಿಮ್ಮಿಗಳ ತೆರವು: ಕಿಂಡಿ ಅಣೆಕಟ್ಟೆಗೆ ರಾಮಕೊಲ್ಲಿ, ಜೋಡುಪಾಲದ ಸೀಮೆ ಹುಲ್ಲು ಕಜೆ ಬೆಟ್ಟದಲ್ಲಿ ಈ ಹಿಂದೆ ಉಂಟಾಗಿದ್ದ ಜಲಸ್ಫೋಟದಲ್ಲಿ ಕೊಚ್ಚಿ ಹೋಗಿದ್ದ ಮರದ ದಿಮ್ಮಿಗಳು ತೇಲಿ ಬಂದು ನೀರು ಸರಾಗವಾಗಿ ಹರಿಯಲು ತಡೆ ಒಡ್ಡಿವೆ. ಇದರಿಂದ ಪ್ರವಾಹ ಉಂಟಾಗಿ ಮನೆಗಳಿಗೆ ನೀರು ನುಗ್ಗಿ ಅವಾಂತರ ಘಟಿಸಿದೆ. ಈ ಹಿನ್ನೆಲೆಯಲ್ಲಿ ಎನ್.ಡಿ.ಆರ್.ಎಫ್ ಮತ್ತು ಅರಣ್ಯ ಇಲಾಖೆ ಸಿಬ್ಬಂದಿಗಳು ಸ್ಥಳಕ್ಕಾಗಮಿಸಿ ಅಣೆಕಟ್ಟೆಯಲ್ಲಿ ಸಿಲುಕಿದ್ದ ಭಾರೀ ಗಾತ್ರದ ಮರದ ದಿಮ್ಮಿಗಳನ್ನು ತೆರವುಗೊಳಿಸುವ ಕಾರ್ಯಾಚರಣೆ ನಡೆಸಿದರು. ಮರ ಕತ್ತರಿಸುವ ಯಂತ್ರಗಳ ಸಹಾಯದಿಂದ ಭಾರೀ ಗಾತ್ರದ ಮರಗಳನ್ನು ತುಂಡು ತುಂಡಾಗಿ ಕತ್ತರಿಸಿ ಕ್ರೇನ್‌ಗಳ ಸಹಾಯದಿಂದ ನದಿಯಿಂದ ಹೊರ ತೆಗೆದಿದ್ದಾರೆ. ಇದೀಗ ನದಿ ನೀರು ಸರಾಗವಾಗಿ ಹರಿಯುತ್ತಿದ್ದು ಪ್ರವಾಹ ಇಳಿಕೆಯಾಗಿದೆ.



ಸಂತ್ರಸ್ತರ ಸ್ಥಳಾಂತರ: ಜಿಲ್ಲೆಯಲ್ಲಿ ಆಶ್ಲೇಷ ಮಳೆಯಾಗುತ್ತಿದ್ದು, ಮತ್ತೆ ಮಳೆ ಹೆಚ್ಚಳವಾಗುವ ಎಲ್ಲಾ ಸಾಧ್ಯತೆ ಕಂಡು ಬರುತ್ತಿದೆ. ಮಳೆಯಿಂದ ಪ್ರವಾಹ ಎದುರಾಗುವ ಸಾಧ್ಯತೆ ಇರುವ ಕಾರಣ ಕಿಂಡಿ ಅಣೆಕಟ್ಟು ವ್ಯಾಪ್ತಿಯಲ್ಲಿರುವ 5 ಕುಟುಂಬಗಳನ್ನು ಸುರಕ್ಷಿತ ಸ್ಥಳಗಳಿಗೆ ಜಿಲ್ಲಾಡಳಿತ ಸ್ಥಳಾಂತರ ಮಾಡಿದೆ. ಕೊಯನಾಡು ಗಣಪತಿ ದೇವಸ್ಥಾನದ ಕಲಾಮಂದಿರದಲ್ಲಿ ಕಾಳಜಿ ಕೇಂದ್ರ ತೆರೆಯಲಾಗಿದ್ದು, ಅಪಾಯದ ಅಂಚಿನಲ್ಲಿರುವ 7 ಕುಟುಂಬಗಳ 28 ಮಂದಿಗೆ ಅಲ್ಲಿ ಆಶ್ರಯ ಒದಗಿಸಲಾಗಿದೆ.

ಪರಿಹಾರ ವಿತರಣೆ: ಭಾರೀ ಮಳೆ ಹಾಗೂ ನದಿ ಪ್ರವಾಹದಿಂದಾಗಿ ಸಂತ್ರಸ್ತವಾದ ಕೊಯನಾಡುವಿನ 5 ಕುಟುಂಬಗಳು ಸಂಪಾಜೆ ಗ್ರಾಮದ 2 ಕುಟುಂಬಗಳಿಗೆ ಹಾಗೂ ಚೆಂಬು ಗ್ರಾಮದ ಎರಡು ಕುಟುಂಬಗಳಿಗೆ ಶಾಸಕ ಕೆ.ಜಿ. ಬೋಪಯ್ಯ ಮಳೆಹಾನಿ ಪರಿಹಾರವಾಗಿ ತಲಾ 10 ಸಾವಿರ ರೂ.ಗಳ ಚೆಕ್ ವಿತರಿಸಿದರು. ಕಿಂಡಿ ಅಣೆಕಟ್ಟಿನ ಎರಡು ಬದಿಗಳಲ್ಲಿ 5 ಅಡಿ ಎತ್ತರಕ್ಕೆ ತಡೆಗೋಡೆ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳುವಂತೆ ಸಣ್ಣ ನೀರಾವರಿ ಇಲಾಖೆಯ ಅಭಿಯಂತರರಿಗೆ ಶಾಸಕ ಕೆ.ಜಿ. ಬೋಪಯ್ಯ ಮತ್ತು ಜಿಲ್ಲಾಧಿಕಾರಿಗಳು ಸೂಚಿಸಿದರು.

ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ, ಆ.2– ವಿದ್ಯುತ್ ವಿತರಣಾ ಕೇಂದ್ರ ಮತ್ತು ಮಾರ್ಗದಲ್ಲಿ ತುರ್ತು ನಿರ್ವಹಣೆ ಮತ್ತು ದುರಸ್ತಿ ಕಾರ್ಯವನ್ನು ನಿರ್ವಹಿಸಬೇಕಿರುವುದರಿಂದ ಆ.3 ರಂದು ಬೆಳಗ್ಗೆ 11 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಪೊನ್ನಂಪೇಟೆ, ಗೋಣಿಕೊಪ್ಪಲು, ನಲ್ಲೂರು, ಹುದಿಕೇರಿ, ತಿತಿಮತಿ, ಹಾತೂರು, ಪಾಲಿಬೆಟ್ಟ, ಶ್ರೀಮಂಗಲ, ಬಾಳಲೆ, ಕಾನೂರು, ಬಿರುನಾಣಿ, ಕುಟ್ಟ ವಿರಾಜಪೇಟೆ, ಬಿ.ಶೆಟ್ಟಗೇರಿ, ಬೇತ್ರೀ, ಕಡಂಗಮರೂರು, ಕಾಕೋಟುಪರಂಬು, ಅಮ್ಮತ್ತಿ, ಸಿದ್ದಾಪುರ, ಮಾಲ್ದಾರೆ, ಮೂರ್ನಾಡು, ಮರುಗೋಡು, ನಾಪೋಕ್ಲು, ಕಕ್ಕಬೆ, ಅರೆಕಾಡು, ಐಯ್ಯಂಗೇರಿ ಹಾಗೂ ಸುತ್ತಮುತ್ತಲ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.



ದೀನಾ ಅಚ್ಚಯ್ಯ ನಿಧನ

ಹುಣಸೂರು, ಆ.2– ಹುಣಸೂರಿನ ಹೆಸರಾಂತ ಹಿರಿಯ ವಕೀಲ ಮೊಣ್ಣಂಡ ಬಿ.ಚರಮಣ್ಣ ಅವರ ಪುತ್ರಿ, ಕೊಡಗಿನ ಚೆಟ್ಟಳ್ಳಿ ಗ್ರಾಮದ ಪ್ಲಾಂಟರ್ ಬಲ್ಲರಂಡ ಅಜಿತ್ ಅಚ್ಚಯ್ಯ ಅವರ ಪತ್ನಿ ದೀನಾ ಅಜಿತ್ ಅಚ್ಚಯ್ಯ(44) ಮಂಗಳವಾರ ಸಂಜೆ ನಿಧನರಾದರು. ಮೃತರು ಪತಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ (ಆ.3) ಮಧ್ಯಾಹ್ನ 1.30 ಗಂಟೆಗೆ ಹುಣಸೂರಿನ ಮೃತರ ತೋಟದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. (ಮಾಹಿತಿಗೆ ಮೊ: 94480–64436, 99028–67878, 89040–87878)

ಪಿ.ಮಹಮದ್ ಅಲಿ



ಹುಣಸೂರು, ಆ.2– ವಿರಾಜಪೇಟೆ ತಾಲೂಕು ಬೆಳಗುಂದ ಗ್ರಾಪಂ ಸದಸ್ಯ ಪಿ.ಮಹಮದ್ ಅಲಿ (82) ಮಂಗಳವಾರ ಬೆಳಗ್ಗೆ ನಿಧನರಾದರು. ಮೃತರು ಗ್ರಾಪಂ ಸದಸ್ಯ ಅನೀಫ್, ಪತ್ರಕರ್ತ ಮುಸ್ತಾಫ ಸೇರಿದಂತೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಅರುವತ್ತೊಕ್ಲು ಗ್ರಾಮದಲ್ಲಿ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ಲಾಸ್ಟಿಕ್ ನಿಷೇಧ; ದಂಡ ವಸೂಲಿ

ಮಡಿಕೇರಿ, ಆ.2– ನಿಷೇಧಿತ ಪ್ಲಾಸ್ಟಿಕ್ ಬಳಕೆ ಮಾಡುತ್ತಿದ್ದ ಅಂಗಡಿ–ಮಳಿಗೆಗಳ ಮೇಲೆ ದಾಳಿ ನಡೆಸಿ ನಿಷೇಧಿತ ಪ್ಲಾಸ್ಟಿಕ್ ವಶಪಡಿಸಿಕೊಂಡು ಮಾಲೀಕರಿಗೆ ದಂಡ ವಿಧಿಸಲಾಗಿದೆ.

ಗೋಣಿಕೊಪ್ಪಲು ಗ್ರಾಮ ಪಂಚಾಯತ್ ವ್ಯಾಪ್ತಿಯ ಅಂಗಡಿ, ಮಾಂಸ ಮಳಿಗೆಗಳ ಮೇಲೆ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶ್ರೀನಿವಾಸ್ ನೇತೃತ್ವದ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿ ದಂಡ ವಿಧಿಸಿದರು. ನಿಷೇಧಿತ ಪ್ಲಾಸ್ಟಿಕ್ ಮಾರಾಟವನ್ನು ಜಪ್ತಿ ಮಾಡಿ ರೂ.13 ಸಾವಿರ ದಂಡ ವಿಧಿಸಿ, ಸುಮಾರು 8 ಕೆಜಿ ಪ್ಲಾಸ್ಟಿಕ್ ವಶಕ್ಕೆ ಪಡೆಯಲಾಗಿದೆ.

ಈಗಾಗಲೇ ನಿಷೇಧಿತ ಪ್ಲಾಸ್ಟಿಕ್ ಬಳಕೆ ಮಾಡದಂತೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಹಲವು ಜನಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಆದರೂ ಕೆಲವು ಅಂಗಡಿಗಳು ಎಚ್ಚರಿಕೆಯ ಬಳಿಕವೂ ನಿಷೇಧಿತ ಪ್ಲಾಸ್ಟಿಕ್ ಬಳಸಿದ್ದರಿಂದ ದಂಡ ವಿಧಿಸಿ ಪ್ಲಾಸ್ಟಿಕ್ ವಶಪಡಿಸಿಕೊಳ್ಳಲಾಗಿದೆ ಎಂದರು.

ಚಿನ್ನಾಭರಣ ಕಳವು: ದಂಪತಿ ವಿರುದ್ಧ ದೂರು

ವಿರಾಜಪೇಟೆ, ಆ.2– ಮನೆಯಲ್ಲಿ ಬಾಡಿಗೆಗೆ ಇರುವ ವ್ಯಕ್ತಿಗಳಿಂದ ಚಿನ್ನಾಭರಣ ಕಳುವಾಗಿದೆ ಎಂದು ಮನೆಯ ಮಾಲೀಕ ಪೊಲೀಸರಿಗೆ ದೂರು ನೀಡಿರುವ ಘಟನೆ ವಿರಾಜಪೇಟೆ ಐಮಂಗಲ ಗ್ರಾಮದಲ್ಲಿ ನಡೆದಿದೆ. ವಿರಾಜ ಪೇಟೆ ತಾಲೂಕು ಚೆಂಬೆ ಬೆಳ್ಳೂರು ಗ್ರಾಪಂ ವ್ಯಾಪ್ತಿಯ ಐಮಂಗಲ ನಿವಾಸಿ ಅನಿಲ್ ನರೋನಾ ದೂರು ದಾಖಲಿಸಿದ್ದಾರೆ.

ಅನಿಲ್ ನರೋನಾ ಅವರು ತಮ್ಮ ಮನೆಯ ಒಂದು ಭಾಗದ ಮನೆಯನ್ನು ಸುಮಾರು ಎರಡು ತಿಂಗಳ ಹಿಂದೆ ದಂಪತಿಗೆ ಬಾಡಿಗೆಗೆ ನೀಡಿದ್ದರು. ಬಾಡಿಗೆ ಪಡೆದು ಸುಮಾರು 15 ದಿನದ ಅಂತರದಲ್ಲಿ ಮನೆಯಲ್ಲಿದ್ದ 5 ಸಾವಿರ ರೂ. ಕಳ್ಳತನವಾಗಿತ್ತು ಎನ್ನಲಾಗಿದೆ. ಜು.31ರಂದು ಅನಿಲ್ ನರೋನ ಅವರ ಬಾವನ ಮಗನ ಹುಟ್ಟುಹಬ್ಬದ ನಿಮಿತ್ತ ಚಿನ್ನಾಭರಣ ಧರಿಸಲು ಮುಂದಾದ ಸಮಯದಲ್ಲಿ ಮನೆಯಲ್ಲಿ ಬೀರುವಿನ ಬಾಗಿಲು ಮುರಿದಿರುವುದು ಕಂಡು ಬಂದಿದೆ. ಮಾತ್ರವಲ್ಲದೇ ಬೀರುವಿನಲ್ಲಿದ್ದ 20 ಗ್ರಾಂ ಚಿನ್ನಾಭರಣ ಕಳ್ಳತನವಾಗಿರುವುದು ಬೆಳಕಿಗೆ ಬಂದಿದೆ.

ಈ ಹಿನ್ನೆಲೆಯಲ್ಲಿ ಅನಿಲ್ ನರೋನಾ ಆ.1ರಂದು ವಿರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಬಾಡಿಗೆ ಮನೆಯಲ್ಲಿ ನೆಲೆಸಿದ್ದ ದಂಪತಿ ವಿರುದ್ಧ ದೂರು ನೀಡಿದ್ದಾರೆ. ದೂರು ಸ್ವೀಕರಿಸಿರುವ ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.


ಹೋಂಸ್ಟೇನಲ್ಲಿ ಜೂಜಾಟ: ಏಳು ಮಂದಿ ವಿರುದ್ಧ ಪ್ರಕರಣ

ವಿರಾಜಪೇಟೆ, ಆ.2– ಹೋಂ ಸ್ಟೇ ಒಂದರಲ್ಲಿ ಅಕ್ರಮವಾಗಿ ಜೂಜಾಟದಲ್ಲಿ ತೊಡಗಿದ್ದ 7 ಮಂದಿ ಸೇರಿದಂತೆ ಹೋಂ ಸ್ಟೇ ಮಾಲೀಕನ ಮೇಲೆ ಪ್ರಕರಣ ದಾಖಲಾದ ಘಟನೆ ವಿರಾಜಪೇಟೆ ಅಮ್ಮತ್ತಿ ಒಂಟಿ ಅಂಗಡಿ ಗ್ರಾಮದಲ್ಲಿ ನಡೆದಿದೆ.

ವಿರಾಜಪೇಟೆ ಅಮ್ಮತ್ತಿ ಒಂಟಿ ಅಂಗಡಿ ನಿವಾಸಿ ಚಂದ್ರ ಎಂಬುವರಿಗೆ ಸೇರಿದ ಹೋಂ ಸ್ಟೇಯಲ್ಲಿ 7 ವ್ಯಕ್ತಿಗಳು ಹಣ ಪಣಕ್ಕಿಟ್ಟು ಅಕ್ರಮ ಜೂಜಿನಲ್ಲಿ ತೊಡಗಿದ್ದಾರೆ ಎಂದು ಅಮ್ಮತ್ತಿ ಉಪ ಠಾಣಾ ಪೊಲೀಸರಿಗೆ ಖಚಿತ ಮಾಹಿತಿ ಲಭಿಸಿತ್ತು. ಈ ಮಾಹಿತಿ ಆಧರಿಸಿ ಅಮ್ಮತ್ತಿ ಉಪ ಠಾಣಾ ಎ.ಎಸ್.ಐ. ಕೆ.ಕೆ. ಧನಪತಿ ಮತ್ತು ಸಿಬ್ಬಂದಿಗಳು ಹೋಂ ಸ್ಟೇ ಮೇಲೆ ದಾಳಿ ನಡೆಸಿದ್ದರು. ಈ ಸಂದರ್ಭ ಜೂಜಾಟದಲ್ಲಿ ತೊಡಗಿದ್ದ 7 ಮಂದಿಯನ್ನು ವಶಕ್ಕೆ ಪಡೆದಿದ್ದಾರೆ. ಮಾತ್ರವಲ್ಲದೇ ಜೂಜಾಟಕ್ಕೆ ಪಣವಿಟ್ಟಿದ್ದ 1,75,140 ರೂ ನಗದು ವಶಕ್ಕೆ ಪಡೆದಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಹೋಂ ಸ್ಟೇ ಮಾಲೀಕ ಸೇರಿದಂತೆ 7 ಮಂದಿಯ ವಿರುದ್ದ ವಿರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಭೂಕುಸಿತ ಪ್ರದೇಶಗಳ ಬಗ್ಗೆ ಗಮನ ಹರಿಸಿ

ವೀಡಿಯೋ ಸಂವಾದದಲ್ಲಿ ಅಧಿಕಾರಿಗಳಿಗೆ ಸಿಎಂ ಬೊಮ್ಮಾಯಿ ಸೂಚನೆ



ಮಡಿಕೇರಿ, ಆ.2– ಮುಂದಿನ 10 ದಿನಗಳ ಕಾಲ ಮಲೆನಾಡು ಮತ್ತು ಕರಾವಳಿ ಭಾಗದಲ್ಲಿ ಭಾರೀ ಮಳೆಯಾಗುವ ಮುನ್ಸೂಚನೆ ಇದ್ದು, ಭೂಕುಸಿತ ಪ್ರದೇಶಗಳ ಬಗ್ಗೆ ಹೆಚ್ಚಿನ ಗಮನ ಹರಿಸುವಂತೆ ಜಿಲ್ಲಾಡಳಿತಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಿರ್ದೇಶನ ನೀಡಿದ್ದಾರೆ.

ಜಿಲ್ಲಾಧಿಕಾರಿಗಳು, ಜಿಪಂ ಸಿಇಒ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಜೊತೆ ಮಂಗಳವಾರ ನಡೆದ ವಿಡಿಯೋ ಸಂವಾದದಲ್ಲಿ ಮಾಹಿತಿ ಪಡೆದು ಮಾತನಾಡಿದ ಅವರು, ಮುಂದಿನ ಹತ್ತು ದಿನಗಳಲ್ಲಿ ಮಲೆನಾಡು ಮತ್ತು ಕರಾವಳಿ ಭಾಗದಲ್ಲಿ ಹೆಚ್ಚಿನ ಮಳೆಯಾಗುವ ಸಾಧ್ಯತೆ ಇದ್ದು, ಈ ಸಂಬಂಧ ಸೂಕ್ಷ್ಮ ಪ್ರದೇಶದಲ್ಲಿನ ಕುಟುಂಬಗಳನ್ನು ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸುವಂತಾಗಬೇಕು ಎಂದರು.

ಮನೆ ಹಾನಿಗೆ ಸಂಬಂಧಿಸಿದಂತೆ ಕೂಡಲೇ ಪರಿಹಾರ ವಿತರಿಸಬೇಕು. ಸಂತ್ರಸ್ತರಿಗೆ ಯಾವುದೇ ರೀತಿಯ ಸಮಸ್ಯೆ ಉಂಟಾಗದಂತೆ ಗಮನಹರಿಸಬೇಕು. ವಿಶೇಷ ಕಾರ್ಯಪಡೆ, ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ತಂಡಗಳ ಕಾರ್ಯನಿರ್ವಹಣೆ, ಕಾಳಜಿ ಕೇಂದ್ರಗಳಲ್ಲಿ ಅಗತ್ಯ ಮೂಲ ಸೌಲಭ್ಯ ಕಲ್ಪಿಸುವುದು ಸೇರಿದಂತೆ ಇನ್ನಿತರ ವ್ಯವಸ್ಥೆಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದರು. ಜಿಲ್ಲಾಡಳಿತ ಭವನ ಬಳಿಯ ತಡೆಗೋಡೆ ಬಗ್ಗೆ ಮಾಹಿತಿ ಕೇಳಿದ ಮುಖ್ಯಮಂತ್ರಿಗಳಿಗೆ ತಡೆಗೋಡೆಗೆ ಸದ್ಯ ಮರಳು ಮೂಟೆಗಳನ್ನು ಅಳವಡಿಸಲಾಗಿದ್ದು, ಲಘು ವಾಹನ ಸಂಚಾರಕ್ಕೆ ಅವಕಾಶ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ತಿಳಿಸಿದರು. ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಆಯೋಗದ ಆಯುಕ್ತ ಡಾ.ಮನೋಜ್ ರಾಜನ್ ಮಾಹಿತಿ ನೀಡಿ ಮುಂದಿನ ಒಂದು ವಾರಗಳ ಕಾಲ ಮಲೆನಾಡು ಮತ್ತು ಕರಾವಳಿ ಭಾಗದಲ್ಲಿ ಹೆಚ್ಚಿನ ಮಳೆಯಾಗುವ ಸಾಧ್ಯತೆ ಇದೆ. ಆದ್ದರಿಂದ ಭೂಕುಸಿತ ಪ್ರದೇಶಗಳಲ್ಲಿನ ಜನರಿಗೆ ಮಾಹಿತಿ ನೀಡಿ, ಸ್ಥಳಾಂತರಿಸಬೇಕು. ಸಹಾಯವಾಣಿ ಕೇಂದ್ರಗಳು ಸಂಪರ್ಕದಲ್ಲಿರಬೇಕು ಎಂದರು.

ಜಿಪಂ ಸಿಇಒ ಭಂವರ್ ಸಿಂಗ್ ಮೀನಾ, ಎಸ್ಪಿ ಎಂ.ಎ.ಅಯ್ಯಪ್ಪ ಎಡಿಸಿ ಡಾ.ನಂಜುಂಡೇಗೌಡ, ನಾಗರಾಜು, ತಹಶೀಲ್ದಾರ್ ಪಿ.ಎಸ್.ಮಹೇಶ್, ನಾರಾಯಣ ರೆಡ್ಡಿ, ಜಿಲ್ಲಾ ವಿಪತ್ತು ನಿರ್ವಹಣಾ ಪರಿಣತರಾದ ಅನನ್ಯ ವಾಸುದೇವ ಇತರರು ಇದ್ದರು.

ಸುಸಜ್ಜಿತ ದಾಸೋಹ ಭವನ ನಿರ್ಮಾಣಕ್ಕೆ ಕ್ರಮವಹಿಸಿ

ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ಸೂಚನೆ



ಚಾಮರಾಜನಗರ, ಆ.2–ಮಲೆ ಮಹದೇಶ್ವರ ಬೆಟ್ಟದಲ್ಲಿ ಸುಸಜ್ಜಿತ ನೂತನ ದಾಸೋಹ ಭವನ ನಿರ್ಮಾಣಕ್ಕಾಗಿ ವಿಸ್ತೃತ ಯೋಜನಾ ವರದಿಯನ್ನು ಸಿದ್ಧಪಡಿಸಿ ನಾಲ್ಕರಿಂದ ಐದು ತಿಂಗಳೊಳಗೆ ಕಾಮಗಾರಿ ಪೂರ್ಣಗೊಳಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ವಹಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಸೂಚನೆ ನೀಡಿದರು.

ಮಲೆ ಮಹದೇಶ್ವರ ಬೆಟ್ಟದ ನಾಗಮಲೆ ಭವನದಲ್ಲಿಂದು ಮಲೆ ಮಹದೇಶ್ವರ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಭಕ್ತಾಧಿಗಳ ಸೌಕರ್ಯಕ್ಕಾಗಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಲೆ ಮಹದೇಶ್ವರ ಬೆಟ್ಟದಲ್ಲಿ ಭಕ್ತರ ಸಂಖ್ಯೆಯು ಹೆಚ್ಚುತ್ತಿದ್ದು, ಮೂಲಸೌಕರ್ಯ ಒದಗಿಸುವುದು ನಮ್ಮ ಕರ್ತವ್ಯ. ಈ ನಿಟ್ಟಿನಲ್ಲಿ ಸುಸಜ್ಜಿತ ದಾಸೋಹ ಭವನ ಅಗತ್ಯವಿದ್ದು, ಇದಕ್ಕಾಗಿ ವಿಸ್ತೃತ ಯೋಜನಾ ವರದಿ ಹಾಗೂ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿ ತುರ್ತಾಗಿ ಸಲ್ಲಿಸಬೇಕು ಎಂದರಲ್ಲದೆ, ಭಕ್ತಾದಿಗಳ ವಾಸ್ತವ್ಯಕ್ಕಾಗಿ ಪ್ರಗತಿಯಲ್ಲಿರುವ 512 ಕೊಠಡಿಗಳ ವಸತಿಗೃಹ ಕಾಮಗಾರಿ ವಿಳಂಬ ಮಾಡದೇ ಪೂರ್ಣಗೊಳಿಸಬೇಕು ಎಂದು ಸೋಮಣ್ಣ ತಾಕೀತು ಮಾಡಿದರು.

ತಾಳಬೆಟ್ಟದಿಂದ ಮಹದೇಶ್ವರ ಬೆಟ್ಟದವರೆಗಿನ ಮೆಟ್ಟಿಲುಗಳ ಕಾಮಗಾರಿಯೂ ಸಹ ನಿರೀಕ್ಷಿತ ವೇಗದಲ್ಲಿ ನಿರ್ವಹಿಸಬೇಕು. ದೊಡ್ಡಕೆರೆ ಅಭಿವೃದ್ಧಿ ಕಾಮಗಾರಿ, ಕ್ಯೂಲೈನ್ ಅಭಿವೃದ್ಧಿ ಕೆಲಸಗಳು ಸಹ ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕು. ಒಂದು ಮೆಗಾವ್ಯಾಟ್ ಸೋಲಾರ್ ಪವರ್ ಪ್ಲಾಂಟ್ ನಿರ್ಮಾಣ ಕೆಲಸವು ಬೇಗ ಆರಂಭಿಸುವಂತೆ ಸಚಿವರು ಸೂಚಿಸಿದರು.

ದೀಪದ ಒಡ್ಡುವಿನಲ್ಲಿ ನಿರ್ಮಾಣ ಮಾಡುತ್ತಿರುವ 108 ಅಡಿ ಎತ್ತರದ ಮಹದೇಶ್ವರ ಸ್ವಾಮಿ ಪ್ರತಿಮೆ ಕಾಮಗಾರಿಯ ವಿವರ ಪರಿಶೀಲಿಸಿದ ಜಿಲ್ಲಾ ಉಸ್ತುವಾರಿ ಸಚಿವರು ಕೆಲ ಮಾರ್ಪಾಡುಗಳಿಗೆ ಅಗತ್ಯ ಸೂಚನೆಗಳನ್ನು ನೀಡಿದರು. ಶ್ರೀ ಮಲೆ ಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಯೂ ಆದ ಎಡಿಸಿ ಎಸ್. ಕಾತ್ಯಾಯಿನಿ ದೇವಿ ಸಭೆಗೆ ಅಗತ್ಯ ವಿವರ ನೀಡಿದರು.

ಡಿಸಿ ಚಾರುಲತಾ ಸೋಮಲ್, ಎಸ್ಪಿ ಟಿ.ಪಿ. ಶಿವಕುಮಾರ್, ಜಿಪಂ ಸಿಇಒ ಕೆ.ಎಂ. ಗಾಯಿತ್ರಿ, ಲೋಕೋಪಯೋಗಿ ಇಲಾಖೆ ಇಇ ವಿನಯ್‌ಕುಮಾರ್, ಶ್ರೀ ಮಲೆ ಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಉಪಕಾರ್ಯದರ್ಶಿ ಬಸವರಾಜು ಸೇರಿದಂತೆ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಸಭೆಯಲ್ಲಿದ್ದರು.

ಜಿಲ್ಲಾ ರಜತ ಮಹೋತ್ಸವ ರೂಪುರೇಷೆ ತಯಾರಿಸಿ

ಚಾಮರಾಜನಗರ: ಜಿಲ್ಲೆ ಸ್ಥಾಪನೆಯಾಗಿ ಆ.15ರಂದು 25 ವರ್ಷಗಳು ತುಂಬುತ್ತಿರುವ ಹಿನ್ನೆಲೆಯಲ್ಲಿ ರಜತ ಮಹೋತ್ಸವ ಆಚರಣೆ ಕಾರ್ಯಕ್ರಮಕ್ಕೆ ರೂಪುರೇಷೆ ತಯಾರಿಸುವಂತೆ ಸಚಿವ ವಿ.ಸೋಮಣ್ಣ ನಿರ್ದೇಶನ ನೀಡಿದರು.

ಮಲೆ ಮಹದೇಶ್ವರ ಬೆಟ್ಟದ ನಾಗಮಲೆ ಭವನದಲ್ಲಿಂದು ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಜಿಲ್ಲಾ ಉಸ್ತುವಾರಿ ಸಚಿವರು ಆ.13 ರಿಂದ 15ರವರೆಗೆ ಹರ್ ಘರ್ ತಿರಂಗಾ ಅಭಿಯಾನ ಹಾಗೂ ಆಗಸ್ಟ್ 14, 15ರಂದು ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ಆಯೋಜಿಸಬೇಕು ಎಂದರು. ಚಾಮರಾಜನಗರ ಜಿಲ್ಲೆ ರಚನೆಗೊಂಡು 25 ವರ್ಷಗಳು ಪೂರೈಸುತ್ತಿರುವ ಹಿನ್ನಲೆಯಲ್ಲಿ ರಜತ ಮಹೋತ್ಸವ ಆಚರಣೆಯನ್ನು ವಿಶಿಷ್ಟವಾಗಿ ಹಮ್ಮಿಕೊಳ್ಳಬೇಕಿದೆ. ಈ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿಯವರನ್ನು ಆಹ್ವಾನಿಸಲು ಚಿಂತನೆ ನಡೆಸಲಾಗಿದೆ ಆಗಸ್ಟ್ 25 ಅಥವಾ 26 ಇಲ್ಲವೇ ಸೂಕ್ತ ದಿನಾಂಕವನ್ನು ನಿಗದಿ ಮಾಡಿಕೊಂಡು ರಜತಮಹೋತ್ಸವ ಕಾರ್ಯಕ್ರಮ ನಡೆಸಲಾಗುವುದು. ಇದಕ್ಕಾಗಿ ವೈವಿಧ್ಯಮಯ ಕಾರ್ಯಕ್ರಮ ಆಯೋಜಿಸುವಂತೆ ಅಧಿಕಾರಿಗಳಿಗೆ ಸಲಹೆ ನೀಡಿದರು.

ಜಿಲ್ಲೆಯ ನಾಲೆಗಳು, ಅಚ್ಚುಕಟ್ಟು ಪ್ರದೇಶಗಳ ಅಭಿವೃದ್ಧಿಗೆ ಆದ್ಯತೆ

ಕಾಡಾ ಅಧ್ಯಕ್ಷ ಜಿ.ನಿಜಗುಣರಾಜು



ಚಾಮರಾಜನಗರ, ಆ.2–ಜಿಲ್ಲೆಯ ವ್ಯಾಪ್ತಿಯ ಜಮೀನುಗಳು, ನಾಲೆಗಳು ಹಾಗೂ ಅಚ್ಚುಕಟ್ಟು ಪ್ರದೇಶಗಳ ಅಭಿವೃದ್ಧಿ ಪ್ರಥಮ ಆದ್ಯತೆ ನೀಡುವ ಜೊತೆಗೆ ಇತರ ಜಿಲ್ಲೆಗಳಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ, ರೈತರಿಗೆ ಹೆಚ್ಚಿನ ಅನುಕೂಲ ಕಲ್ಪಿಸಲು ಕಾರ್ಯೋನ್ಮುಖರಾಗುವುದಾಗಿ ಕಾಡಾ ಅಧ್ಯಕ್ಷ ಜಿ.ನಿಜಗುಣರಾಜು ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ರಾಜ್ಯ ಮುಖಂಡರು ನನ್ನ ಮೇಲೆ ವಿಶ್ವಾಸವಿಟ್ಟು ಪದವಿಯನ್ನು ನೀಡಿದ್ದು, ಅವರಿಗೆ ಕೃತಜ್ಞತೆ ಸಲ್ಲಿಸುವ ಜೊತೆಗೆ ಅವರ ನಿರೀಕ್ಷೆಗೂ ಮೀರಿ ಹೆಚ್ಚು ಕೆಲಸ ಮಾಡುವ ಇಚ್ಛೆ ನನ್ನದಾಗಿದೆ. ಚಾಮರಾಜನಗರ ಜಿಲ್ಲೆ ನನ್ನ ಕರ್ಮ ಭೂಮಿಯಾಗಿದ್ದು, ಈ ಭಾಗದಲ್ಲಿರುವ ಸುವರ್ಣಾವತಿ, ಚಿಕ್ಕಹೊಳೆ ಜಲಾಶಯಗಳು ಹಾಗೂ ಗುಂಡಾಲ್ ಅಣೆಕಟ್ಟು ಕಾಡಾ ವ್ಯಾಪ್ತಿಗೆ ಬರುತ್ತದೆ. ಈ ನಿಟ್ಟಿನಲ್ಲಿ ಡ್ಯಾಂಗಳ ವ್ಯಾಪ್ತಿಯಲ್ಲಿರುವ ರೈತರ ಸಮಸ್ಯೆಗಳನ್ನು ಬಗೆಹರಿಸುವ ಭರವಸೆ ನೀಡಿದರು.

ಈ ಎರಡು ಡ್ಯಾಂಗಳು ಈ ಭಾಗದ ರೈತರ ಜೀವನಾಡಿಯಾಗಿದ್ದು, ನಾಲೆಗಳ ದುರಸ್ತಿ, ದೊಡ್ಡಕೆರೆ, ಚಿಕ್ಕಕೆರೆ, ಸಿಂಡಗೆರೆಗಳ ಅಭಿವೃದ್ಧಿ ಮತ್ತು ಕೆರೆಗಳಿಗೆ ನೀರು ತುಂಬಿಸಲು ಹೆಚ್ಚಿನ ಒತ್ತು ನೀಡಲಾಗುವುದು. ಕಾವೇರಿ ಜಲಾನಯನ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ 19 ಡ್ಯಾಂಗಳು ಬರಲಿದ್ದು, ಆ ವ್ಯಾಪ್ತಿಯ ಅಭಿವೃದ್ಧಿ ಕೆಲಸಗಳು, ಜನರು, ರೈತರ ಸಮಸ್ಯೆಗಳನ್ನು ಆಲಿಸಿ, ಬಗೆಹರಿಸಲಾಗುವುದು ಎಂದು ತಿಳಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಆರ್.ಸುಂದರ್, ಎಪಿಎಂಸಿ ಅಧ್ಯಕ್ಷ ಮನೋಜ್ ಪಟೇಲ್, ಮುಖಂಡರಾದ ಕೂಡ್ಲೂರು ಹನುಮಂತಶೆಟ್ಟಿ, ಚಾಮುಲ್ ನಿರ್ದೇಶಕ ಅಯ್ಯನಪುರ ಶಿವಕುಮಾರ್, ಮಾಜಿ ನಿರ್ದೇಶಕ ಕಿಲಗೆರೆ ಬಸವರಾಜು, ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಸೂರ್ಯಕುಮಾರ್ ಸುದ್ದಿಗೋಷ್ಠಿಯಲ್ಲಿದ್ದರು.

ಮಹದೇಶ್ವರ ವನ್ಯಧಾಮ ಹುಲಿ ಸಂರಕ್ಷಿತ ಪ್ರದೇಶವಾಗಿ ಘೋಷಿಸುವುದಿಲ್ಲ



ಹನೂರು, ಆ.2– ಮಲೆಮಹದೇಶ್ವರ ವನ್ಯಜೀವಿ ಧಾಮವನ್ನು ಮುಖ್ಯಮಂತ್ರಿ ಬೊಮ್ಮಾಯಿ ನೇತೃತ್ವದ ಸರ್ಕಾರ ಯಾವುದೇ ಕಾರಣಕ್ಕೂ ಹುಲಿ ಸಂರಕ್ಷಿತ ಅರಣ್ಯ ಪ್ರದೇಶವಾಗಿಸುವುದಿಲ್ಲ ಎಂದು ವಸತಿ ಸಚಿವ ವಿ.ಸೋಮಣ್ಣ ತಿಳಿಸಿದರು.

ತಾಲೂಕಿನ ಪೊನ್ನಾಚಿ ಗ್ರಾಮದ ಶ್ರೀ ಸಾಲೂರು ಸ್ವಾಮಿ ಕೃಪಾ ಪ್ರೌಢಶಾಲಾ ಆವರಣದಲ್ಲಿ ಆಲಂಬಾಡಿ ಮಠದ ಕಟ್ಟಡ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ, ಬಾಲಕರ ವಸತಿ ನಿಲಯ ಉದ್ಘಾಟನೆ ಹಾಗೂ ಸಾಲೂರು ಪಟ್ಟದ ಗುರು ಸ್ವಾಮೀಜಿ ಅವರ ಗುರುವಂದನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಈಗಾಗಲೇ ಜಿಲ್ಲೆಯಲ್ಲಿ ಎರಡು ಹುಲಿ ಸಂರಕ್ಷಿತಾರಣ್ಯಗಳಿವೆ. ಮಲೆಮಹದೇಶ್ವರ ವನ್ಯಜೀವಿ ಧಾಮದಲ್ಲಿ ಹುಲಿ ಯೋಜನೆ ಘೋಷಣೆಯಾದರೆ ದನ–ಕರುಗಳಿಗೆ ಮಾತ್ರವಲ್ಲ, ಜನರಿಗೂ ತೊಂದರೆಯಾಗುತ್ತದೆ. ಮಹದೇಶ್ವರ ಬೆಟ್ಟಕ್ಕೆ ಬರುವ ಭಕ್ತರಿಗೂ ತೊಂದರೆಯಾಗುತ್ತದೆ. ಈ ಬಗ್ಗೆ ಸಮೀಕ್ಷೆ ನಡೆಸು ತ್ತಿದ್ದೇವೆ. ಸಚಿವ ಸಂಪುಟದ ಮುಂದೆ ಚರ್ಚೆಗೆ ಬಂದಿದೆ. ಇದು ಸೂಕ್ಷ್ಮ ವಿಚಾರ. ತಕ್ಷಣಕ್ಕೆ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಿಲ್ಲ ಎಂದರು.

ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಆಶೀರ್ವಚನ ನೀಡಿದರು. ಸಾಲೂರು ಮಠದ ಹಿರಿಯ ಪಟ್ಟದ ಗುರುಸ್ವಾಮೀಜಿ, ಕನಕಪುರದ ಮರಳೇಗವಿ ಮಠದ ಮುಮ್ಮಡಿ ಶಿವರುದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಸಾಲೂರು ಬೃಹನ್ಮಠದ ಪೀಠಾಧಿಪತಿ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಕುಂದೂರು ಮಠದ ಡಾ.ಶರತ್ ಚಂದ್ರಸ್ವಾಮೀಜಿ, ಶಾಸಕ ಆರ್.ನರೇಂದ್ರ, ಮಾಜಿ ಶಾಸಕರಾದ ಪರಿ ಮಳ ನಾಗಪ್ಪ, ಜಿ.ಎನ್ ನಂಜುಂಡಸ್ವಾಮಿ, ಶ್ರೀ ಮಲೆಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಕಾತ್ಯಾಯಿನಿ ದೇವಿ, ಡಿಎಫ್‌ಓ ಏಡುಕುಂಡಲು ಹಾಗೂ ವಿವಿಧ ಗ್ರಾಮದ ಮಠಾಧೀಶರು, ಗ್ರಾಮಸ್ಥರಿದ್ದರು.

ಕಾಡುಗಳ್ಳರಿಗೆ ಸಿಂಹಸ್ವಪ್ನವಾಗಿದ್ದ ರಾಣಾನ ಯಶೋಗಾಥೆ



- 2015ರಲ್ಲಿ ಅರಣ್ಯ ಇಲಾಖೆಗೆ ನಿಯೋಜನೆ
- ಹಲವು ಅರಣ್ಯ ಅಪರಾಧ ಪ್ರಕರಣ ಭೇದಿಸಿದ ಸಾಹಸಿ



ಗುಂಡ್ಲುಪೇಟೆ, ಆ.2– ಅರಣ್ಯ ಅಪರಾಧ ಪತ್ತೆ ಕಾರ್ಯಾಚರಣೆಯಲ್ಲಿ ತನ್ನದೇ ಛಾಪು ಮೂಡಿಸುವ ಮೂಲಕ ಕಾಡುಗಳ್ಳರಿಗೆ ಸಿಂಹಸ್ವಪ್ನವಾಗಿದ್ದ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಶ್ವಾನ ದಳದ ರಾಣಾ ಮೃತಪಟ್ಟಿದ್ದು, ಈತನ ಯಶೋಗಾಥೆ ಅವಿಸ್ಮರಣೀಯ.

ಭೋಪಾಲ್‌ನ ವಿಶೇಷ ಸಶಸ್ತ್ರ ಪಡೆಯಲ್ಲಿ ತರಬೇತಿ ಪಡೆದು 2015ರ ಜೂನ್‌ನಲ್ಲಿ ಅರಣ್ಯ ಇಲಾಖೆಗೆ ನಿಯೋಜನೆಗೊಂಡು ಹಲವು ಅರಣ್ಯ ಅಪರಾಧ ಪ್ರಕರಣಗಳನ್ನು ಭೇದಿಸುವ ಮೂಲಕ ಸಾಹಸ ಮೆರೆದು ಪತ್ತೇದಾರಿಯಲ್ಲಿ ನಂ.1 ಆಗಿದ್ದ ರಾಣಾ ತನ್ನದೇ ಅಭಿಮಾನಿಗಳನ್ನು ಸೃಷ್ಟಿಸಿಕೊಂಡಿದ್ದ. ಈತನ ಅಗಲಿಕೆ ಈಗ ಅಭಿಮಾನಿಗಳಿಗೆ ನೋವುಂಟು ಮಾಡಿದೆ.

2016ರ ಸೆ.3ರಂದು ಬಂಡೀಪುರ ಎನ್.ಬೇಗೂರು ವಲಯದಲ್ಲಿ ಅಕ್ರಮವಾಗಿ ತೇಗದ ಮರ ಕಡಿದ ಕಾಡುಗಳ್ಳರ ಜಾಡನ್ನು ಪತ್ತೆ ಮಾಡಿದ್ದಲ್ಲದೆ ತಮಿಳುನಾಡಿನ ಗೂಡಲೂರು ಪ್ರದೇಶದಲ್ಲಿ ನರಭಕ್ಷಕ ಹುಲಿಯ ಜಾಡನ್ನು ಹಿಡಿದುಕೊಟ್ಟು ಹುಲಿ ನಿಗ್ರಹಕ್ಕೆ ನೆರವಾಗಿದ್ದ ರಾಣಾ, 2016 ಜು.24ರಲ್ಲಿ ಬಂಡೀಪುರ ವ್ಯಾಪ್ತಿಯ ಓಂಕಾರ ವಲಯದಲ್ಲಿ 3 ಚಿರತೆಗಳಿಗೆ ವಿಷಪ್ರಾಶನ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದ ಆರೋಪಿಗಳನ್ನು ಪತ್ತೆಹಚ್ಚಿದ್ದ.

2017ರ ಮಾ.14ರಂದು ಶ್ರೀರಂಗಪಟ್ಟಣದ ವಲಯ ಕಚೇರಿ ಆವರಣದಲ್ಲಿ ಅಕ್ರಮವಾಗಿ ಕಡಿದು ಬಚ್ಚಿಟ್ಟಿದ್ದ ಗಂಧದ ತುಂಡುಗಳನ್ನು ಪತ್ತೆ ಹಚ್ಚಿದ್ದಲ್ಲದೆ, ಅದೇ ವರ್ಷ ಏ.20ರಂದು ಬಂಡೀಪುರದ ಪ್ರಿನ್ಸ್ ಖ್ಯಾತಿಯ ಹುಲಿಯ ಅನುಮಾನಾಸ್ಪದ ಸಾವಿನ ಪ್ರಕರಣ ಭೇದಿಸುವಲ್ಲಿ ಯಶಸ್ವಿಯಾಗಿದ್ದ. 2018ರ ಜು.7ರಂದು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಡಿ.ಬಿ.ಕುಪ್ಪೆ ವಲಯದ ವ್ಯಾಪ್ತಿಯಲ್ಲಿ ಜಿಂಕೆ ಹತ್ಯೆ ಪ್ರಕರಣದ ಅನುಮಾನಾಸ್ಪದ ವ್ಯಕ್ತಿಗಳನ್ನು ಪತ್ತೆಹಚ್ಚುವ ಜೊತೆಗೆ ಸೆ.25ರಲ್ಲಿ ಮೈಸೂರು ವಿಭಾಗದ ಹಾರೋಹಳ್ಳಿ ಗ್ರಾಮದಲ್ಲಿ ಅಕ್ರಮ ವಿದ್ಯುತ್ ಸಂಪರ್ಕದಿಂದ ವಿದ್ಯುತ್ ಪ್ರವಹಿಸಿ ಮೃತಪಟ್ಟಿದ್ದ ಹುಲಿಯನ್ನು ಕಾಡಿನ ಬಳಿ ಎಸೆದು ಹೋಗಿದ್ದ ಪ್ರಕರಣದ ಆರೋಪಿಗಳನ್ನು ಹಿಡಿಯುವಲ್ಲಿ ರಾಣಾ ನೆರವಾಗಿದ್ದ.

2018ರ ನ.21ರಂದು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಅಂತರಸಂತೆ ವಲಯದ ವ್ಯಾಪ್ತಿಯಲ್ಲಿ ಕಬಿನಿ ಹಿನ್ನೀರು ಪ್ರದೇಶದಲ್ಲಿ ಬೋಟ್‌ನ ಇಂಜಿನ್ ಅಪಹರಿಸಿದ್ದ ಆರೋಪಿಗಳ ಪತ್ತೆ ನ.22ರಂದು ಗೋಪಾಲ ಸ್ವಾಮಿ ಬೆಟ್ಟ ವಲಯ ವ್ಯಾಪ್ತಿಯ ಹಿರೀಕೆರೆ ಅರಣ್ಯ ಪ್ರದೇಶದಲ್ಲಿ ಮೃತಪಟ್ಟಿದ್ದ ಹುಲಿ ಪತ್ತೆ, ಡಿ.12ರಂದು ಮೈಸೂರು ಜಿಲ್ಲೆಯ ಹುಣಸೂರು ವಲಯ ವ್ಯಾಪ್ತಿಯಲ್ಲಿ ಹುಲಿ ಸಾವಿನ ಪ್ರಕರಣ ಪತ್ತೆಹಚ್ಚಿದ್ದ.

2019ರ ಮೇ 29ರಂದು ಗುಂಡ್ಲುಪೇಟೆ ಬಫರ್ ವಲಯದ ಪಾರ್ವತಿಬೆಟ್ಟ ಅರಣ್ಯ ಪ್ರದೇಶದ ಹುಲಿ ಮತ್ತು ಚಿರತೆಗಳು ವಿಷ ಪ್ರಾಶನ ಪ್ರಕರಣ ಭೇದಿಸಿದಲ್ಲದೆ, 2019ರ ಜೂ.2ರಂದು ಗುಂಡ್ಲುಪೇಟೆ ಬಫರ್ ವಲಯದಲ್ಲಿ ಮೃತಪಟ್ಟಿದ್ದ ಚಿರತೆ ಪ್ರಕರಣ ಪತ್ತೆ ಹಚ್ಚುವಲ್ಲಿ ರಾಣಾ ಭಾಗಿಯಾಗಿದ್ದ. ಗುಂಡ್ರೆ ವಲಯ ವ್ಯಾಪ್ತಿಯಲ್ಲಿ ಕಾಡೆಮ್ಮೆ ಕಳ್ಳಬೇಟೆ ಪ್ರಕರಣ ಹಾಗೂ ಹುಲಿಯ ಸಾವಿನ ಪ್ರಕರಣ ಪತ್ತೆ ಕಾರ್ಯ, ಗೋಪಾಲಸ್ವಾಮಿಬೆಟ್ಟ ವ್ಯಾಪ್ತಿಯಲ್ಲಿ ಉಪಟಳ ನೀಡುತ್ತಿದ್ದ ಹುಲಿ ಸೆರೆ ಕಾರ್ಯಾಚರಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ. 2020ರಲ್ಲಿ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಕಲ್ಲಳ್ಳ ವಲಯದಲ್ಲಿ ಹುಲಿ ಹತ್ಯೆ ಪ್ರಕರಣದ ಸಂಬಂಧ ಆರೋಪಿಗಳ ಪತ್ತೆ ಕಾರ್ಯ, ನಂಜನಗೂಡು ಮತ್ತು ಹೆಚ್.ಡಿ.ಕೋಟೆ ವಲಯಗಳಲ್ಲಿ ಚಿರತೆ ಸಾವಿನ ಪ್ರಕರಣ, ಮಡಿಕೇರಿ ವಿಭಾಗದ ಪೊನ್ನಂಪೇಟೆ ವಲಯದಲ್ಲಿ ಹುಲಿ ಸೆರೆ ಕಾರ್ಯಾಚರಣೆಯಲ್ಲಿ ರಾಣಾ ತನ್ನ ಕಾರ್ಯ ಕ್ಷಮತೆ ಮೆರೆದಿದ್ದ.

2021ರ ಅ.29ರಂದು ನುಗು ವನ್ಯಜೀವಿ ವಲಯ ವ್ಯಾಪ್ತಿಯಲ್ಲಿ ಶ್ರೀಗಂಧ ಅಕ್ರಮ ಕಡಿತಲೆ ಪ್ರಕರಣದ ಆರೋಪಿಗಳ ಬಂಧನ, ಹೆಡಿಯಾಲ ವಲಯದಲ್ಲಿ ಹುಲಿ ಸಾವಿನ ಪ್ರಕರಣ, 2021ರ ಜೂ.2ರಂದು ಗೋಪಾಲ ಸ್ವಾಮಿಬೆಟ್ಟ ವಲಯದ ಕುರುಬನಕಟ್ಟೆ ಅರಣ್ಯ ಪ್ರದೇಶದಲ್ಲಿ ಉರುಳು ಹಾಕಿದ್ದವರ ಪತ್ತೆಗೆ ನೆರವಾಗಿದ್ದ ಈ ಧೈರ್ಯಶಾಲಿ ಶ್ವಾನ, 2021ರ ಅ.9ರಂದು ಮೊಳೆಹೊಳೆ ವಲಯದಲ್ಲಿ ಅಕ್ರಮ ಶ್ರೀಗಂಧದ ಅಕ್ರಮ ಕಡಿತಲೆ ಪ್ರಕರಣ ಪತ್ತೆ ಹಚ್ಚಿದ್ದ. ಅಲ್ಲದೆ ಅ.14ರಂದು ಗುಂಡ್ರೆ ವಲಯದಲ್ಲಿ ಉರುಳಿನಿಂದ ಮೃತಪಟ್ಟ ಹುಲಿಯ ಸಾವಿನ ಪ್ರಕರಣ ಹಾಗೂ ನ.3ರಂದು ತಮಿಳುನಾಡಿನ ಮಧುಮಲೈ ಹುಲಿ ಸಂರಕ್ಷಿತ ಪ್ರದೇಶದ ಮಸಣಗುಡಿ ಪ್ರದೇಶದಲ್ಲಿ ಹುಲಿ ಸೆರೆ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದ ರಾಣಾ, 2022ರ ಫೆ.14ರಂದು ಆನೆಚೌಕೂರು ವಲಯದಲ್ಲಿ ಹುಲಿ ಹತ್ಯೆಗೆ ಸಂಬಂಧಿಸಿದಂತೆ ಆರೋಪಿಗಳ ಪತ್ತೆ ಮಾಡಿ ಶೌರ್ಯ ಮೆರೆದಿದ್ದ.

ಮೈಸೂರು ಮಿತ್ರ ಬುಧವಾರ 3 ಆಗಸ್ಟ್ 2022

ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಆ. 2– ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಆ. 4 ರಂದು ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆಯವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ದೂ. 0821-4259259 ಸಂಪರ್ಕಿಸಬಹುದು.

ದೀಕ್ಷಾ ಉಪನಯನ ಕಾರ್ಯಕ್ರಮ

ಮೈಸೂರು, ಆ. 2– ಮೈಸೂರಿನ ಶ್ರೀ ಶಿವಾರ್ಚಕ ಸೇವಾ ಟ್ರಸ್ಟ್ ವತಿಯಿಂದ ಆ. 25 ರಂದು ಬೆಳಗ್ಗೆ 11 ಗಂಟೆಗೆ ಶಿವಾರ್ಚಕ ಸಮುದಾಯದ ಮಕ್ಕಳಿಗೆ ದೀಕ್ಷ ಉಪನಯನ ಕಾರ್ಯಕ್ರಮ, ಪ್ರತಿಭಾ ಪುರಸ್ಕಾರ ಮತ್ತು ಶ್ರೀ ವೀರಭದ್ರೇಶ್ವರಸ್ವಾಮಿ ಜಯಂತಿ ಅಂಗವಾಗಿ ಶ್ರೀ ಸ್ವಾಮಿಯವರಿಗೆ ರುದ್ರಾಭಿಷೇಕ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಒಂದನೇ ಪುಟದಿಂದ

ವರುಣಾರ್ಭಟಕ್ಕೆ ನಲುಗಿದ ಮಂಡ್ಯ

ಜಾಗರಣೆ ಮಾಡಿದ್ದಾರೆ. **ಮುಳುಗಿದ ವಿವೇಕಾನಂದ ನಗರ:** ರಾತ್ರಿ 6.45ರಲ್ಲಿ ಪ್ರಾರಂಭಗೊಂಡ ಮಳೆ ಮಧ್ಯರಾತ್ರಿವರೆಗೂ ಧೋ ಎಂದು ಸುರಿಯಿತು. ಇದರಿಂದ ನಗರದ ಕೆರೆ ಅಂಗಳದಲ್ಲಿರುವ ವಿವೇಕಾನಂದ ಬಡಾವಣೆ ಹಾಗೂ ಪಕ್ಕದಲ್ಲೇ ಇರುವ ಬೀಡಿ ಕಾರ್ಮಿಕರ ಕಾಲೋನಿ ಸಂಪೂರ್ಣ ಜಲಾವೃತಗೊಂಡು ಕೆರೆಯಂತಾಗಿದೆ. ಬಡಾವಣೆಯ ನಿವಾಸಿಗಳ ಮನೆಗಳಿಗೆ ನೀರು ನುಗ್ಗಿದ್ದು, ಬಡಾವಣೆಯನ್ನು ಸಂಪೂರ್ಣವಾಗಿ ಜಲ ದಿಗ್ಬಂಧನ ವಿಧಿಸಿದೆ. ನಗರಸಭೆ ಹಾಗೂ ರಕ್ಷಣಾ ತಂಡ ಬೋಟ್‌ಗಳ ಮೂಲಕ ನಿವಾಸಿಗಳನ್ನು ಸುರಕ್ಷಿತ ಸ್ಥಳಕ್ಕೆ ಬಿಡಲಾಯಿತು. ನಗರಸಭೆ ಸಿಬ್ಬಂದಿ ನೀರು ಹೊರ ಹಾಕಲು ಹರಸಾಹಸಪಡುತ್ತಿದ್ದಾರೆ.

ಮನೆಯ ಮೇಲೆ ಹತ್ತಿ ಕುಳಿತ ನಿವಾಸಿಗಳು: ಮಂಡಿಯುದ್ದ ನೀರು ಮನೆಗಳಿಗೆ ನುಗ್ಗಿದ್ದರಿಂದ ಆರ್‌ಸಿಸಿ ಮನೆ ಇರುವ ನಿವಾಸಿಗಳು ಮನೆಯ ಮೇಲೆ ಹತ್ತಿ ಕುಳಿತರೆ, ಆರ್‌ಸಿಸಿ ಇಲ್ಲದ ಮನೆಯವರು ಸಂಪೂರ್ಣ ತೊಂದರೆ ಅನುಭವಿಸಿದರು. ರಾತ್ರಿಯಿಡೀ ಊಟ, ನಿದ್ರೆ ಇಲ್ಲದೆ ಸಾಕಷ್ಟು ಸಂಕಷ್ಟ ಅನುಭವಿಸಿದರು. ಬೀಡಿ ಕಾರ್ಮಿಕರ ಕಾಲೋನಿಯ ಬಹುತೇಕ ಎಲ್ಲಾ ಮನೆಗಳಿಗೂ ನೀರು ನುಗ್ಗಿದೆ. ಮನೆ ಒಳಗಡೆ ಹಾಗೂ ಹೊರಗಡೆ ಸುಮಾರು ನಾಲ್ಕು ಅಡಿಯಷ್ಟು ನೀರು ನಿಂತಿದ್ದ ದೃಶ್ಯ ಕಂಡು ಬಂದಿತು.

ವಾಹನಗಳು ಮುಳುಗಡೆ: ವಿವೇಕಾನಂದನಗರ ಹಾಗೂ ಬೀಡಿ ಕಾರ್ಮಿಕರ ಕಾಲೋನಿಯ ನಿವಾಸಿಗಳ ಮನೆ ಮುಂದೆ ನಿಲ್ಲಿಸಿದ್ದ ಬೈಕ್, ಕಾರುಗಳು ನೀರಿನಿಂದ ಮುಳುಗಡೆಯಾಗಿವೆ. ಅಲ್ಲದೆ, ಮನೆಯಲ್ಲಿದ್ದ ವಸ್ತುಗಳು ನೀರಿನಿಂದ ಜಲಾವೃತ್ತಗೊಂಡು ಚೆಲ್ಲಾಪಿಲ್ಲಿಯಾಗಿವೆ. ಇದರಿಂದ ಸಾಕಷ್ಟು ನಷ್ಟ ಅನುಭವಿಸುವಂತಾಗಿದೆ.

ಜಿಲ್ಲೆಯ ಹಲವೆಡೆ ಮಳೆಯ ಅವಾಂತರ: ಮಳೆಯಬ್ಬರಕ್ಕೆ ಮಳವಳ್ಳಿ ತಾಲೂಕು ಮಾರ್ಕಾಲು ಕೆರೆ ಕೋಡಿ ಬಿದ್ದು ಲಕ್ಷಾಂತರ ಮೀನುಗಳು ಕೊಚ್ಚಿ ಹೋಗಿವೆ. ಇದರಿಂದ ಕೆರೆ ಗುತ್ತಿಗೆ ಪಡೆದವರಿಗೆ ನಷ್ಟ ಎದುರಾಗಿದೆ.

ಶ್ರೀರಂಗಪಟ್ಟಣ ತಾಲೂಕಿನ ಕೂಡಲಕುಪ್ಪೆ ಗ್ರಾಮದ ಜಮೀನಿನ ಕಿರುನಾಲೆಯಲ್ಲಿ ವೃದ್ಧೆಯೊಬ್ಬರ ಶವ ತೇಲಿ ಬಂದಿದೆ. ಗ್ರಾಮದ ಜವರ ಎಂಬುವರ ಕೃಷಿ ಜಮೀನಿನಲ್ಲಿ ಶವ ಪತ್ತೆಯಾಗಿದೆ. ಸುಮಾರು 75 ವರ್ಷದ ವೃದ್ಧೆಯಾಗಿದ್ದು, ಮಳೆ ನೀರಿನ ರಭಸಕ್ಕೆ ಕಿರುನಾಲೆಯಲ್ಲಿ ಶವ ತೇಲಿ ಬಂದಿದೆ. ಒಟ್ಟಾರೆ ಮಂಡ್ಯದಲ್ಲಿ ಮಹಾಮಳೆಗೆ ಜಿಲ್ಲೆಯಲ್ಲಿ ಸಾಕಷ್ಟು ಅನಾಹುತಗಳಾಗಿವೆ. ರಸ್ತೆ ಹಾಗೂ ಜಮೀನುಗಳು ಸಂಪೂರ್ಣ ಜಲಾವೃತಗೊಂಡಿದ್ದು, ಜಿಲ್ಲೆ ರೈತರಿಗೆ ಸಂಕಷ್ಟ ತಂದಿಟ್ಟಿದ್ದು, ಜನರು ಹೈರಾಣಾಗಿದ್ದಾರೆ.

ಮೈಸೂರು–ಬೆಂಗಳೂರು ರಸ್ತೆ ಬಂದ್!

ಬದಲಿ ಮಾರ್ಗದ ವ್ಯವಸ್ಥೆ ಮಾಡಲಾಗಿದ್ದು, ಬೆಂಗಳೂರು ಕಡೆಯಿಂದ ಬರುವ ವಾಹನಗಳನ್ನು ಮದ್ದೂರಿನಲ್ಲೇ ತಡೆದು ಭಾರತೀನಗರ ಮೂಲಕ ಮಂಡ್ಯ ತಲುಪುತ್ತಿವೆ.

ಮೈಸೂರು ಕಡೆಯಿಂದ ಬರುವ ವಾಹನಗಳು ಮಂಡ್ಯ ಗುತ್ತಲು ರಸ್ತೆ, ಭಾರತೀನಗರ ಮೂಲಕ ಮದ್ದೂರು ತಲುಪುತ್ತಿವೆ. ಕೆರೆ ಏರಿ ಒಡೆದು ಹೋಗಿರುವ ಕಾರಣ ಸಾವಿರಾರು ಎಕರೆ ಜಮೀನು ಜಲಾವೃತಗೊಂಡಿದೆ. ಹೆದ್ದಾರಿಯಲ್ಲಿ ಮೇಲ್ಸೇತುವೆ ಕಾಮಗಾರಿ ಪ್ರಗತಿಯಲ್ಲಿದ್ದು, ನೀರು ರಸ್ತೆ ಮೇಲೆಯೇ ಹರಿಯುತ್ತಿದೆ.

ಕೊಡಗಲ್ಲಿ ಬೊಬ್ಬಿರಿಯುತ್ತಿರುವ ಮಳೆ

ಬಂದ್ ಆಗಿದೆ. ಸಂಪಾಜೆ ಗ್ರಾಮದ ಜನಾರ್ಧನ ಅವರ ಮನೆಯ ಗೋಡೆಗಳು ಬಿರುಕು ಬಿಟ್ಟಿದ್ದು, ಮನೆಗೆ ಹಾನಿ ಸಂಭವಿಸಿದೆ. ಭಾರೀ ಮಳೆ ಮತ್ತು ಅಂತರ್ ಜಲದ ಪರಿಣಾಮ ಕೊಯನಾಡು ಬಳಿ ರಾಷ್ಟ್ರೀಯ ಹೆದ್ದಾರಿ 275 ಬಿರುಕು ಬಿಟ್ಟಿದೆ. ಅಂದಾಜು 20 ಮೀಟರ್ ಉದ್ದಕ್ಕೂ ಬಿರುಕು ಮೂಡಿರುವುದು ಹೈವೇ ಸಂಚಾರಕ್ಕೆ ಸಂಚಕಾರವಾಗಿ ಪರಿಣಮಿಸಿದೆ. ಈ ಸ್ಥಳದಲ್ಲಿ 2018ರ ಪ್ರಾಕೃತಿಕ ವಿಕೋಪದ ಸಂದರ್ಭ ಸಂಪೂರ್ಣ ಹೆದ್ದಾರಿಯೇ ಕೊಚ್ಚಿ ಹೋಗಿ ರಸ್ತೆ ಸಂಚಾರ ಕೆಲ ದಿನಗಳ ಕಾಲ ಬಂದ್ ಆಗಿತ್ತು. ಇದೀಗ ಮತ್ತದೇ ಸ್ಥಳದಲ್ಲಿ ಬಿರುಕು ಮೂಡಿರುವುದು ಆತಂಕ ಮೂಡಿಸಿದೆ.

ಕಲ್ಲುಗುಂಡಿ ವರದಿ: ಕೊಡಗು–ದಕ್ಷಿಣ ಕನ್ನಡ ಗಡಿ ಗ್ರಾಮವಾದ ಕಲ್ಲುಗುಂಡಿಯಲ್ಲಿ ಆಶ್ಲೇಷಾ ಮಳೆ ಭಾರೀ ಪ್ರವಾಹ ಸೃಷ್ಟಿಸಿದ ಬಗ್ಗೆ ವರದಿಯಾಗಿದೆ. ಸೋಮವಾರ ತಡ ರಾತ್ರಿ ಆರ್ಭಟಿಸಿದ ಮಳೆಗೆ ಪಯಸ್ವಿನಿ ನದಿಯಲ್ಲಿ ಏಕಾಏಕಿ ನದಿ ಪ್ರವಾಹ ನೀರು ಉಕ್ಕೇರಿ ಹತ್ತಾರು ಮನೆಗಳು, ಅಂಗಡಿ ಮಳಿಗೆಗಳು ನೀರಿನಲ್ಲಿ ಮುಳುಗಿವೆ. ಅಂಗಡಿಗಳ ಮುಂದಿಟ್ಟಿದ್ದ ಪ್ಲಾಸ್ಟಿಕ್ ಬಾಕ್ಸ್‌ಗಳು, ಕುರ್ಚಿಗಳು ನೀರಿನಲ್ಲಿ ಕೊಚ್ಚಿ ಹೋಗಿವೆ.

ಕೋಳಿ ಮಾಂಸ ಮಾರಾಟದ ಅಂಗಡಿ ಒಂದಕ್ಕೆ ಪ್ರವಾಹ ನೀರು ನುಗ್ಗಿ ಅಂಗಡಿಯಲ್ಲಿದ್ದ ಫಾರಂ ಕೋಳಿಗಳು ಜಲಮಯವಾಗಿವೆ. ಮನೆಯ ಮುಂದೆ ನಿಲ್ಲಿಸಿದ್ದ ಕಾರೊಂದು ನದಿ ನೀರಿನಲ್ಲಿ ತೇಲಿ ಹೋಗಿ ಪಲ್ಟಿಯಾಗಿದೆ. ಭಾರೀ ಪ್ರಮಾಣದಲ್ಲಿ ಕೆಸರು ನೀರು ಮನೆಗಳು ಅಂಗಡಿಗಳಿಗೆ ನುಗಿದ್ದು, ಅಪಾರ ಹಾನಿ ಸಂಭವಿಸಿದೆ. ಪ್ರವಾಹದ ರಭಸಕ್ಕೆ ಹಲವಾರು ಮನೆಗಳ ಮೇಲ್ಚಾವಣಿ, ಮನೆಯ ಗೋಡೆಗಳು ಕುಸಿದು ಬಿದ್ದಿದೆ. ಮಡಿಕೇರಿ–ಕಲ್ಲುಗುಂಡಿ–ಮಾಣಿ ರಾಷ್ಟ್ರೀಯ ಹೆದ್ದಾರಿ 275ರ ಕಲ್ಲುಗುಂಡಿ ಸೇತುವೆ ಮೇಲೆ ಪ್ರವಾಹ ನೀರು ಹರಿದು ಕೆಲಕಾಲ ಹೆದ್ದಾರಿ ಸಂಚಾರವೇ ಬಂದ್ ಆಗಿತ್ತು ಎಂದು ವರದಿಯಾಗಿದೆ. ಪ್ರಸ್ತುತ ನದಿಯಲ್ಲಿ ನೀರಿನ ಮಟ್ಟ ಇಳಿಕೆಯಾಗಿದ್ದು, ಜನ ಜೀವನ ಸಹಜ ಸ್ಥಿತಿಗೆ ಮರಳಿದೆ.

ಬಂಡೀಪುರ 'ರಾಣಾ' ಇನ್ನಿಲ್ಲ

ರಾಣಾ ಪ್ರಾರಂಭದಲ್ಲಿಯೇ ಬಂಡೀಪುರ ವ್ಯಾಪ್ತಿಯ ಎನ್.ಬೇಗೂರು ವಲಯದಲ್ಲಿ ತೇಗದ ಮರಗಳ ಕಳ್ಳತನಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಮೂವರು ಖದೀಮರನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿತ್ತು. ನಂತರದಲ್ಲಿ ಓಂಕಾರ ವಲಯದ ವ್ಯಾಪ್ತಿಯಲ್ಲಿ ಮೂರು ಕಪ್ಪು ಚಿರತೆಗಳ ವಿಷ ಪ್ರಾಶನ ಪ್ರಕರಣವನ್ನು ಭೇದಿಸುವುದರ ಜೊತೆಗೆ ಶ್ರೀರಂಗ ಪಟ್ಟಣದಲ್ಲಿ ಶ್ರೀಗಂಧ ಕಳ್ಳರ ಪತ್ತೆ ಹಚ್ಚುವಲ್ಲೂ ಪ್ರಮುಖ ಪಾತ್ರ ವಹಿಸಿತ್ತು.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶವಲ್ಲದೇ ರಾಜ್ಯದ ವಿವಿಧ ಅರಣ್ಯ ವಿಭಾಗಗಳ ವ್ಯಾಪ್ತಿಯಲ್ಲಿ ಉಪಟಳ ನೀಡುತ್ತಿದ್ದ ಹುಲಿ, ಚಿರತೆಯಂತಹ ಪ್ರಾಣಿಗಳ ನೆಲೆ ಪತ್ತೆಹಚ್ಚಿ ಅವುಗಳ ಸೆರೆ ಹಿಡಿಯುವ ಕಾರ್ಯಾಚರಣೆಗೆ ಯಶಸ್ಸು ತಂದು ಕೊಟ್ಟಿತ್ತು.

ವಿಶೇಷವಾಗಿ ತಮಿಳುನಾಡಿನ ಮಧುಮಲೈ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಗೆ ಬರುವ ಗೂಡಲೂರಿನಲ್ಲಿ 8 ತಿಂಗಳವರೆಗೆ ಕೈಗೆ ಸಿಕ್ಕದೆ ಸತಾಯಿಸುತ್ತಿದ್ದ ನರಭಕ್ಷಕ ಹುಲಿ ಸೆರೆ ಹಿಡಿಯುವ ಕಾರ್ಯಾಚರಣೆಯಲ್ಲೂ ರಾಣಾನ ಪಾತ್ರ ಅವಿಸ್ಮರಣೀಯ.

ರಾಣಾ ತನ್ನ 7 ವರ್ಷಗಳ ಸೇವಾವಧಿಯಲ್ಲಿ 8 ಹುಲಿ, 45ಕ್ಕೂ ಹೆಚ್ಚು ಚಿರತೆ ಸಂಬಂಧಿತ ಪ್ರಕರಣಗಳು, ಹಲವಾರು ಮರಗಳ್ಳತನ, ಉರುಳು ಪತ್ತೆ ಸೇರಿದಂತೆ ತನ್ನ ಕರ್ತವ್ಯವನ್ನು ಅತ್ಯಂತ ದಕ್ಷ ಹಾಗೂ ಚಾಣಾಕ್ಷತೆಯಿಂದ ನಿರ್ವಹಿಸಿ ಶಹಬಾಸ್ ಎನಿಸಿಕೊಂಡಿತ್ತು. ತನ್ನ ತರಬೇತುದಾರನಾಗಿದ್ದ ಎಸ್‌ಟಿಪಿಎಫ್ ಸಿಬ್ಬಂದಿ ಪ್ರಕಾಶ್ ಜೊತೆ ಹೆಚ್ಚಿನ ಒಡನಾಟ ಹೊಂದಿತ್ತು. ಇಳಿ ವಯಸ್ಸಿನಲ್ಲಿಯೂ ಉತ್ತಮವಾಗಿ ಕಾರ್ಯ ನಿರ್ವಹಿಸಿದ ರಾಣಾ ನಿಧನ ಇಲಾಖೆಗೆ ದೊಡ್ಡ ನಷ್ಟವುಂಟು ಮಾಡಿದೆ ಎಂದು ಅರಣ್ಯಾಧಿಕಾರಿಗಳು ಕಂಬನಿ ಮಿಡಿದಿದ್ದಾರೆ. ಮಂಗಳವಾರ ಮಧ್ಯಾಹ್ನ ಮೇಲುಕಾಮನ ಹಳ್ಳಿಯಲ್ಲಿರುವ ಸಫಾರಿ ಟಿಕೆಟ್ ಕೇಂದ್ರದ ಬಳಿ ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತ್ಯ ಸಂಸ್ಕಾರ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಹುಲಿ ಯೋಜನೆಯ ನಿರ್ದೇಶಕ ಡಾ.ರಮೇಶ್‌ಕುಮಾರ್, ಎಸಿಎಫ್‌ಗಳಾದ ನವೀನ್, ರವೀಂದ್ರ, ಕೆ.ಪರಮೇಶ್ ಹಾಗೂ ವಿವಿಧ ವಲಯಗಳ ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ಹಾಜರಿದ್ದರು.

ಆಯ್ಮಾನ್ ಅಲ್ ಜವಾಹಿರಿ ಹತ್ಯೆ

ನಮಗೆ ಹಾನಿ ಮಾಡಲು ಬಯಸುವವರ ವಿರುದ್ಧ ಅಮೆರಿಕಾದ ಜನರನ್ನು ರಕ್ಷಿಸುವ ನಮ್ಮ ಸಂಕಲ್ಪ ಮತ್ತು ನಮ್ಮ ಸಾಮರ್ಥ್ಯವನ್ನು ಪ್ರದರ್ಶಿಸುವುದನ್ನು ಮುಂದುವರೆಸಿದ್ದೇವೆ. ಎಷ್ಟು ಸಮಯ ತೆಗೆದುಕೊಂಡರೂ ಪರವಾಗಿಲ್ಲ. ನೀವು ಎಲ್ಲಿ ಅಡಗಿಕೊಳ್ಳಲು ಪ್ರಯತ್ನಿಸಿದರೂ ಸರಿ, ನಾವು ನಿಮ್ಮನ್ನು ಬಿಡುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದೇವೆ ಎಂದು ಜೋ ಬೈಡನ್ ಗುಡುಗಿದ್ದಾರೆ. ಕಾಬೂಲ್‌ನ ನಿವಾಸದ ಬಾಲ್ಕನಿಯಲ್ಲಿ ಝುವಾಹಿರಿಯನ್ನು ಡ್ರೋನ್ ದಾಳಿಯ ಮೂಲಕ ಹತ್ಯೆ ಮಾಡಲಾಗಿದೆ. ಅಫ್ಘಾನಿಸ್ತಾನದಲ್ಲಿ ನಮ್ಮ ಪಡೆಗಳು ಈಗ ಇಲ್ಲ ಎಂದು ಅಮೆರಿಕ ಆಡಳಿತದ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ. ಝುವಾಹಿರಿಯು ಅಫ್ಘಾನಿಸ್ತಾನದ ರಾಜಧಾನಿ ಕಾಬೂಲ್‌ನಲ್ಲಿ ಇರುವುದು 2020ರಲ್ಲಿ ದೋಹಾದಲ್ಲಿ ಅಮೆರಿಕದ ಪಡೆಗಳನ್ನು ವಾಪಸ್ ಕರೆಸಿಕೊಳ್ಳುವ ಸಂದರ್ಭದಲ್ಲಿ ತಾಲಿಬಾನ್ ಜತೆ ಮಾಡಿಕೊಂಡಿದ್ದ ಒಪ್ಪಂದದ ಸ್ಪಷ್ಟ ಉಲ್ಲಂಘನೆ ಎಂದು ಅವರು ಹೇಳಿದ್ದಾರೆ. 2021ರ ಆಗಸ್ಟ್ 31ರಂದು ಅಮೆರಿಕದ ಪಡೆಗಳು ಅಫ್ಘಾನಿಸ್ತಾನದಿಂದ ವಾಪಸಾದ ಬಳಿಕ ಅಮೆರಿಕವು ಅಲ್ಲಿ ನಡೆಸಿದ ಮೊದಲ ದಾಳಿ ಇದಾಗಿದೆ. ಮೂಲತಃ ಈಜಿಪ್ಟ್‌ನವನಾಗಿದ್ದ ಜವಾಹಿರಿ ಕೈರೊದಲ್ಲಿ ಬಾಲ್ಯ ಕಳೆದಿದ್ದ. ವೃತ್ತಿಯಲ್ಲಿ ಶಸ್ತ್ರಚಿಕಿತ್ಸಕನಾಗಿದ್ದ ಆತ ನಂತರ ಹಿಂಸಾತ್ಮಕ ಮೂಲಭೂತವಾದದಲ್ಲಿ ತೊಡಗಿಸಿಕೊಂಡಿದ್ದ. 2001ರ ಸೆಪ್ಟೆಂಬರ್ 11ರ ದಾಳಿ ಬಳಿಕ ತಲೆಮರೆಸಿಕೊಂಡಿದ್ದ. ಒಸಾಮಾ ಬಿನ್ ಲಾಡೆನ್‌ನಲ್ಲಿ ಅಮೆರಿಕದ ವಿಶೇಷ ಪಡೆಗಳು 2011ರಲ್ಲಿ ಹತ್ಯೆ ಮಾಡಿದ ಬಳಿಕ ಅಲ್‌ಕೈದಾ ಉಗ್ರ ಸಂಘಟನೆಯ ಮುಖ್ಯಸ್ಥನಾಗಿದ್ದ ಝುವಾಹಿರಿ. ಆತನ ಸುಳಿವು ನೀಡಿದವರಿಗೆ 2.5 ಕೋಟಿ ಡಾಲರ್ ಇನಾಮು ಘೋಷಿಸಲಾಗಿತ್ತು.

ಮೈಸೂರಲ್ಲಿ ವರಮಹಾಲಕ್ಷ್ಮಿ ಹಬ್ಬದ ಭರ್ಜರಿ ಖರೀದಿ

ಬೆಲೆ ಏರಿಕೆ ಬಿಸಿ ಲೆಕ್ಕಿಸದೆ ಖರೀದಿ ಭರಾಟೆ





ತರಕಾರಿ ಬೆಲೆಯಲ್ಲಿ ಸಮಾಧಾನ...

ಹೂ–ಹಣ್ಣುಗಳ ಬೆಲೆ ಹೆಚ್ಚಾದರೆ ತರಕಾರಿಗಳ ಬೆಲೆ ಸಾಮಾನ್ಯವಾಗಿದ್ದು, ಗ್ರಾಹಕರಲ್ಲಿ ಕೊಂಚ ಸಮಾಧಾನ ತಂದಿದೆ. ಟೊಮ್ಯಾಟೊ ಕೆಜಿಗೆ 5–10 ರೂ., ಹಸಿ ಮೆಣಸಿನಕಾಯಿ 60 ರೂ., ದಪ್ಪ ಮೆಣಸಿಕಾಯಿ 30 ರೂ., ಬಿನಿಸ್ 20–30 ರೂ., ಕ್ಯಾರೆಟ್ 35–40 ರೂ., ಬಿಟ್‌ರೂಟ್ 30 ರೂ., ಹೂಕೋಸು 30 ರೂ., ನುಗ್ಗೆಕಾಯಿ 40 ರೂ., ಬದನೆಕಾಯಿ 30 ರೂ. ಹೀರೇಕಾಯಿ 25–30 ರೂ., ಈರುಳ್ಳಿ 20–25 ರೂ., ಬೆಳ್ಳುಳ್ಳಿ 50 ರೂ., ನಿಂಬೆಹಣ್ಣು 10 ರೂಗೆ 3–4, ತೆಂಗಿನಕಾಯಿ (ಗಾತ್ರಕ್ಕೆ ತಕ್ಕಂತೆ) 18–40 ರೂ.ವರೆಗೆ ಮಾರಾಟವಾಗುತ್ತಿದೆ.

ಮೈಸೂರು, ಆ.2(ಎಂಕೆ)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ವರಮಹಾಲಕ್ಷ್ಮಿ ಹಬ್ಬದ ಸಂಭ್ರಮ ಗರಿಗೆದರಿದ್ದು, ಹೂ–ಹಣ್ಣು, ಲಕ್ಷ್ಮಿ ಮುಖವಾಡ, ಬಳೆ, ಸೀರೆ ಇನ್ನಿತರೆ ಅಲಂಕಾರಿಕ ವಸ್ತುಗಳು ಹಾಗೂ ಪೂಜಾ ಸಾಮಗ್ರಿಗಳಿಗೆ ಭಾರೀ ಬೇಡಿಕೆ ಉಂಟಾಗಿದೆ.

ಮೂರು ದಿನಕ್ಕೂ ಮುಂಚಿತವಾಗಿಯೇ ನಗರದಲ್ಲಿನ ದೇವರಾಜ ಮಾರುಕಟ್ಟೆ, ಎಂಜಿ ರಸ್ತೆ ಮಾರುಕಟ್ಟೆ, ವಾಣಿ ವಿಲಾಸ ಮಾರುಕಟ್ಟೆ ಸೇರಿದಂತೆ ಎಲ್ಲಾ ಮಾರುಕಟ್ಟೆಗಳು ಗ್ರಾಹಕರಿಂದ ತುಂಬಿ ತುಳುಕುತ್ತಿವೆ. ಮಹಿಳೆಯರ ನೆಚ್ಚಿನ ಹಬ್ಬವಾಗಿರುವ ವರಮಹಾಲಕ್ಷ್ಮಿ ಹಬ್ಬದಂದು ಮನೆ–ಮನೆಗಳಲ್ಲಿ ವಿಶೇಷ ಅಲಂಕಾರದೊಂದಿಗೆ ಲಕ್ಷ್ಮಿ ದೇವಿಯನ್ನು ಪ್ರತಿಷ್ಠಾಪಿಸಿ ದೇವಿಯ ಅನುಗ್ರಹ ಗಳಿಸಲು ಸಿದ್ಧತೆ ನಡೆಸಲಾಗುತ್ತಿದೆ.

ಹಬ್ಬದ ಸಡಗರದ ನಡುವೆ ಹೂ–ಹಣ್ಣುಗಳ ಬೆಲೆ ಗಗನಕ್ಕೇರಿದ್ದು, ಹಬ್ಬದ ಖುಷಿಯಲ್ಲಿ ಬೆಲೆ ಏರಿಕೆಯನ್ನು ಗಮನಿಸದೆ ಖರೀದಿಗೆ ಮುಂದಾಗಿದ್ದಾರೆ. ಹೂಗಳಲ್ಲಿ ಕನಕಾಂಬರ (ಬಿಡಿ ಹೂ) ಕೆಜಿಗೆ 2800 ರೂ., ಆಗಿದ್ದು, ಹೂಗಳಲ್ಲಿಯೇ ದುಬಾರಿ ಬೆಲೆಗೆ ಮಾರಾಟವಾಗುತ್ತಿದೆ. ಇನ್ನುಳಿದಂತೆ ಮಲ್ಲಿಗೆ ಹೂವು ಕೆಜಿಗೆ 1200 ರೂ., ಮರಳೆ ಹೂವು 600 ರೂ., ಗಣಗಲೇ ಹೂವು 320–350 ರೂ., ಜಾಜಿ ಮಲ್ಲಿಗೆ 2000 ರೂ., ಸೇವಂತಿಗೆ 1 ಮಾರಿಗೆ 100–120 ರೂ. ಹಾಗೂ ತಾವರೆ ಹೂವು (ಮೀಡಿಯಂ ಗಾತ್ರದ್ದು) ಒಂದಕ್ಕೆ 40 ರೂ. ಮತ್ತು ಸಣ್ಣದಾಗಿರುವ ತಾವರೆ ಹೂವುಗಳ ಜೋಡಿಗೆ 50 ರೂನಂತೆ ಮಾರಾಟವಾಗುತ್ತಿದೆ

ದುಬಾರಿಯಾದ ಹಣ್ಣು: ಹೂವುಗಳ ಬೆಲೆ ಏರಿಕೆಗೆ ಕಡಿಮೆ ಇಲ್ಲದಂತೆ ಬೇಡಿಕೆಗೆ ಅನುಗುಣವಾಗಿ ಹಣ್ಣುಗಳ ಬೆಲೆಯೂ ಹೆಚ್ಚಳವಾಗಿದೆ. ಸೇಬು ಕೆಜಿಗೆ (ಗುಣಮಟ್ಟ ಹಾಗೂ ಗಾತ್ರಕ್ಕೆ ತಕ್ಕಂತೆ) 150–220 ರೂ., ದ್ರಾಕ್ಷಿ 240 ರೂ., ಅನಾನಸ್ 50 ರೂ., ಮೊಸಂಬಿ 100 ರೂ., ಕಿತ್ತಳೆ 200 ರೂ., ಮಾವು 240 ರೂ., ಡ್ರ್ಯಾಗನ್ ಫ್ರೂಟ್ಸ್ 250 ರೂ. ಕಿವಿ ಹಣ್ಣು (ಮೂರು ಕಿವಿ ಹಣ್ಣಿರುವ ಒಂದು ಬಾಕ್ಸ್) 100 ರೂ., ದಾಳಿಂಬೆ 160–200 ರೂ., ಮರಸೇಬು 180 ರೂ., ಸ್ಟಾರ್ ಫ್ರೂಟ್ಸ್ ಒಂದಕ್ಕೆ 20 ರೂ., ಸೀತಾಫಲ ಕೆಜಿಗೆ 80 ರೂ., ಸಪೋಟಾ 200 ರೂಗೆ ಮಾರಾಟವಾಗುತ್ತಿದೆ.

ಹಾಗೆಯೇ ಏಲಕ್ಕಿ ಬಾಳೆ ಕೆಜಿಗೆ 100–120 ರೂ., ರಸಬಾಳೆ 90–100 ರೂ. ಪಚ್ಚಬಾಳೆ 30–40 ರೂ.ಗೆ ಮಾರಾಟ ಮಾಡಲಾಗುತ್ತಿದೆ. ಬೋಟಿ ಬಜಾರ್‌ನಲ್ಲಿರುವ ಹೇಮಚಂದ್ರ ಬಾಳೆ ಮಂಡಿಯಲ್ಲಿ ಏಲಕ್ಕಿ ಬಾಳೆಹಣ್ಣು ಕೆಜಿಗೆ 90(ಹೋಲ್‌ಸೇಲ್) ರೂ.ಗೆ ಹರಾಜಾಗಿದ್ದು, ಕಳೆದ ಎರಡ್ಮೂರು ವರ್ಷಗಳ ಬಳಿಕ ಹೆಚ್ಚು ಬೆಲೆಗೆ ಏಲಕ್ಕಿ ಬಾಳೆ ಮಾರಾಟವಾಗಿದೆ ಎಂದು ದೇವರಾಜ ಮಾರುಕಟ್ಟೆ ಬಾಳೆಹಣ್ಣಿನ ವ್ಯಾಪಾರಿ ಶಿವಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಲಕ್ಷ್ಮಿ ಮುಖವಾಡ, ಬಳೆ ಆಕರ್ಷಣೆ: ಮನೆ–ಮನೆಯಲ್ಲೂ ಲಕ್ಷ್ಮಿ ಕೂರಿಸುವುದರಿಂದ ದೇವಿಯ ಅಲಂಕಾರಕ್ಕೆ ಅಗತ್ಯವಿರುವ ಲಕ್ಷ್ಮಿ ಮುಖವಾಡ, ಬಣ್ಣ ಬಣ್ಣದ ಬಳೆಗಳು, ಸೀರೆ ಹಾಗೂ ಅಲಂಕಾರಿಕ ಒಡವೆಗಳು ಎಲ್ಲರ ಆಕರ್ಷಣೆಯಾಗಿದೆ. ಮಹಿಳೆಯರು ತಮ್ಮ ಆರ್ಥಿಕ ಸ್ಥಿತಿಗನುಗುಣವಾಗಿ ಚಿನ್ನ, ಬೆಳ್ಳಿ, ವೈಟ್ ಮೆಟಲ್ ಹಾಗೂ ಇನ್ನಿತರೆ ವಸ್ತುಗಳಿಂದ ತಯಾರಿಸಿರುವ ಲಕ್ಷ್ಮಿ ಮುಖವಾಡ ಖರೀದಿಗೆ ಮುಂದಾಗಿದ್ದಾರೆ. ಲಕ್ಷ್ಮಿದೇವಿ ಅನುಗ್ರಹ ನೀಡಿದರೆ ಮುಂದಿನ ವರ್ಷ ಇನ್ನಷ್ಟು ದುಬಾರಿ ಮುಖವಾಡ ಖರೀದಿಸುತ್ತೇವೆ ಎಂದು ಕೆಲವರು ತಿಳಿಸಿದರು.

ಮಳೆ ಕಾಟ: ಮೈಸೂರಿನಲ್ಲಿ ನಿರಂತರ ಮಳೆಯಾಗುತ್ತಿರುವುದು ಕೆಲವರಿಗೆ ಬೇಸರ ತಂದಿದೆ. ಹಬ್ಬದ ದಿನಗಳಲ್ಲಿ ಮಳೆ ಸುರಿದರೆ ಅಗತ್ಯ ವಸ್ತುಗಳನ್ನು ಖರೀದಿ ಮಾಡಲು ಹಾಗೂ ಹಬ್ಬ ಆಚರಿಸಲು ಕಷ್ಟವಾಗುತ್ತದೆ. ಅಕ್ಕ–ಪಕ್ಕದ ಮನೆಯವರು, ನೆಂಟರನ್ನು ಕರೆಯುವುದು ಕಷ್ಟ ಆದ್ದರಿಂದ ಒಂದಷ್ಟು ದಿನ ಮಳೆ ನಿಂತರೆ ಒಳ್ಳೆಯದು ಎನ್ನುತ್ತಿದ್ದಾರೆ.

ಶ್ರಾವಣ ಮಾಸ: ಆಷಾಢ ಮುಗಿದು ಶ್ರಾವಣ ಮಾಸ ಬಂದಿದ್ದು, ಹಬ್ಬಗಳ ಸರಣಿಯೇ ಶುರುವಾಗಿದೆ. ನಾಗರ ಪಂಚಮಿ, ಶ್ರಾವಣ ಶನಿವಾರ, ವರಮಹಾಲಕ್ಷ್ಮಿ ಹಬ್ಬ, ಗೌರಿ–ಗಣೇಶನ ಹಬ್ಬ ಹೀಗೆ ಶ್ರಾವಣ ಮಾಸದಲ್ಲಿ ಸಾಲು ಸಾಲು ಹಬ್ಬಗಳಿವೆ. ಅಲ್ಲದೆ ಮದುವೆ, ನಾಮಕರಣ ಹೀಗೆ ನಾನಾ ಶುಭ ಸಮಾರಂಭಗಳು ಜೋರಾಗಿಯೇ ನಡೆಯುತ್ತವೆ. ಹೀಗಾಗಿ ಮಾರುಕಟ್ಟೆಯಲ್ಲಿ ಜನಸಂದಣಿ ಹೆಚ್ಚಾದಂತೆ ಅಗತ್ಯ ವಸ್ತುಗಳ ಬೆಲೆಯೂ ಹೆಚ್ಚಾಗುತ್ತದೆ.

ದಸರಾ ಗಜಪಡೆ ಆಶ್ರಯಕ್ಕೆ ಶೆಡ್ ನಿರ್ಮಾಣ

● ಕ್ಯಾಪ್ಟನ್ ಅಭಿಮನ್ಯು ಆನೆಗೆ ಪ್ರತ್ಯೇಕ ಶೆಡ್ ● ಮೊದಲ ಹಂತದ 9 ಆನೆಗಳ ಮಾವುತ, ಕಾವಾಡಿಗಳ ವಾಸಕ್ಕೂ ಶೆಡ್ ನಿರ್ಮಾಣ



ಅಗತ್ಯ ಕ್ರಮ ಕೈಗೊಳ್ಳಲಾಗಿದೆ

ಮೊದಲ ತಂಡದಲ್ಲಿ 9 ಆನೆಗಳನ್ನು ಆ.7ರಂದು ಮೈಸೂರಿಗೆ ಕರೆತರಲಾಗುತ್ತಿದೆ. ಆ.10ರಂದು ಅರಮನೆಗೆ ಗಜಪಡೆ ಆಗಮಿಸಲಿದೆ ಈ ಹಿನ್ನೆಲೆಯಲ್ಲಿ ಶೆಡ್ ನಿರ್ಮಾಣ, ಆನೆಗಳಿಗೆ ಪೌಷ್ಟಿಕ ಆಹಾರ ತಯಾರಿಕೆಗಾಗಿ ಅಡುಗೆ ಮನೆ ನಿರ್ಮಾಣ, ಆಹಾರ ಪೂರೈಕೆಗೆ ಕ್ರಮ ಸೇರಿದಂತೆ ವಿವಿಧ ವ್ಯವಸ್ಥೆಗಳಿಗೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

- ಡಾ.ವಿ.ಕರಿಕಾಳನ್, ಡಿಸಿಎಫ್

ಮೈಸೂರು, ಆ.2(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆ ಗಜಪಡೆಯ ಮೊದಲ ತಂಡ ಆಗಮನಕ್ಕೆ ದಿನಗಣನೆ ಆರಂಭವಾಗಿದೆ. ಮೈಸೂರು ಅರಮನೆಯ ಆವರಣದಲ್ಲಿ ಆನೆಗಳು, ಅವುಗಳ ಮಾವುತರು, ಕಾವಾಡಿಗಳ ವಾಸ್ತವ್ಯಕ್ಕೆ ಶೆಡ್ ನಿರ್ಮಾಣ ಕಾರ್ಯ ಆರಂಭವಾಗಿದೆ.

ಮೊದಲ ತಂಡದಲ್ಲಿ ಮೈಸೂರಿಗೆ ಆ.7ರಂದು ಬರುತ್ತಿರುವ 9 ಆನೆ ಒಳಗೊಂಡ ಗಜಪಡೆ ಹಾಗೂ ಅವುಗಳ ಮಾವುತ, ಕಾವಾಡಿಗಳಿಗೆ ವಾಸ್ತವ್ಯಕ್ಕೆ ಈಗಾಗಲೇ ಶೆಡ್ ನಿರ್ಮಾಣಕ್ಕೆ ತಫಜುಲ್ಲಾ ಎಂಬುವರಿಗೆ ಟೆಂಡರ್ ನೀಡಲಾಗಿದ್ದು, ಶೆಡ್ ನಿರ್ಮಾಣ ಕಾರ್ಯ ಆರಂಭವಾಗಿದೆ. ಮೊದಲ ಹಂತದಲ್ಲಿ ಕರೆತರುವ ಆನೆಗಳಲ್ಲಿ ಅಂಬಾರಿ ಹೊರುವ ಅಭಿಮನ್ಯು, ಅದರೊಂದಿಗೆ ಒಂದು ಕುಮ್ಕಿ ಹೆಣ್ಣಾನೆಗೆ ಪ್ರತ್ಯೇಕವಾಗಿ 40X80 ಅಡಿಯ ಶೆಡ್ ನಿರ್ಮಾಣ ಪ್ರಕ್ರಿಯೆ ಭರದಿಂದ ಸಾಗುತ್ತಿದೆ. ಇದರೊಂದಿಗೆ ಮಾವುತರು, ಕಾವಾಡಿಗಳು ಹಾಗೂ ಸಹಾಯಕರಿಗಾಗಿ ಒಟ್ಟು 24 ಶೆಡ್ ನಿರ್ಮಾಣ ಮಾಡಲಾಗುತ್ತಿದೆ. ಆ.7ರಂದು ಮೈಸೂರಿಗೆ ಗಜಪಡೆಯ ಮೊದಲ ತಂಡ ಆಗಮಿಸುತ್ತಿದ್ದು, ಆ.10ರಂದು ಆನೆಗಳು ಅರಮನೆ ಆವರಣ ಪ್ರವೇಶಿಸಲಿವೆ. ಈ ಹಿನ್ನೆಲೆಯಲ್ಲಿ ಆ.7ರೊಳಗೆ ಶೆಡ್ ನಿರ್ಮಾಣಕ್ಕೆ ಸೂಚಿಸಲಾಗಿದೆ. ಈ ಹಿನ್ನೆಲೆಯಲ್ಲಿ ಶೆಡ್ ನಿರ್ಮಾಣ ಮಾಡಲಾಗುತ್ತಿದೆ.

ಎರಡು ವರ್ಷದ ನಂತರ ಈ ಬಾರಿ ಅದ್ಧೂರಿಯಾಗಿ ದಸರಾ ಮಹೋತ್ಸವವನ್ನು ಆಚರಿಸಲು ನಿರ್ಧರಿಸಿರುವುದರಿಂದ ಈ ಬಾರಿ ಮಾವುತರು, ಕಾವಾಡಿಗಳ ಮಕ್ಕಳಿಗಾಗಿ ಟೆಂಟ್ ಶಾಲೆ ಆರಂಭಿಸಲು ಹಾಗೂ ಪಂಚಕರ್ಮ ಚಿಕಿತ್ಸಾ ಕೇಂದ್ರ ಗ್ರಂಥಾಲಯ ಹಾಗೂ ಆನೆಗಳಿಗೆ ಪೌಷ್ಟಿಕ ಆಹಾರ ತಯಾರಿಕೆಗೂ ಪ್ರತ್ಯೇಕ ಶೆಡ್ ನಿರ್ಮಿಸಲಾಗುತ್ತಿದೆ.

ಜೆಎಸ್‌ಎಸ್ ಆಯುರ್ವೇದ ವಿದ್ಯಾಲಯದಲ್ಲಿ ಆಯುಷ್ ಔಷಧಿಗಳ ಮಹತ್ವ ಅರಿಯುವ ಸಂಬಂಧ ಕಾರ್ಯಾಗಾರ



ಮೈಸೂರು,ಆ.2(ಎಂಟಿವೈ)– ಮೈಸೂರಿನ ಜೆಎಸ್‌ಎಸ್ ಆಯುರ್ವೇದ ಮಹಾ ವಿದ್ಯಾಲಯದಲ್ಲಿ 'ಕ್ಲಿನಿಕಲ್ ಟ್ರಯಲ್ಸ್ ಆನ್ ಆಯುಷ್ ಡ್ರಗ್ಸ್' ಕುರಿತ ಒಂದು ದಿನದ ಕಾರ್ಯಾಗಾರ ನಡೆಯಿತು.

ಆಯುರ್ವೇದ ಕಾಲೇಜಿನ ಸಭಾಂಗಣದಲ್ಲಿ ನಡೆದ ಕಾರ್ಯಾಗಾರವನ್ನು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟ್‌ಸೂರ್ ಮಠ ಉದ್ಘಾಟಿಸಿದರು. ಬಳಿಕ ಮಾತನಾಡಿ, ಆಯುಷ್ ಔಷಧಿಗಳ ಮಹತ್ವ ಇತ್ತೀಚೆಗೆ ಎಲ್ಲರಿಗೂ ಅರಿವಾಗುತ್ತಿದೆ. ಇಂತಹ ಸಂದರ್ಭದಲ್ಲಿ ಸಂಸ್ಕರಿತ ಔಷಧಿಗಳ ಸಂಶೋಧನೆಗಳು ಹಾಗೂ ಹೊಸ ರೋಗಗಳಿಗೆ ಔಷಧಿಗಳ ಸಂಶೋಧನೆ ಅಗತ್ಯವಿದೆ. ಸಮೀಕ್ಷೆಯೊಂದರ ವರದಿಯಂತೆ ವಿಶ್ವದಲ್ಲಿ ಶೇ.59ರಷ್ಟು ರೋಗಿಗಳು ಆಯುರ್ವೇದ ಔಷಧಿಗಳನ್ನು ಬಳಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಇನ್ನಷ್ಟು ಮಂದಿಗೆ ಆಯುರ್ವೇದದ ಮಹತ್ವ ತಿಳಿಸುವ ಕೆಲಸವಾಗಬೇಕು. ಹೊಸ ಆವಿಷ್ಕಾರಗಳ ಬಗ್ಗೆ ಸಂಶೋಧನೆ ಮುಂದುವರೆಸುವಂತೆ ಸಲಹೆ ನೀಡಿದರು.

ಇದೇ ವೇಳೆ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ಕುಲಪತಿ ಡಾ. ಸುರಿಂದರ್ ಸಿಂಗ್ ಮಾತನಾಡಿ, ಆಯುರ್ವೇದ ವೈದ್ಯಕೀಯ ಶಿಕ್ಷಣ ಹಾಗೂ ಚಿಕಿತ್ಸಾ ಪದ್ಧತಿ ಇತ್ತೀಚೆಗೆ ಗಮನ ಸೆಳೆದಿದೆ. ಆವಿಷ್ಕಾರದಲ್ಲಿ ಸಂಶೋಧನಾತ್ಮಕ ಗುಣಮಟ್ಟದ ಅಂಶಗಳನ್ನು ಅಳವಡಿಸಿಕೊಳ್ಳಬೇಕು. ವಿಶ್ವ ಆರೋಗ್ಯ ಸಂಸ್ಥೆಯ ಅನು ಮೋದನೆಯೊಂದಿಗೆ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಕೇಂದ್ರ, ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಊಟಿಯಲ್ಲಿ ರುವ ಜೆಎಸ್‌ಎಸ್ ಫಾರ್ಮಸಿ ಕಾಲೇಜುಗಳ ಸಂಯುಕ್ತಾಶ್ರಯದಲ್ಲಿ ಮೈಸೂರಿನಲ್ಲಿ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್.ಮಹೇಶ್, ಪ್ರಾಂಶುಪಾಲ ಡಾ.ಸರ್ಬೇಸ್ವರ್‌ಕರ್ ಮಾತನಾಡಿದರು. ಕಾರ್ಯಾಗಾರದಲ್ಲಿ ದೇಶದ ವಿವಿಧೆಡೆಗಳಿಂದ ಆಗಮಿಸಿದ್ದ ಸಂಪನ್ಮೂಲ ವ್ಯಕ್ತಿಗಳು– ಡಾ.ಕೆ.ಬಂಗಾರು ರಾಜನ್, ಡಾ.ಡಿ.ರಾಯ್, ಡಾ.ಡಿ.ಸಿ.ಕಟೋಚ್, ಡಾ.ಪ್ರದೀಪ್ ದುವಾ, ಡಾ.ರಾಜೇಶ್ ಕುಮಾವಟ್, ಡಾ.ಸುಬರ್ಣ ರಾಯ್ ಮತ್ತು ಡಾ. ಎ. ರಾಮಕಿಸನ್ ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಕಾಲೇಜಿನ ಡೀನ್ ಡಾ. ರಾಜೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರೆ, ಡಾ. ರಶ್ಮಿ ಹಾಗೂ ತಂಡದ ಸದಸ್ಯರು ಪ್ರಾರ್ಥಿಸಿದರು.

ಕಾಮನ್‌ವೆಲ್ತ್ ಗೇಮ್ಸ್ 2022: ಲಾನ್ ಬೌಲ್ಸ್‌ನಲ್ಲಿ ಭಾರತಕ್ಕೆ ಮತ್ತೊಂದು ಚಿನ್ನ

ಬರ್ಮಿಂಗ್ ಹ್ಯಾಮ್: ಕಾಮನ್ವೆಲ್ತ್ ಗೇಮ್ಸ್‌ನಲ್ಲಿ ಭಾರತದ ಪದಕ ಬೇಟೆ ಮುಂದುವರೆದಿದ್ದು, ಐದನೇ ದಿನವಾದ ಮಂಗಳವಾರ ಅಪರೂಪದ ಕ್ರೀಡೆಯಾದ ಲಾನ್ ಬೌಲ್ಸ್‌ನಲ್ಲಿ ಭಾರತದ ಮಹಿಳೆಯರ ತಂಡ ಮೊದಲ ಬಾರಿ ಚಿನ್ನ ಗೆಲ್ಲುವ ಮೂಲಕ ಹೊಸ ಇತಿಹಾಸ ಸೃಷ್ಟಿಸಿದೆ. ಇಂದು ನಡೆದ ಲಾನ್ ಬೌಲ್ಸ್ ಪಂದ್ಯದ ಫೈನಲ್‌ನಲ್ಲಿ ಭಾರತದ ವನಿತಾ ತಂಡ ದಕ್ಷಿಣ ಆಫ್ರಿಕಾವನ್ನು 17–10 ಅಂತರದಿಂದ ಮಣಿಸಿ ಐತಿಹಾಸಿಕ ಚಿನ್ನದ ಪದಕವನ್ನು ತನ್ನದಾಗಿಸಿಕೊಂಡಿದೆ. ಇದರೊಂದಿಗೆ ಭಾರತ ಕಾಮನ್ವೆಲ್ತ್ ಗೇಮ್ಸ್‌ನಲ್ಲಿ ಇಂದು ನಾಲ್ಕನೇ ಚಿನ್ನದ ಪದಕವನ್ನು ಜಯಿಸಿದೆ. ಈಗಾಗಲೇ 4 ಚಿನ್ನ, 3 ಬೆಳ್ಳಿ ಹಾಗೂ ಕಂಚು ಸಹಿತ 10 ಪದಕಗಳನ್ನು ಜಯಿಸಿ ಪದಕ ಪಟ್ಟಿಯಲ್ಲಿ ಆರನೇ ಸ್ಥಾನದಲ್ಲಿದೆ.

ಮೈಸೂರಲ್ಲಿ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಣೆ

ಮಲ್ಲಮ್ಮನ ಆದರ್ಶ ಬದುಕಿನ ಬಗ್ಗೆ ಸ್ಮರಣೆ



ಮೈಸೂರು,ಆ.2(ಎಂಟಿವೈ)– ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಮಂಗಳವಾರ ಜಿಲ್ಲಾಡಳಿತದ ವತಿಯಿಂದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಿಸಲಾಯಿತು. ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಜಯಂತ್ಯೋತ್ಸವ ಸಮಿತಿ ವತಿಯಿಂದ ಆಯೋಜಿಸಿದ್ದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಕಾರ್ಯಕ್ರಮವನ್ನು ಅಪರ ಜಿಲ್ಲಾಧಿಕಾರಿ ಡಾ.ಬಿ.ಎಸ್.ಮಂಜುನಾಥ ಸ್ವಾಮಿ ಹೇಮರೆಡ್ಡಿ ಮಲ್ಲಮ್ಮರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಚಾಲನೆ ನೀಡಿದರು.

ಇದೇ ವೇಳೆ ಸಾಹಿತಿ ಡಾ. ಕಬ್ಬಿನಾಲೆ ವಸಂತ ಭಾರಧ್ವಾಜ್ ಉಪನ್ಯಾಸ ನೀಡಿ, ಪ್ರಸ್ತುತ ಸಂದರ್ಭದಲ್ಲಿ ಜನರು ಭೋಗ, ಲಾಲಸೆಯಿಂದ ಕೂಡಿದ ಸ್ವಾರ್ಥಪರ ಚಿಂತನೆಗಳಲ್ಲಿ ಮಗ್ನರಾಗಿದ್ದಾರೆ. ಅವುಗಳ ನಿಯಂತ್ರಣಕ್ಕೆ ಹೇಮರೆಡ್ಡಿ ಮಲ್ಲಮ್ಮ ಅವರನ್ನು ಮಾದರಿಯಾಗಿ ಸ್ವೀಕರಿಸಬೇಕು. ಹೇಮರೆಡ್ಡಿ ಎಂಬ ಸಿರಿವಂತನ ಸೊಸೆಯಾಗಿದ್ದ ಮಲ್ಲಮ್ಮ ಕೂಲಿ ಕಾರ್ಮಿಕರಂತೆ ಕೆಲಸ ಮಾಡಿದರು. ಅವರು ದೇವರ ಅನುಗ್ರಹ ಸಂಪಾದಿಸಿದ ರೀತಿ, ಮಲ್ಲಮ್ಮನನ್ನು ಕೆಟ್ಟದಾಗಿ ನಡೆಸಿಕೊಂಡ ಮಾವನ ಮನೆಯವರಿಗೆಲ್ಲ ಬಂದೊದಗುವ ಕಷ್ಟದ ಪರಿಸ್ಥಿತಿ, ನಂತರ ಅವರು ತಾವು ಮಾಡಿದ ತಪ್ಪನ್ನು ಅರ್ಥ ಮಾಡಿಕೊಳ್ಳುವ ಮೂಲಕ ಹೊಸ ಜೀವನವನ್ನು ಆರಂಭಿಸುವುದು. ಒಮ್ಮೆ ದೇವರು ಮಲ್ಲಮ್ಮನ ಭಕ್ತಿಗೆ ಮೆಚ್ಚಿ ಹೊನ್ನು ನೀಡಿದರೂ ಆಕೆ ಅದನ್ನು ತಿರಸ್ಕರಿಸಿ, ಅದನ್ನು ಬೇಕಾಗಿರುವವರಿಗೆ ನೀಡು, ನನಗೆ ನಿನ್ನ ಅನುಗ್ರಹವಷ್ಟೇ ಸಾಕು ಎಂದು ಹೇಳುತ್ತಾರೆ. ಮಲ್ಲಮ್ಮನ ಜೀವನವನ್ನು ತಿಳಿಸುವ ಈ ಚರಿತ್ರೆಯು ಇಂದಿನ ಮನುಕುಲಕ್ಕೆ ಮಾದರಿಯಾಗಿದೆ ಎಂದರು.

ದ್ಯಾಮಪುರದ ಚೆನ್ನ ಕವಿಯು ಮಲ್ಲಮ್ಮನ ಚರಿತ್ರೆಯನ್ನು ರಚಿಸಿ ಇಂದಿಗೆ 100 ವರ್ಷಗಳೇ ಆಗಿದೆ. ಹಾಗಾಗಿ, ಇದು ಮಲ್ಲಮ್ಮನ ಚರಿತ್ರೆ ಎಂಬ ಕೃತಿಯ ಶತಮಾನೋತ್ಸವ ಕಾರ್ಯಕ್ರಮವೂ ಆಗುತ್ತದೆ. ಈ ಕೃತಿ 7 ಸಾವಿರ ಮುದ್ರಣ ಕಂಡಿದೆ. 600 ವರ್ಷಗಳ ಹಿಂದೆಯೇ ಮಲ್ಲಮ್ಮ ಮಹಾ ಸಾಧನೆ ಮಾಡಿದ ಮಹಾಶರಣೆ. ಆಕೆಯು ಪ್ರತಿಪಾದಿಸಿದ ಸಂಸಾರ ಮತ್ತು ಬದುಕಿನ ಮೌಲ್ಯಗಳನ್ನು ಪ್ರತಿಯೊಬ್ಬರೂ ಅರಿಯುವ ಅಗತ್ಯವಿದೆ. ಮಲ್ಲಮ್ಮ ಮೃದು ಮನಸ್ಸಿನ ಸೌಮ್ಯ ಸ್ವಭಾವದ ಹೆಣ್ಣು ಮಗಳು. ತನ್ನ ಗಂಡನ ಮನೆಯಲ್ಲಿ ಆಕೆಗೆ ಅತ್ತೆ ಮತ್ತು ವಾರಗಿತ್ತಿಯರು ಎಷ್ಟೇ ಕಷ್ಟ ನೀಡಿದರೂ, ಅದನ್ನು ಸಹಿಸಿಕೊಂಡಳು, ಅವರಿಗೆ ಎಂದೂ ಕೆಟ್ಟದ್ದು ಬಯಸಲಿಲ್ಲ ಎಂದು ಸ್ಮರಿಸಿದರು

ಕಾರ್ಯಕ್ರಮದಲ್ಲಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಭಾವಚಿತ್ರಕ್ಕೆ ಗಣ್ಯರು ಪುಷ್ಪನಮನ ಸಲ್ಲಿಸಿದರು. ನಿಸರ್ಗ ಮತ್ತು ವಿಸ್ಮಯ (ಅವಳಿ ಸಹೋದರಿಯರ) ತಂಡದ ವತಿಯಿಂದ ಗೀತ ಗಾಯನ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಎಂ.ಕೆ.ಶ್ರೀನಿವಾಸ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮುಖಂಡರಾದ ವಾಮದೇವ, ತಿಪ್ಪೇಸ್ವಾಮಿ, ಶಿವಲಿಂಗ ಸ್ವಾಮಿ, ಹೇಮರೆಡ್ಡಿ, ಮಹಂತೇಶ್ ಇತರರು ಉಪಸ್ಥಿತರಿದ್ದರು.

ಭಾರತೀಯ ಸೇನೆ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು, ಆ.2– ಜಿಲ್ಲಾಧಿಕಾರಿಗಳ ಕಾರ್ಯಾಲಯ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಭಾರತೀಯ ಸೇನೆ ಇತರೆ ಯೂನಿಫಾರ್ಮ್ ಸೇವೆಗಳಿಗೆ ಸೇರ ಬಯಸುವ ಜಿಲ್ಲೆಯ ಹಿಂದುಳಿದ ವರ್ಗಗಳ ಪ್ರವರ್ಗ–1, 2(A), 3(A), 3(B) ಸೇರಿದ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಹತ್ತನೇ ತರಗತಿಯಲ್ಲಿ ಉತ್ತೀರ್ಣರಾಗಿದ್ದು, ಪ್ರತಿ ವಿಷಯದಲ್ಲಿ ಕನಿಷ್ಠ 33 ಅಂಕಗಳನ್ನು ಪಡೆದಿರಬೇಕು. ಅರ್ಜಿ ನಮೂನೆಯನ್ನು ಹಾಗೂ ಇಲಾಖೆಯ https://bcwd.karnataka.gov.in ವೆಬ್‌ಸೈಟ್ ಮೂಲಕ ಮಾಹಿತಿ ಪಡೆಯಬಹುದು ಹಾಗೂ ಭರ್ತಿ ಮಾಡಿದ ಅರ್ಜಿಗಳನ್ನು 2022ರ ಆಗಸ್ಟ್ 16ರ ಒಳಗಾಗಿ ಸಲ್ಲಿಸಲು ತಿಳಿಸಿದೆ

ಹೆಚ್ಚಿನ ಮಾಹಿತಿಗಾಗಿ ಹೆಚ್ಚಿನ ಮಾಹಿತಿಗಾಗಿ ದಕ್ಷಿಣ ಕನ್ನಡ ಜಿಲ್ಲೆ ದೂರವಾಣಿ ಸಂಖ್ಯೆ: 0824–2225078, ಉಡುಪಿ ಜಿಲ್ಲೆ ದೂ ಸಂ: 0820–2574881 ಉತ್ತರ ಕನ್ನಡ ದೂ ಸಂ : 08382–226589, ಕೇಂದ್ರ ಕಚೇರಿ ದೂ ಸಂ :8050770004 ಅನ್ನು ಸಂಪರ್ಕಿಸಬಹುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೋಟೆಯಲ್ಲಿ ಶೀಘ್ರ ನಂದಿನಿ ಭವನ ನಿರ್ಮಾಣ

ಮೈಮುಲ್ ನಿರ್ದೇಶಕ ಈರೇಗೌಡ ಮಾಹಿತಿ



ಹೆಚ್.ಡಿ.ಕೋಟೆ, ಆ.2– ಹಾಲು ಉತ್ಪಾದಕರ ಕುಟುಂಬದವರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಪಟ್ಟಣದಲ್ಲಿ ಶೀಘ್ರ ನಂದಿನಿ ಭವನ ನಿರ್ಮಾಣ ಮಾಡಲಾಗುವುದು ಎಂದು ಮೈಮುಲ್ ನಿರ್ದೇಶಕ ಈರೇಗೌಡ ಮಾಹಿತಿ ನೀಡಿದರು.

ತಾಲೂಕಿನ ಹ್ಯಾಂಡ್‌ಪೋಸ್ಟ್‌ನಲ್ಲಿರುವ ಮೈಮುಲ್ ಉಪ ಕಚೇರಿಯಲ್ಲಿ ಆಯೋಜಿಸಿದ್ದ ಒಂದು ದಿನದ ವಿಶೇಷ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕೋಟೆ–ಸರಗೂರು ತಾಲೂಕಿನಲ್ಲಿ ಸುಮಾರು 160 ಹಾಲು ಉತ್ಪಾದಕರ ಮಹಿಳಾ ಸಂಘಗಳಿದ್ದು, ಮುಂದಿನ ದಿನಗಳಲ್ಲಿ ಹಾಲು ಉತ್ಪಾದಕರ ಕುಟುಂಬದವರು ಸಭೆ ಸಮಾರಂಭ ನಡೆಸಲು ಅನುಕೂಲವಾಗುವ ನಿಟ್ಟಿನಲ್ಲಿ ನಂದಿನಿ ಭವನ ನಿರ್ಮಾಣ ಮಾಡಲಾಗುವುದು ಎಂದರು.

ರೈತರು ಸಂಘಕ್ಕೆ ಗುಣಮಟ್ಟದ ಹಾಲನ್ನು ಪೂರೈಕೆ ಮಾಡಬೇಕು ಎಂದು ಒತ್ತಾಯಿಸಿದ ಅವರು, ಗುಣಮಟ್ಟದ ಹಾಲು ಪೂರೈಕೆಯಲ್ಲಿ ಹೆಚ್.ಡಿ.ಕೋಟೆ ತಾಲೂಕು ಜಿಲ್ಲೆಯಲ್ಲೇ 2ನೇ ಸ್ಥಾನದಲ್ಲಿದ್ದು, ಮುಂಬರುವ ದಿನಗಳಲ್ಲಿ ಮೊದಲ ಸ್ಥಾನ ಪಡೆಯಲು ಪ್ರಯತ್ನಿಸಬೇಕು ಎಂದರು.

ಕೆಲವು ಡೈರಿಗಳ ಕಾರ್ಯದರ್ಶಿಗಳು ಉತ್ತಮವಾಗಿ ಕಾರ್ಯನಿರ್ವಹಿಸುವ ಮೂಲಕ ಸಂಘದ ಏಳಿಗೆಗಾಗಿ ದುಡಿಯುತ್ತಿದ್ದಾರೆ. ಆದರೆ ಕೆಲ ಕಿಡಿಗೇಡಿಗಳು ಸಂಘದಲ್ಲಿ ಒಡಕು ತರುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಅಂತವರಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ತಾಲೂಕಿನಲ್ಲಿ ಕಾರ್ಯದರ್ಶಿಗಳ ಸಂಘ ಮಾಡಿಕೊಂಡು ಒಗ್ಗಟ್ಟಿನ ಬಲ ತೋರಬೇಕು. ಎಷ್ಟೋ ಗ್ರಾಮಗಳಲ್ಲಿ ಉತ್ತಮವಾಗಿ ನಡೆಯುತ್ತಿದ್ದ ಹಾಲು ಉತ್ಪಾದಕರ ಸಂಘಗಳಿಗೆ ಬೀಗ ಹಾಕಿಸುವ ಕೆಲಸ ನಡೆಯುತ್ತದೆ. ಇದಕ್ಕೆ ಆಸ್ಪದವಾಗದಂತೆ ಉತ್ತಮ ರೀತಿಯಲ್ಲಿ ಗುಣಮಟ್ಟದ ಹಾಲನ್ನು ಶೇಖರಿಸಿ ಸಂಘಗಳನ್ನು ಬಲಿಷ್ಠಗೊಳಿಸುವ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ತಾಲೂಕಿನ 160 ಡೈರಿ ಕಾರ್ಯದರ್ಶಿಗಳು ಪಾಲ್ಗೊಂಡಿದ್ದರು. ಇವರಿಗೆ ಶುದ್ಧ ಹಾಲು ಉತ್ಪಾದನೆ ಹಾಗೂ ಹೈನುಗಾರಿಕೆ ನಿರ್ವಹಣೆ, ಸಮಯ ಮತ್ತು ಒತ್ತಡ ನಿರ್ವಹಣೆ ಹಾಗೂ ಶುದ್ಧ ಹಾಲು ಉತ್ಪಾದನೆಯಲ್ಲಿ ಪರ್ಯಾಯ ಚಿಕಿತ್ಸಾ ಪದ್ಧತಿಗಳ ಪ್ರಾಮುಖ್ಯತೆ ನೀಡುವ ಬಗ್ಗೆ ವಿಶೇಷ ತರಬೇತಿ ನೀಡಲಾಯಿತು. ಅಲ್ಲದೆ ಇದೇ ಸಂದರ್ಭ ಮೈಸೂರು ಜಿಲ್ಲಾ ಹಾಲು ಒಕ್ಕೂಟದಿಂದ 15 ಕೃತಕ ಗರ್ಭಧಾರಣೆ ಕಾರ್ಯಕರ್ತರಿಗೆ ಸಮವಸ್ತ್ರ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಮೈಮುಲ್ ನಿರ್ದೇಶಕಿ ದ್ರಾಕ್ಷಾಯಿಣಿ ಬಸವರಾಜಪ್ಪ, ವ್ಯವಸ್ಥಾಪಕ ಆರಿಫ್ ಇಕ್ಬಾಲ್, ಮೈಸೂರಿನ ಕೆಪಿಸಿಎಂ ಪ್ರಾಂಶುಪಾಲ ಚಂದ್ರಶೇಖರ್, ಬೆಂಗಳೂರು ಕೆಎಂಎಫ್ ನಿವೃತ್ತ ಅಪರ ನಿಬಂಧಕ ಎನ್.ಕೃಷ್ಣಾರೆಡ್ಡಿ, 'ಮೈಸೂರು ಮಿತ್ರ' ಅಂಕಣಕಾರ ಹಾಗೂ ಮೈಸೂರಿನ ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಸಂಯೋಜನಾಧಿಕಾರಿ ತ್ರಿಪುರಾಂತಕ, ವಿಸ್ತರಣಾಧಿಕಾರಿಗಳಾದ ಯೋಗೇಶ್, ಜಗದಾಂಬ, ತಾಹಿರಾ, ಉಪನ್ಯಾಸಕ ಎಂ.ವಿಶ್ವೇಶ್ವರಯ್ಯ, ಪಿ.ಎಸ್.ಹರೀಶ್ ಇನ್ನಿತರರಿದ್ದರು.

ವಿದ್ಯಾರ್ಥಿ ವೇತನ, ಶುಲ್ಕ ಮರುಪಾವತಿ, ಕಟ್ಟಡ ದುರಸ್ತಿ ಅನುದಾನಕ್ಕೆ ಒತ್ತಾಯಿಸಿ

ಉನ್ನತ ಶಿಕ್ಷಣ ಸಚಿವರಿಗೆ ಪತ್ರ

ನಂಜನಗೂಡು, ಆ.2– ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿರುವ




ಪರಿಶಿಷ್ಟ ಜಾತಿ, ಪಂಗಡದ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನ ಮತ್ತು ಶುಲ್ಕ ಮರುಪಾವತಿಗೆ 11.15 ಕೋಟಿ ಮತ್ತು ಕಟ್ಟಡ ದುರಸ್ತಿಗಾಗಿ 28 ಕೋಟಿ ಅನುದಾನ ನೀಡುವಂತೆ ಒತ್ತಾಯಿಸಿ ಶಾಸಕ ಬಿ.ಹರ್ಷವರ್ಧನ್ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವಥ್ ನಾರಾಯಣ್‌ಗೌಡರಿಗೆ ಪತ್ರ ಬರೆದಿದ್ದಾರೆ.

ಪ್ರಸಕ್ತ ಸಾಲಿನ ಎಸ್ಸಿ ಎಸ್ಟಿ ವಿದ್ಯಾರ್ಥಿಗಳು ಶಾಸಕ ಹರ್ಷವರ್ಧನ್ ಅವರನ್ನು ಭೇಟಿ ಮಾಡಿ ತಮ್ಮ ಸಮಸ್ಯೆಗಳನ್ನು ಹೇಳಿಕೊಂಡಿದ್ದರು. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಸಮಸ್ಯೆಗೆ ಸ್ಪಂದಿಸಿದ ಶಾಸಕರು, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವಥ್ ನಾರಾಯಣಗೌಡರಿಗೆ ಪತ್ರ ಬರೆದು 2022–23ನೇ ಸಾಲಿನಲ್ಲಿ ಎಸ್ಸಿ, ಎಸ್ಟಿ ವಿದ್ಯಾರ್ಥಿಗಳ ಶುಲ್ಕ ಮರುಪಾವತಿ ಹಾಗೂ ವಿದ್ಯಾರ್ಥಿ ವೇತನ ಮತ್ತು ಕಟ್ಟಡ ದುರಸ್ತಿ ಕಾಮಗಾರಿಗಳಿಗೆ ಎಸ್‌ಇಪಿ, ಟಿಎಸ್‌ಪಿ ಯೋಜನೆಯಲ್ಲಿ ಅನುದಾನ ಬಿಡುಗಡೆಗೊಳಿಸುವ ಮೂಲಕ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗೆ ಸಹಕರಿಸುವಂತೆ ಪತ್ರದಲ್ಲಿ ಕೋರಿದ್ದಾರೆ.

ಚುಂಚನಕಟ್ಟೆ ಜಲಪಾತ ವೀಕ್ಷಿಸಿದ ಮಠಾಧೀಶರು

ಬೆಟ್ಟದಪುರ, ಆ.2– ಕೆ.ಆರ್.ನಗರ ತಾಲೂಕಿನ ಚುಂಚನಕಟ್ಟೆ ಜಲಪಾತಕ್ಕೆ ತುಮಕೂರಿನ ಸಿದ್ಧಗಂಗಾ ಮಠಾಧೀಶ ಶ್ರೀಸಿದ್ಧಲಿಂಗ ಸ್ವಾಮೀಜಿಗಳು ಸೇರಿದಂತೆ 20ಕ್ಕೂ ಅಧಿಕ ಸ್ವಾಮೀಜಿಗಳು ಭೇಟಿ ನೀಡಿ 2 ಗಂಟೆ ಕಾಲ ಕಾವೇರಿ ಧನುಷ್ಕೋಟಿ ಜಲಪಾತದ ಜಲವೈಭವವನ್ನು ಸವಿದರು.




ನಂತರ ಮಾತನಾಡಿದ ಸ್ವಾಮೀಜಿಗಳು, ಭೂಮಿ ಮೇಲಿರುವ ಬೆಟ್ಟಗುಡ್ಡ, ನದಿಗಳು ಹಾಗೂ ಪ್ರಕೃತಿಯಿಂದ ಮಾತ್ರ ಮನುಷ್ಯನ ದೈನಂದಿನ ಜೀವನದ ಒತ್ತಡ ಕಡಿಮೆ ಮಾಡಲು ಸಾಧ್ಯ ಎಂದರು.

ಕ್ಷೇತ್ರಕ್ಕೆ ಶಾಸಕ ಸಾ.ರಾ.ಮಹೇಶ್ ಅಪಾರ ಕೊಡುಗೆ ನೀಡುವ ಮೂಲಕ ಸುಂದರ ತಾಣವಾಗಿಸಿದ್ದಾರೆ. ಮುಂದಿನ ದಿನಗಳಲ್ಲಿ ಇಲ್ಲಿ ಬೃಹತ್ ಪೂಜಾ ಕಾರ್ಯ ಹಮ್ಮಿಕೊಳ್ಳಲಾಗುವುದು ಎಂದರು.

ಇದಕ್ಕೂ ಮುನ್ನಾ ಗಾವಡಗೆರೆ ಮಠದಲ್ಲಿ ನಡೆದ ಧಾರ್ಮಿಕ ಕಾರ್ಯಕ್ರಮದಲ್ಲಿ ಹಲವು ಗಣ್ಯರನ್ನು ಸನ್ಮಾನಿಸಲಾಯಿತು. ಅಲ್ಲದೇ ಮಠದಲ್ಲಿ ಸಿದ್ಧಲಿಂಗಸ್ವಾಮಿಗಳ ಪಾದಪೂಜೆ ಹಾಗೂ ಲಿಂಗಪೂಜೆ ನಡೆಯಿತು. ಈ ವೇಳೆ ಗಾವಡಗೆರೆ ಮಠದ ಶ್ರೀನಟರಾಜ ಸ್ವಾಮೀಜಿ, ಹಲವಾರು ಸ್ವಾಮೀಜಿಗಳು ಸನ್ಮಾನಿಸಿದರು. ಭಕ್ತರಿಗೆ ಆಶೀರ್ವಚನ ನೀಡಿದರು. ಬೆಟ್ಟದಪುರದ ಚನ್ನಬಸವದೇಶಿಕೇಂದ್ರ ದಿಂಡಗಾಡು ಮಠದ ಅಪ್ಪಾಜಿ ಸ್ವಾಮೀಜಿ, ವಿರಾಜಪೇಟೆ ಅರಮೇರಿ ಮಠದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಕಿರಿಕೊಡ್ಲಿ ಮಠದ ಸದಾಶಿವ ಸ್ವಾಮೀಜಿ, ಹಾಸನದ ತಣ್ಣೀರುಹಳ್ಳ ಮಠದ ಶ್ರೀವಿಜಯ ಕುಮಾರ ಸ್ವಾಮಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬಂಡೆ ಕಲ್ಲು ಮಠದ ಸ್ವಾಮಿಗಳು ಸೇರಿದಂತೆ ಇನ್ನಿತರರಿದ್ದರು.

ಪ್ರಾದೇಶಿಕ ಪಕ್ಷ ಜೆಡಿಎಸ್ ಅಧಿಕಾರಕ್ಕೆ ತರಲು ಶ್ರಮಿಸಿ

ಕಾರ್ಯಕರ್ತರಿಗೆ ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಭೀಮಪ್ಪ ತಳವಾರ್ ಮನವಿ



ತಿ.ನರಸೀಪುರ, ಆ.2– ದೇಶಕ್ಕೆ ಮಾರಕವಾಗಿರುವ ಎರಡೂ ರಾಷ್ಟ್ರೀಯ ಪಕ್ಷಗಳನ್ನು ಕಿತ್ತೊಗೆದು ಪ್ರಾದೇಶಿಕ ಪಕ್ಷವಾದ ಜೆಡಿಎಸ್ ಅನ್ನು ರಾಜ್ಯದಲ್ಲಿ ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಕಾರ್ಯಕರ್ತರು ಶ್ರಮಿಸಬೇಕು ಎಂದು ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಭೀಮಪ್ಪ ತಳವಾರ್ ಮನವಿ ಮಾಡಿದರು.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ವರುಣಾ ಕ್ಷೇತ್ರದ ನಿಕಟಪೂರ್ವ ಜೆಡಿಎಸ್ ಅಧ್ಯಕ್ಷ ತಾಯೂರು ಪ್ರಕಾಶ್ ಅವರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಈ ಹಿಂದೆ ರಾಜ್ಯದ ಮುಖ್ಯಮಂತ್ರಿಯಾಗಿ ಹೆಚ್.ಡಿ.ಕುಮಾರಸ್ವಾಮಿ ಅವರು ಜಾರಿಗೆ ತಂದ ಅಭಿವೃದ್ಧಿ ಕಾರ್ಯಗಳು ಹಾಗೂ ಜನಪರ ಯೋಜನೆಗಳನ್ನು ಜನರಿಗೆ ತಿಳಿಸುವ ಮೂಲಕ ಮುಂಬರುವ ದಿನಗಳಲ್ಲಿ ಪಕ್ಷವನ್ನು ಸಂಪೂರ್ಣ ಬಹುಮತದೊಂದಿಗೆ ರಾಜ್ಯದಲ್ಲಿ ಮತ್ತೆ ಅಧಿಕಾರಕ್ಕೆ ತರಲು ಶ್ರಮಿಸಬೇಕು ಎಂದು ಕರೆ ನೀಡಿದರು.

ರಾಜ್ಯದಲ್ಲಿ ಸಾಮಾಜಿಕ ನ್ಯಾಯ ಅನುಸರಿಸುವ ಏಕೈಕ ಪಕ್ಷವೆಂದರೆ ಅದು ಜೆಡಿಎಸ್. ದೇವೇಗೌಡರು ಪ್ರಧಾನಿಯಾಗಿದ್ದ ವೇಳೆ ರಾಜ್ಯದ ಎಲ್ಲಾ ಅಣೆಕಟ್ಟೆ ನಿರ್ಮಾಣ ಕಾಮಗಾರಿಗೆ ಹೆಚ್ಚಿನ ಅನುದಾನ ನೀಡಿ ನೀರಾವರಿ ಯೋಜನೆಗೆ ಆದ್ಯತೆ ನೀಡಿದ್ದರು. ಪ್ರಸ್ತುತ ರಾಜ್ಯ ನೀರಾವರಿ ನಾಡಾಗಿ, ಸದಾ ಹಸಿರಿನಿಂದ ಕಂಗೊಳಿಸಲು ದೇವೇಗೌಡರೇ ಕಾರಣರಾಗಿದ್ದು, ಹಸಿರು ಕ್ರಾಂತಿಯ ಹರಿಕಾರರಾಗಿದ್ದಾರೆ. ಕಾರ್ಯಕರ್ತರು ತಮ್ಮಲ್ಲಿರುವ ಸಣ್ಣಪುಟ್ಟ ಭಿನ್ನಾಭಿಪ್ರಾಯ ಮರೆತು ಪಕ್ಷ ಸಂಘಟನೆಗೆ ಹೆಚ್ಚು ಒತ್ತು ನೀಡುವಂತೆ ಮನವಿ ಮಾಡಿದರು.

ತಾಯೂರು ಪ್ರಕಾಶ್ ಮಾತನಾಡಿ, ಮಾಜಿ ಸಿಎಂ ಕುಮಾರಸ್ವಾಮಿ ಅವರ ಆಡಳಿತವನ್ನು ಜನತೆ ಮರೆತಿಲ್ಲ. ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್ ಪಕ್ಷಕ್ಕೆ ಸ್ಪಷ್ಟ ಬಹುಮತ ನೀಡಲು ರಾಜ್ಯದ ಜನರು ಉತ್ಸುಕರಾಗಿದ್ದಾರೆ. ಜೆಡಿಎಸ್ ಸಂಘಟನೆ ಮಾಡುವ ನಿಟ್ಟಿನಲ್ಲಿ ಕಾರ್ಯಕರ್ತರ ಪರಿಶ್ರಮ ಅಗತ್ಯ ಎಂದರು. ಈ ವೇಳೆ ಮಹರ್ಷಿ ವಾಲ್ಮೀಕಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಮಹೇಶ್ ನಾಯಕ್, ಎಂ.ಬಿ.ಸಾಗರ್, ಲಕ್ಷ್ಮಣ್ ಪೂಜಾರ್ ಮತ್ತಿತರರಿದ್ದರು.

ಕಿಜರ್‌ಪಾಷ ಹೊನ್ನೇನಹಳ್ಳಿ ಗ್ರಾಪಂ ಉಪಾಧ್ಯಕ್ಷ



ಭೇರ್ಯ, ಆ.2– ಸಾಲಿಗ್ರಾಮ ತಾಲೂಕಿನ ಹೊನ್ನೇನಹಳ್ಳಿ ಗ್ರಾಪಂ ಉಪಾಧ್ಯಕ್ಷರಾಗಿ ಕಿಜರ್ ಪಾಷ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ಹಿಂದಿನ ಉಪಾಧ್ಯಕ್ಷ ಪಶುಪತಿ ಜಗದೀಶ್ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಮಂಗಳವಾರ ನಡೆದ ಚುನಾವಣೆಯಲ್ಲಿ ಕಿಜರ್ ಪಾಷ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿಯೂ ಆದ ಜಿಪಂ ಎಇಇ ಎಲ್.ವಿನುತ್ ಘೋಷಿಸಿದರು. ಈ ವೇಳೆ ಪಿಡಿಓ ಕೆ.ಎ.ಮಂಜುನಾಥ್, ಜಿಪಂ ಇಂಜಿನಿಯರ್ ಸ್ವಾಮಿ ಇದ್ದರು. ನೂತನ ಉಪಾಧ್ಯಕ್ಷರನ್ನು ಅಧ್ಯಕ್ಷೆ ಸುಂದ್ರಮ್ಮ, ಮಾಜಿ ಅಧ್ಯಕ್ಷೆ ರಾಣಿ, ಮಾಜಿ ಉಪಾಧ್ಯಕ್ಷ ಪಶುಪತಿ ಜಗದೀಶ್, ಸದಸ್ಯರಾದ ಲತಾ, ರಾಧ, ಸಿದ್ದರಾಜು, ಚಂದ್ರೇಗೌಡ, ರಘುರಾಜೇ ಅರಸ್, ಮಣಿ, ಹೆಬ್ಸೂರು ಮಹೇಂದ್ರ, ಶಿಲ್ಪ ಸುನೀಲ್, ಶಂಭುಲಿಂಗಾಚಾರಿ, ಶಾಂತಮ್ಮ, ಷಣ್ಮುಖ, ಜೆಡಿಎಸ್ ಮುಖಂಡರಾದ ಪ್ರಭಾಕರ್, ಅಶೋಕ್, ನವೀನ, ಪಶುಪತಿ ಹರೀಶ್, ದಿನೇಶ್, ಎಸ್.ಪಿ.ಜಗದೀಶ್, ನೈಮ್ ಷರೀಫ್, ವಿಶ್ವನಾಥ್ ಅಭಿನಂದಿಸಿದರು.

ಟನ್ ಕಬ್ಬಿಗೆ 4500 ರೂ. ಬೆಂಬಲ ಬೆಲೆ ನೀಡಿ

ಇಲ್ಲದಿದ್ದರೆ ರಾಜ್ಯಾದ್ಯಂತ ಹೋರಾಟ: ಎಚ್ಚರಿಕೆ

ಚುಂಚನಕಟ್ಟೆ, ಆ.2– ಟನ್ ಕಬ್ಬಿಗೆ 4500 ರೂ. ಬೆಂಬಲ ಬೆಲೆ ನೀಡಬೇಕು. ಇಲ್ಲದಿದ್ದರೆ ರಾಜ್ಯಾದ್ಯಂತ ಹೋರಾಟ ಮಾಡುವುದಾಗಿ ಅಖಿಲ ಕರ್ನಾಟಕ ಕಬ್ಬು ಬೆಳೆಗಾರರ ಸಂಘದ ಜಿಲ್ಲಾಧ್ಯಕ್ಷ ತಿಮ್ಮಪ್ಪ ಎಚ್ಚರಿಸಿದ್ದಾರೆ.

ಸಾಲಿಗ್ರಾಮದಲ್ಲಿ ರೈತ ಮುಖಂಡರೊಂದಿಗೆ ಕಬ್ಬಿಗೆ ಬೆಂಬಲ ಬೆಲೆ ನಿಗದಿ ಮಾಡುವ ವಿಷಯವಾಗಿ ಚರ್ಚಿಸಿ ಮಾತನಾಡಿದ ಅವರು, ಮೈಸೂರಿನಲ್ಲಿ ಸಕ್ಕರೆ ಕಾರ್ಖಾನೆ ಅಧಿಕಾರಿಗಳೊಂದಿಗೆ ಇತ್ತೀಚೆಗೆ ನಡೆದ ಸಭೆಯಲ್ಲಿ ಕಬ್ಬು ಕಟಾವು ವಿಚಾರವಾಗಿ ಟನ್ ಕಬ್ಬಿಗೆ ಕೂಲಿ 600 ರೂ. ನಿಗದಿ ಮಾಡುವುದನ್ನು ರೈತ ಸಂಘಟನೆಗಳು ವಿರೋಧಿಸುತ್ತೇವೆ. ಕಬ್ಬಿನ ಬಿತ್ತನೆಬೀಜ, ರಸಗೊಬ್ಬರ, ಉಳುಮೆ ಸೇರಿದಂತೆ ಇನ್ನಿತರ ಸಲಕರಣೆಗಳ ವೆಚ್ಚ ಹೆಚ್ಚಾಗಿರುವುದರಿಂದ ಟನ್ ಕಬ್ಬಿಗೆ 4500 ರೂ. ನೀಡುವಂತೆ ಕಳೆದ 2 ವರ್ಷಗಳಿಂದ ಹೋರಾಟ ನಡೆಸುತ್ತಿದ್ದೇವೆ. ಆದರೂ ಜಿಲ್ಲಾಧಿಕಾರಿಗಳ ಸಭೆಯಲ್ಲಿ ಕಬ್ಬಿಗೆ ಬೆಂಬಲ ಬೆಲೆ ನಿಗದಿ ಮಾಡದೆ ಕಬ್ಬು ಕಟಾವು ಮಾಡಲು 600 ರೂ. ಕೂಲಿ ನಿಗದಿ ಮಾಡಿರುವುದು ರೈತರಿಗೆ ಮತ್ತಷ್ಟು ಹೊರೆಯಾಗಿಸಿದೆ. ಹೀಗಾಗಿ ಕಬ್ಬು ಕಟಾವಿಗೆ 400 ರೂ. ಕೂಲಿ ನಿಗದಿ ಮಾಡಬೇಕು. ಅಲ್ಲದೇ ಬೆಂಬಲ ಬೆಲೆ ನಿಗದಿ ಮಾಡಬೇಕು ಎಂದು ಒತ್ತಾಯಿಸಿದ್ದಾರೆ. ಈ ವೇಳೆ ಅಖಿಲ ಕರ್ನಾಟಕದ ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಉಪಾಧ್ಯಕ್ಷ ವಿಶ್ವಾಸ್, ಜಿಲ್ಲಾ ಗೌರವಾಧ್ಯಕ್ಷ ಜನಾರ್ಧನ್, ಸಾಲಿಗ್ರಾಮ ತಾಲೂಕು ಸಂಘದ ಉಪಾಧ್ಯಕ್ಷೆ ಸುಭಾಷಿಣಿ, ಗ್ರಾಮ ಘಟಕದ ಅಧ್ಯಕ್ಷ ಲೀಲಾವತಿ ಮತ್ತಿತರರಿದ್ದರು.

ಹುಣಸವಾಡಿ ಗ್ರಾಪಂ ಅಧ್ಯಕ್ಷೆ, ಉಪಾಧ್ಯಕ್ಷೆ ಅವಿರೋಧ ಆಯ್ಕೆ



ಬೈಲಕುಪ್ಪೆ, ಆ.2– ತಾಲೂಕಿನ ಹುಣಸವಾಡಿ ಗ್ರಾಪಂ ನೂತನ ಅಧ್ಯಕ್ಷೆಯಾಗಿ ಶಶಿಕಲಾ.ಎಸ್ ಮತ್ತು ಉಪಾಧ್ಯಕ್ಷೆಯಾಗಿ ಜ್ಯೋತಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

18 ಸದಸ್ಯ ಬಲದ ಗ್ರಾಪಂನ ಈ ಹಿಂದಿನ ಅಧ್ಯಕ್ಷೆ ಸುಶೀಲಮ್ಮ ಮತ್ತು ಉಪಾಧ್ಯಕ್ಷ ಸ್ವಾಮಿ ಎ.ಜೆ. ಅವರು ಒಳ ಒಪ್ಪಂದದಂತೆ 15 ತಿಂಗಳ ಕಾಲಾವಧಿಯ ನಂತರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ ಪರಿಣಾಮ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸಲಾಯಿತು. ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಶಶಿಕಲಾ, ಉಪಾಧ್ಯಕ್ಷ ಸ್ಥಾನಕ್ಕೆ ಜ್ಯೋತಿ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಪ್ರಸಾದ್ ಅವಿರೋಧ ಆಯ್ಕೆಯನ್ನು ಘೋಷಿಸಿದರು. ಚುನಾವಣೆಯಲ್ಲಿ 14 ಸದಸ್ಯರು ಹಾಜರಿದ್ದು, ಉಳಿದ 4 ಸದಸ್ಯರು ಗೈರಾಗಿದ್ದರು.

ಪಿಡಿಓ ಮಂಜುನಾಥ್, ತಾಪಂ ಮಾಜಿ ಸದಸ್ಯ ಎ.ಟಿ.ರಂಗಸ್ವಾಮಿ, ಮೈಮುಲ್ ಜಿಲ್ಲಾ ನಿರ್ದೇಶಕ ಎಚ್. ಡಿ.ರಾಜೇಂದ್ರ, ಜಿಲ್ಲಾ ಸಹಕಾರ ಬ್ಯಾಂಕ್ ನಿರ್ದೇಶಕ ಸಿ.ಎನ್.ರವಿ, ಗ್ರಾಪಂ ಸದಸ್ಯರಾದ ಲೋಕೇಶ್, ಸುಶೀಲಮ್ಮ, ಸ್ವಾಮಿನಾಯಕ, ಮಂಜುಳಾ, ಸ್ವಾಮಿ, ಎಸ್ ನಾಗರಾಜ, ರತ್ನಮ್ಮ, ಸುಬ್ರಹ್ಮಣ್ಯ, ಗೌರಮ್ಮ, ರವಿ, ಶಾಂತೇಗೌಡ, ಮುಖಂಡರಾದ ಕರೀಗೌಡ, ಗೋವಿಂದೇಗೌಡ, ಸುಕುಮಾರ್, ಶಿವಣ್ಣೇಗೌಡ, ನಾಗಣ್ಣ ನಾಯಕ, ನಂಜಪ್ಪ ನಾಯಕ, ಅಣ್ಣೇಗೌಡ, ಎಸ್.ಆರ್.ಎಸ್ ಗೌಡ, ರಾಜೇಗೌಡ, ಬಸಪ್ಪ, ಮಹದೇವ್ ಸೇರಿದಂತೆ ಮತ್ತಿತರರಿದ್ದರು.

ಅಗ್ನಿಪಥ್ ಸೇನಾ ನೇಮಕಾತಿ ರ್‍ಯಾಲಿ

ಮೈಸೂರು, ಆ.2– ಜಿಲ್ಲಾಧಿಕಾರಿಗಳ ಕಾರ್ಯಾಲಯ ಹಾಗೂ ಕಂದಾಯ ಇಲಾಖೆ, ಸೇನಾ ನೇಮಕಾತಿ ಕಚೇರಿ, ಬೆಂಗಳೂರು ವತಿಯಿಂದ ದಕ್ಷಿಣ ಕರ್ನಾಟಕದ 14 ಜಿಲ್ಲೆಗಳಲ್ಲಿ ಯುವಕರಿಗೆ ಅಗ್ನಿಪಥ್ ಯೋಜನೆಯ ಸೇನಾ ನೇಮಕಾತಿ ಮಾಡಿಕೊಳ್ಳಲು ಆ.10 ರಿಂದ ಆಗಸ್ಟ್ 22 ರವರೆಗೆ ಹಾಸನ ಜಿಲ್ಲೆಯ ಜಿಲ್ಲಾ ಕ್ರೀಡಾಂಗಣದಲ್ಲಿ ಅಗ್ನಿಪಥ್ ಸೇನಾ ನೇಮಕಾತಿ ರ್‍ಯಾಲಿ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ www.joinindianarmy.nic.in ಅನ್ನು ಸಂಪರ್ಕಿಸಬಹುದು

ಏಷ್ಯಾಕಪ್ ಟಿ20 ವೇಳಾಪಟ್ಟಿ ಪ್ರಕಟ



ದುಬೈ, ಆ.2– ಯುಎಇನಲ್ಲಿ ನಡೆಯಲಿರುವ 15ನೇ ಆವೃತ್ತಿಯ ಏಷ್ಯಾಕಪ್ ಟೂರ್ನಿ ಆರಂಭಕ್ಕೆ ಇನ್ನು ಕೆಲವು ವಾರ ಮಾತ್ರ ಬಾಕಿಯಿದ್ದು, ಮಂಗಳವಾರ ವೇಳಾಪಟ್ಟಿ ಪ್ರಕಟವಾಗಿದೆ. ಇದೇ ಆ.27 ರಿಂದ ಸೆ.11ರವರೆಗೆ ಏಷ್ಯಾಕಪ್ ಟೂರ್ನಿ ಟಿ20 ಮಾದರಿಯಲ್ಲಿ ನಡೆಯಲಿದ್ದು, ಈ ಬಾರಿ ಶ್ರೀಲಂಕಾದಲ್ಲಿ ನಡೆಯಲಿದ್ದ ಪಂದ್ಯಾವಳಿಗಳು ಅಲ್ಲಿನ ರಾಜಕೀಯ ಬಿಕ್ಕಟ್ಟಿನ ಪರಿಣಾಮ ಯುಎಇನಲ್ಲಿ ನಡೆಯಲಿದೆ. ಸಾಂಪ್ರದಾಯಿಕ ಬದ್ಧ ಎದುರಾಳಿಗಳಾದ ಭಾರತ ಮತ್ತು ಪಾಕಿಸ್ತಾನ ತಂಡಗಳು ಆ.28ರಂದು ಸೆಣಸಲಿವೆ.

ಟೂರ್ನಿಯಲ್ಲಿ ಒಟ್ಟು 6 ತಂಡಗಳಿದ್ದು, ಇದರಲ್ಲಿ ತಲಾ 3 ತಂಡಗಳಂತೆ ಎ, ಬಿ ಗ್ರೂಪ್‌ಗಳಾಗಿ ಮಾಡಲಾಗುತ್ತದೆ. ಈಗಾಗಲೇ 5 ತಂಡಗಳು ನೇರವಾಗಿ ಟೂರ್ನಿಗೆ ಪ್ರವೇಶ ಪಡೆದುಕೊಂಡಿವೆ. ಇನ್ನು 1 ತಂಡ ಆ.21 ರಿಂದ ನಡೆಯುವ ಅರ್ಹತಾ ಪಂದ್ಯದಿಂದ ಗೆದ್ದು ಪ್ರಧಾನ ಸುತ್ತಿಗೆ ತೇರ್ಗಡೆಯಾಗಬೇಕಿದೆ. ಏಷ್ಯಾ ಕಪ್ ಸರಣಿಯ ಗ್ರೂಪ್ 'ಎ' ನಲ್ಲಿ ಭಾರತ, ಪಾಕಿಸ್ತಾನ, ಕ್ವಾಲಿಫೈಯರ್ ತಂಡ(ಇನ್ನಷ್ಟೆ ನಿರ್ಧಾರವಾಗಬೇಕಿದೆ) ಮತ್ತು ಗ್ರೂಪ್ 'ಬಿ' ನಲ್ಲಿ ಶ್ರೀಲಂಕಾ, ಬಾಂಗ್ಲಾದೇಶ, ಆಫ್ಘಾನಿಸ್ತಾನ ತಂಡಗಳು ಇವೆ. ಯುಎಇ, ಒಮನ್, ನೇಪಾಳ, ಹಾಂಕಾಂಗ್ ತಂಡಗಳು ಅರ್ಹತಾ ಪಂದ್ಯದಲ್ಲಿ ಸೆಣಸಾಟ ನಡೆಸಿ, ಒಂದು ತಂಡ ಮಾತ್ರ ಪ್ರಧಾನ ಸುತ್ತಿಗೆ ಬರಲಿದೆ. ಒಟ್ಟು 13 ಪಂದ್ಯಗಳು ನಡೆಯಲಿದ್ದು, 10 ಪಂದ್ಯಗಳು ದುಬೈನಲ್ಲಿ ಮತ್ತು 3 ಪಂದ್ಯಗಳು ಶಾರ್ಜಾದಲ್ಲಿ ನಡೆಯಲಿವೆ. ಎಲ್ಲಾ ಪಂದ್ಯಗಳು ಭಾರತೀಯ ಕಾಲಮಾನ ರಾತ್ರಿ 7.30ಕ್ಕೆ ಪ್ರಸಾರವಾಗಲಿದೆ. ಕಾಯುವಿಕೆ ಕೊನೆಗೂ ಅಂತ್ಯವಾಗಿದೆ. ಏಷ್ಯಾ ಕಪ್ ಕಾದಾಟ ಆ.27ರಿಂದ ಆರಂಭವಾಗಲಿದೆ. ಫೈನಲ್ ಸೆ.11ರಂದು ನಡೆಯಲಿದೆ. ಏಷ್ಯಾ ಕಪ್‌ನ 15ನೇ ಆವೃತ್ತಿಯು ಟಿ20 ವಿಶ್ವಕಪ್‌ಗೆ ಒಂದೊಳ್ಳೆ ಪೂರ್ವ ತಯಾರಿಯಾಗಲಿದೆ ಎಂದು ಜಯ್ ಶಾ ಟ್ವೀಟ್ ಮಾಡಿದ್ದಾರೆ.


ಆಗಸ್ಟ್ 8ಕ್ಕೆ ಭಾರತ ತಂಡ ಪ್ರಕಟ?

ಏಷ್ಯಾಕಪ್ ಮತ್ತು ಐಸಿಸಿ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಗೆ ಬಿಸಿಸಿಐ ಆಯ್ಕೆ ಸಮಿತಿ ಒಂದೇ ತಂಡ ಪ್ರಕಟ ಮಾಡಲಿದೆ ಎಂದು ಇತ್ತೀಚಿನ ವರದಿಗಳು ಹೇಳಿವೆ. ಆ.8 ಏಷ್ಯಾ ಕಪ್ ಟೂರ್ನಿಗೆ ತಂಡ ಪ್ರಕಟ ಮಾಡಲು ಇರುವ ಅಂತಿಮ ಗಡುವಾಗಿದ್ದು, ಟೀಮ್ ಇಂಡಿಯಾದಲ್ಲಿ ಯಾರೆಲ್ಲಾ ಸ್ಥಾನ ಪಡೆಯಲಿದ್ದಾರೆ ಎಂಬ ಕುತೂಹಲ ಹೆಚ್ಚಾಗಿದೆ.

ಆ.28ಕ್ಕೆ, ಇಂಡೋ-ಪಾಕ್ ಹಣಾಹಣಿ, ಸೆ.11ಕ್ಕೆ ಫೈನಲ್

ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ವೇಳಾಪಟ್ಟಿ
ಶನಿವಾರ, ಆ.27: ಶ್ರೀಲಂಕಾ vs ಅಫ್ಘಾನಿಸ್ತಾನ (ದುಬೈ)
ಭಾನುವಾರ, ಆಗಸ್ಟ್ 28: ಭಾರತ vs ಪಾಕಿಸ್ತಾನ (ದುಬೈ)
ಮಂಗಳವಾರ, ಆಗಸ್ಟ್ 30: ಬಾಂಗ್ಲಾದೇಶ vs ಅಫ್ಘಾನಿಸ್ತಾನ (ಶಾರ್ಜಾ)
ಬುಧವಾರ, ಆಗಸ್ಟ್ 31: ಭಾರತ ವಿರುದ್ಧ ಕ್ವಾಲಿಫೈಯರ್ (ದುಬೈ)
ಗುರುವಾರ, ಸೆಪ್ಟೆಂಬರ್ 1 : ಶ್ರೀಲಂಕಾ ವಿರುದ್ಧ ಬಾಂಗ್ಲಾದೇಶ (ದುಬೈ)
ಶುಕ್ರವಾರ, ಸೆಪ್ಟೆಂಬರ್ 2 : ಪಾಕಿಸ್ತಾನ ವಿರುದ್ಧ ಕ್ವಾಲಿಫೈಯರ್ (ಶಾರ್ಜಾ)
ಸೂಪರ್ ಫೋರ್ ಹಂತ
ಶನಿವಾರ, ಸೆಪ್ಟಂಬರ್ 3: ಬಿ1 vs ಬಿ2 (ಶಾರ್ಜಾ)
ಭಾನುವಾರ, ಸೆಪ್ಟೆಂಬರ್ 4:ಎ1 ವಿರುದ್ಧ ಎ2 (ದುಬೈ)
ಮಂಗಳವಾರ, ಸೆಪ್ಟೆಂಬರ್ 6 : ಎ1 vs ಬಿ1 (ದುಬೈ)
ಬುಧವಾರ, ಸೆಪ್ಟೆಂಬರ್ 7:ಎ2 ವಿರುದ್ಧ ಬಿ2 (ದುಬೈ)
ಗುರುವಾರ, ಸೆಪ್ಟೆಂಬರ್ 8: ಎ1 ವಿರುದ್ಧ ಬಿ2 (ದುಬೈ)
ಶುಕ್ರವಾರ, ಸೆಪ್ಟೆಂಬರ್ 9: ಬಿ1 ವಿರುದ್ಧ ಎ2 (ದುಬೈ)
ಭಾನುವಾರ, ಸೆಪ್ಟೆಂಬರ್.11: ಫೈನಲ್ (ದುಬೈ).

ಮೈಸೂರು ಬೇಸಿಗೆ ರೇಸುಗಳು



12ನೇ ದಿನ, ಬುಧವಾರ 3-8-2022

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ಗೋಲ್ಡನ್ ಫ್ಯಾಂಟಸಿ ಪ್ಲೇಟ್–1100 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1. ಗೋಲ್ಡ್ ಚಾರ್ಮ್ 2. ರ್‍ಯಾಪ್ಟರ್ 3. ಕಪ್ಪಾಡೋಸಿಯಾ

II. ಸ್ಕೋನ್ ಸ್ಟೋನ್ ಪ್ಲೇಟ್–1200 ಮೀ. ರೇಟೆಡ್ 20 ರಿಂದ 45. ಮ.2.30ಕ್ಕೆ
1. ಈವಾಂಡರ್ 2. ಡೀನ್ಸ್‌ಗಾಲ್ 3. ಕಂಟ್ರೀಸ್ ಫೇಸ್

III. ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್ ಟ್ರೋಫಿ–1400 ಮೀ. ರೇಟೆಡ್ 40 ರಿಂದ 65. ಮ.3.00ಕ್ಕೆ
1 ಲವ್ಲಿ ಥಾಟ್ಸ್ 2 ವಾಟ್ ಈಸ್ ದಿಸ್ 3. ಟ್ರಮಂಡಸ್

IV. ಅರಸು ಜಮಖಾನ ಕ್ಲಬ್ ಟ್ರೋಫಿ–1200 ಮೀ. ರೇಟೆಡ್ 40 ರಿಂದ 65.(NO WHIP). ಮ.3.30ಕ್ಕೆ
1. ಕಿಂಗ್ ಆಫ್ ದಿ ಜಂಗಲ್ 2. ಪವರ್ ಆಫ್ ಥಿಯಾ 3. ಆಕರ್

V. ಮೈಸೂರ್ ರೇಸ್ ಕ್ಲಬ್ ಮಿಲಿಯನ್ 2022– 1600 ಮೀ. 3ವರ್ಷ(ಟರ್ಮ್ಸ್). ಮ.4.00ಕ್ಕೆ
1. ರಾಫಿಡಸ್ 2. ಅಶ್ವ ಯದುವೀರ್ 3. ಫಾರ್ ಸೆಟಿ

VI. ಕಂಠೀರವ ನರಸಿಂಹರಾಜ ಸ್ಪೋರ್ಟ್ಸ್ ಕ್ಲಬ್ ಟ್ರೋಫಿ–1400 ಮೀ. ರೇಟೆಡ್ 60 ರಿಂದ 85. ಸಂ.4.30ಕ್ಕೆ
1. ಬ್ರೂನ್ ಹಿಲ್ಡ್ 2. ಮೌಂಟನ್ ಲಯನ್ 3. ರೈಸಿಂಗ್ ಸನ್

VII. ಕರಿಘಟ್ಟ ಪ್ಲೇಟ್–1600 ಮೀ. ರೇಟೆಡ್ 20 ರಿಂದ 45. ಸಂ.5.00ಕ್ಕೆ
1. ಮಿಸ್ಟಿಕ್ ಮೌಂಟನ್ 2. ಔರಲಿ 3. ವಿಸ್ಕಿ ಸೋರ್

ದಿನದ ಅತ್ಯುತ್ತಮ	: ರಾಫಿಡಸ್
ಡಬ್ಬಲ್	: ಬ್ರೂನ್ ಹಿಲ್ಡ್, ಮಿಸ್ಟಿಕ್ ಮೌಂಟನ್
ಜಾಕ್‌ಪಾಟ್	: 3, 4, 5, 6 ಮತ್ತು 7
I ಟ್ರಿಬಲ್	: 2, 3 ಮತ್ತು 4
II ಟ್ರಿಬಲ್	: 5, 6 ಮತ್ತು 7
ಎಕ್ಸ್‌ಆಕ್ಸ್	: 6 ಮತ್ತು 7

ಟಿಪ್‌ಸ್ಟರ್ ಪಿಜಿಸಿ

ಶರಣು ಶರಣಾರ್ಥಿ

ಎರಡನೇ ವರ್ಷದ ಪುಣ್ಯಸ್ಮರಣೆ



ಕಾಯಕವೇ ಕೈಲಾಸ

ಜನನ : 09.03.1963

ಮರಣ : 03.08.2020

ಎಂ.ನಿರಂಜನಮೂರ್ತಿ ಡಿ.ಫಾರ್ಮ

ಮಾಲೀಕರು, ಶರತ್ ಮೆಡಿಕಲ್ಸ್, ಶಾರದಾದೇವಿನಗರ, ಮೈಸೂರು

ನೀವು ನಮ್ಮನ್ನಗಲಿ ವರುಷ ಎರಡಾದರೂ
ನಿಮ್ಮದು ಮರೆಯಲಾಗದ ವ್ಯಕ್ತಿತ್ವ...
ನಮಗೆ ನಿಮ್ಮನ್ನು ಅನುಸರಿಸುವ ಮಾರ್ಗವ ನಮ್ಮಗಿತ್ತು
ನಮ್ಮನ್ನು ಹರಸಿ,
ಸದಾ ನಿಮ್ಮ ಸ್ಮರಣೆಯಲ್ಲಿ ಕುಟುಂಬವರ್ಗ

ಇಂತಿ

ಪತ್ನಿ ಸುಜಾತಾ ಎಂ ನಿರಂಜನಮೂರ್ತಿ, ಮಕ್ಕಳಾದ ಡಾ.ಎನ್.ಶರತ್, ಎನ್.ತೇಜಸ್, ಅತ್ತೆ ಶಿವನಂಜಮ್ಮ, ಬಾಮೈದುನರಾದ ಡಾ.ಪಿ.ನಂದೀಶ್‌ಕುಮಾರ್, ಎ.ಪಿ.ವಿರೂಪಾಕ್ಷ ಹಾಗೂ ಅಪಾರ ಬಂಧು ಮಿತ್ರರು

CHANGE OF NAME

I, Praveen Kumar. C, residing at No. 98, MIG-2, Group 1 KHB Colony, Hootagalli, Belavadi, Mysore-570 018, have changed my daughter's name from Lavanya. P. to Liyanka Shetty, on my own free will in front of Notary K.B. Nagesha on 2.8.2022.

Sd/- Praveen Kumar. C

ಎರಡನೇ ವರ್ಷದ ಸವಿನೆನಪು



ಶ್ರೀ ಎನ್. ರಾಜೇಂದ್ರ

(ಲೇಟ್ ನಿಂಗಯ್ಯನವರ ಮಗ)

ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ನೀವು ತೋರಿಸಿಕೊಟ್ಟ ದಾರಿಯಲ್ಲಿ ನಡೆಯುತ್ತಿರುವ ಹಾಗೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ಧರ್ಮಪತ್ನಿ ಜಯಶ್ರೀ ಮತ್ತು ಮಕ್ಕಳು, ಎನ್. ರವಿಗೌಡರು ಮತ್ತು ಸಹೋದರರು ಹಾಗೂ ಲೇಟ್ ಯಜಮಾನ್ ಮರವೇಗೌಡರು ಮತ್ತು ನಿಂಗಯ್ಯ ಕುಟುಂಬವರ್ಗದವರು, ಕೆ.ಜಿ.ಕೊಪ್ಪಲು, ಮೈಸೂರು